## ಅಧ್ಯಾಯ 6

# ಸತ್ತವರಾಗಿದ್ದೇವು, ಈಗ ಜೀವಿಸುತ್ತೇವೆ

ನಾವು ಅಭ್ಯಾಸದ ಒಂದು ಹೊಸ ವಿಷಯವನ್ನು ಆರಂಭಿಸುತ್ತಿದ್ದೇವೆ. ನಾವು "ಸಾಯಬೇಕೆಂಬ ನಿರ್ಣಯ" ದ ಬಗ್ಗೆ ಅಭ್ಯಾಸಿಸಿದೆವು ಮತ್ತು ಎಲ್ಲರೂ ಪಾಪಮಾಡಿದವರಾಗಿದ್ದು ದೇವರ ನೀತಿಯ ಅಗತ್ಯತೆಯಲ್ಲಿದ್ದಾರೆಂಬದನ್ನು ಕಲಿತೆವು (1:18 -3:20). ಅದಾದ ನಂತರದ ವಿಭಾಗದಲ್ಲಿ, ನಾವು ಅದನ್ನು "ನೀತಿನಿರ್ಣಯ" ಎಂದು ಕರೆದೆವು, ಅದರಲ್ಲಿ ಪೌಲನು ಜನರನ್ನು ನೀತಿವಂತರೆಂದು ಎಣಿಸುವದಕ್ಕೆ ದೇವರು ಏರ್ಪಡಿಸಿದ ವ್ಯವಸ್ಥೆಯ ಬಗ್ಗೆ ಮಾತಾಡಿದನು (3:21-5:21). ಈಗ ನಾವು "ಶುದ್ಧೀಕರಣ" ವಿಭಾಗಕ್ಕೆ ಸಾಗಲು ಸಿದ್ಧರಾಗಿರುತ್ತೇವೆ (6:1-7:25).

ಖಂಡಿತವಾಗಿಯೂ, ಪೌಲನು ರೋಮಾಪುರ ಪತ್ರಿಕೆಯನ್ನು ಹೇಳಿ ಬರೆಯಿಸುವಾಗ ಅವನ ಬಳಿಯಲ್ಲಿ ಯಾವದೇ ರೂಪರೇಖೆ ಇರಲಿಲ್ಲ. ಪತ್ರಿಕೆಯಲ್ಲಿ ಯಾವದೇ ವಿಭಾಗವನ್ನೂ ಹಠಾತ್ತಾಗಿ ಸೇರ್ಪಡೆಗೊಳಿಸಿರುವದಿಲ್ಲ. ಆತನು ಒಂದು ವಿಚಾರದಿಂದ ಮತ್ತೊಂದು ವಿಚಾರಕ್ಕೆ ಸಾಗುತ್ತಾನೆ, ಕೆಲವು ಸಾರಿ ಹೊಸ ವಿಭಾಗವನ್ನು ಆರಂಭಿಸುವದಕ್ಕೆ ಮುಂಚೆ ಪುನಃ ಮುಂಚಿನ ವಿಚಾರಕ್ಕೆ ಬರುತ್ತಿದ್ದನು. ಈ ಕಾರಣದಿಂದ, ವಿಭಾಗಗಳಲ್ಲಿ ವಿಚಾರಗಳು ಒಂದರಮೇಲೊಂದು ಮುಚ್ಚಿರುವದನ್ನು ನೋಡುತ್ತೇವೆ. ಹಾಗಿದ್ದರೂ, ಪತ್ರಿಕೆಯ ವಿವಿಧ ಭಾಗಗಳಲ್ಲಿ ಪೌಲನು ಒತ್ತುಕೊಡುವ ವಿಷಯಗಳನ್ನು ಗಮನಿಸುವದು ಪ್ರಯೋಜನಕರವಾಗಿರುತ್ತದೆ.

ನಾವು ಅಧ್ಯಾಯ 6 ಮತ್ತು 7ನ್ನು "ಶುದ್ಧೀಕರಣ" ದ ಕುರಿತು ಪೌಲನ ಉಪದೇಶ ಎಂಬದಾಗಿ ಹೆಸರಿಸಿದ್ದೇವೆ. NASB ಯಲ್ಲಿ, ಆ ಅಧ್ಯಾಯಗಳಲ್ಲಿನ ಎರಡು ವಚನಗಳಲ್ಲಿ "ಪರಿಶುದ್ಧರಾಗುವಿಕೆ" ಎಂಬ ಪದವು ಕಾಣಿಸಿಕೊಳ್ಳುತ್ತದೆ:

> . . . ಅಧರ್ಮಮಾಡುವದಕ್ಕಾಗಿ ನಿಮ್ಮ ಅಂಗಗಳನ್ನು ಬಂಡುತನಕ್ಕೂ ಅಧರ್ಮಕ್ಕೂ ದಾಸರನ್ನಾಗಿ ಒಪ್ಪಿಸಿ ಕೊಟ್ಟಿದ್ದಂತೆಯೇ ಈಗ *ಪರಿಶುದ್ಧರಾಗುವದಕ್ಕಾಗಿ* ನಿಮ್ಮ ಅಂಗಗಳನ್ನು ನೀತಿಗೆ ದಾಸರನ್ನಾಗಿ ಒಪ್ಪಿಸಿಕೊಡಿರಿ (6:19; ಒತ್ತಿ ಹೇಳಿದ್ದು ನನ್ನದು).

ಈಗಲಾದರೋ ನೀವು ಪಾಪದಿಂದ ಬಿಡುಗಡೆಯನ್ನು ಹೊಂದಿ ದೇವರಿಗೆ

ದಾಸರಾದದರಿಂದ *ಪರಿಶುದ್ಧರಾಗುವದೇ* ನಿಮಗೆ ಫಲ; ಕಡೆಗೆ ದೊರೆಯುವಂಥದು ನಿತ್ಯಜೀವ (6:22; ಒತ್ತಿ ಹೇಳಿದ್ದು ನನ್ನದು).

"ಪರಿಶುದ್ಧರಾಗುವಿಕೆ" (ಶುದ್ಧೀಕರಣ) ಎಂಬುದು ಇಂದು ಸಾಮಾನ್ಯವಾದ ಬಳಕೆಯಲ್ಲಿರುವ ಪದವಲ್ಲ. ಅದು ἁγιασμός (*hagiasmos*) ಎಂಬದರ ಅನುವಾದವಾಗಿದೆ, ἅγιος (*hagios*) ಎಂಬ ಪದದಿಂದ ಬಂದದ್ದು. ಈ ಪದವನ್ನು "ಶುದ್ಧೀಕರಣಗೊಂಡ" ಅಥವಾ "ಪರಿಶುದ್ಧ" ಎಂದು ಅನುವಾದಿಸಬಹುದು. 6:19, 22 ರಲ್ಲಿ, "ಶುದ್ಧೀಕರಣ" ಎಂಬದರ ಬದಲಿಗೆ ಕೆಲವು ತರ್ಜುಮೆಗಳಲ್ಲಿ "ಪರಿಶುದ್ಧತೆ" ಎಂದಿರುತ್ತದೆ (ನೋಡಿರಿ KJV; NKJV; NIV).

ವಿಗ್ರಹಾರಾಧನೆಯ ಧರ್ಮಗಳಲ್ಲಿ, *hagios* ಎಂಬದನ್ನು "ದೇವರುಗಳಿಗೆ" ಸಮರ್ಪಿಸಿಲ್ಪಟ್ಟದ್ದನ್ನು ಸೂಚಿಸುವದಕ್ಕೆ ಉಪಯೋಗಿಸಲಾಗುತ್ತಿತ್ತು. ಅದು ಮುಂದೆ ಸಾಮಾನ್ಯ ಅರ್ಥವನ್ನು ಪಡೆದುಕೊಂಡಿತು: "ಪ್ರತ್ಯೇಕಿಸಲ್ಪಟ್ಟದ್ದು ಅಥವಾ ಪ್ರತಿಷ್ಠೀಸಲ್ಪಟ್ಟದ್ದು." ಕ್ರೈಸ್ತರಿಗೆ ಅನ್ವಯಿಸುವಾಗ, ಅದು ದೇವರಿಂದ ಆತನ ಪವಿತ್ರ ಉದ್ದೇಶಕ್ಕೋಸ್ಕರ "ಪ್ರತ್ಯೇಕಿಸಲ್ಪಡುವದ" ನ್ನು ಸೂಚಿಸುತ್ತದೆ. ಹೀಗೆ, ರೋಮಾ 6:19, 22 ರಲ್ಲಿ, CJB ಯು "ಪವಿತ್ರಗೊಳಿಸಲ್ಪಟ್ಟು ದೇವರಿಗೆ ಪ್ರತ್ಯೇಕಿಸಲ್ಪಟ್ಟವರು." ಎಂದು ಅನುವಾದಿಸಿರುತ್ತದೆ.

"ಪರಿಶುದ್ಧಗೊಳಿಸುವಿಕೆ" (*hagiasmos*) ಎಂಬುದು ಹೊಸ ಒಡಂಬಡಿಕೆಯಲ್ಲಿ ಎರಡು ಪ್ರಾಥಮಿಕ ಅರ್ಥಗಳಲ್ಲಿ ಉಪಯೋಗಿಸಲ್ಪಟ್ಟಿದೆ. ಮೊದಲನೆಯದು, ಅದು ದೇವರು ನಮ್ಮನ್ನು ತನ್ನ ಮಕ್ಕಳನ್ನಾಗಿ ಮಾಡಿಕೊಳ್ಳುವದನ್ನು, ಲೋಕದಿಂದ ನಮ್ಮನ್ನು ಪ್ರತ್ಯೇಕಿಸಿಡುವದನ್ನು ಸೂಚಿಸುತ್ತದೆ (ನೋಡಿರಿ ಕೊಲೊಸ್ಸೆ 1:13, 14). ಹಾಗಾದರೆ ರಕ್ಷಿಸಲ್ಪಟ್ಟಿರುವ ಪ್ರತಿಯೊಬ್ಬನು "ಪರಿಶುದ್ಧಗೊಳಿಸಲ್ಪಟ್ಟವನು"; ಪ್ರತಿಯೊಬ್ಬನು ಒಬ್ಬ "ಪರಿಶುದ್ಧನು" (ನೋಡಿರಿ ರೋಮಾ 1:7; 1 ಕೊರಿಂಥ 1:2).

"ಶುದ್ಧೀಕರಣ" ಎಂಬ ಪದವು ಹೊಸ ಒಡಂಬಡಿಕೆಯಲ್ಲಿ ಇನ್ನೊಂದು ಅರ್ಥದಲ್ಲಿ ಸಹ ಉಪಯೋಗಿಸಲ್ಪಟ್ಟಿದೆ. ಅದು ರಕ್ಷಣೆ ಹೊಂದುವ ವೇಳೇಯಲ್ಲಿ ಜರುಗಿಸಲಾದ ಒಂದು ದೈವಿಕ ಪ್ರಕ್ರಿಯೆಯನ್ನು ಸೂಚಿಸುವದು ಮಾತ್ರವಲ್ಲದೆ, ಜೀವಿತಕಾಲವೆಲ್ಲಾ ಜರುಗುವಂಥ ಒಂದು ದೈನಂದಿನ ಪ್ರಕ್ರಿಯೆಯನ್ನು ಸಹ ಸೂಚಿಸುತ್ತದೆ. ಇಬ್ರಿಯ ಪುಸ್ತಕದ ಲೇಖಕನು ತನ್ನ ವಾಚಕರಿಗೆ ಬೇಡಿಕೊಂಡದ್ದೇನೆಂದರೆ "ಪರಿಶುದ್ಧತೆಯನ್ನು ಹೊಂದುವದಕ್ಕೂ ಪ್ರಯತ್ನ . . . ಪರಿಶುದ್ಧತೆಯಿಲ್ಲದೆ ಯಾವನೂ ಕರ್ತನನ್ನು ಕಾಣುವದಿಲ್ಲ" (ಇಬ್ರಿಯ 12:14). ಕ್ರೈಸ್ತರಾಗುವ ಸಂದರ್ಭದಲ್ಲಿ, ಪೌಲನ ವಾಚಕರು ದೇವರಿಂದ "ಪ್ರತ್ಯೇಕಿಸಲ್ಪಟ್ಟಿದ್ದರು." ಈಗ ಅವರು ಪ್ರತ್ಯೇಕಿಸಲ್ಪಟ್ಟ ವ್ಯಕ್ತಿಗಳಾಗಿ ಜೀವಿಸಬೇಕಾಗಿತ್ತು.

ನಾವು ಎರಡನೆಯ ಅರ್ಥದಲ್ಲಿಯೇ "ಪರಿಶುದ್ಧಗೊಳಿಸಲ್ಪಡುವಿಕೆ" ಎಂಬ ಪದವನ್ನು ಉಪಯೋಗಿಸುತ್ತಿದ್ದೇವೆ. Richard Rogers ಹೇಳಿದ್ದೇನೆಂದರೆ ನೀತಿವಂತರೆಂಬ ನಿರ್ಣಯವು ಸರಿಗೊಳಿಸಲ್ಪಡುವಿಕೆಯಾಗಿದ್ದರೆ, ಪರಿಶುದ್ಧಗೊಳಿಸಲ್ಪಡುವಿಕೆಯು ಸರಿಯಾಗಿ ಜೀವಿಸುವದಾಗಿದೆ.[1] R. C. Bell ಇದನ್ನು ಇನ್ನೊಂದು ರೀತಿಯಲ್ಲಿ ಹೇಳುತ್ತಾನೆ. ಆತನು ಹೇಳುವದೇನೆಂದರೆ ನೀತಿವಂತರೆಂಬ ನಿರ್ಣಯವು "ನಮಗಾಗಿ

ದೇವರು ಮಾಡುವ ಕ್ರಿಯೆ," ಅದೇ ವೇಳೆ ಪರಿಶುದ್ಧಗೊಳಿಸಲ್ಪಡುವಿಕೆಯು "ನಮ್ಮೊಳಗೆ ನಡೆಯುವ ದೇವರ ಕ್ರಿಯೆ" ಆಗಿರುತ್ತದೆ.[2]

ರೋಮಾ 6 ಮತ್ತು 7 ಅಧ್ಯಾಯಗಳು ಶುದ್ಧೀಕರಣದ ನಿಯಮವನ್ನು ಸ್ಥಾಪಿಸುತ್ತವೆ. ಈ ಅಧ್ಯಾಯವು ಶುದ್ಧೀಕರಣಗೊಳಿಸಲ್ಪಡುವ "ದಾರಿಯ" ಕಡೆಗೆ ಮುಖ್ಯ ಗಮನವನ್ನು ಹರಿಸುತ್ತದೆ: ಕ್ರೈಸ್ತರು ಏಕೆ ಪವಿತ್ರ ಹಾಗೂ ಪರಿಶುದ್ಧಗೊಂಡ ಜೀವಿತಗಳನ್ನು ಜೀವಿಸಬೇಕು. ಈ ಪತ್ರಿಕೆಯ ನಂತರದ ಭಾಗದಲ್ಲಿ, 12 ರಿಂದ 16 ಅಧ್ಯಾಯಗಳಲ್ಲಿ, ಪೌಲನು ಪರಿಶುದ್ಧತೆಯನ್ನು ಆಚರಿಸುವದರ ಕಡೆಗೆ ಮುಖ್ಯ ಗಮನವನ್ನು ಹರಿಸುತ್ತಾನೆ, ಒಬ್ಬ ಪರಿಶುದ್ಧಗೊಂಡ ವ್ಯಕ್ತಿಯು ಹೇಗೆ ಬದುಕುತ್ತಾನೆಂಬದಕ್ಕೆ ಪ್ರಾಯೋಗಿಕವಾದ ಉದಾಹರಣೆಗಳನ್ನು ನೀಡುತ್ತಾನೆ. ಪತ್ರಿಕೆಯ ಆ ಅಂತಿಮ ವಿಭಾಗವು ಈ ರೀತಿಯಲ್ಲಿ ಆರಂಭಗೊಳ್ಳುತ್ತದೆ: "ಆದದರಿಂದ ಸಹೋದರರೇ, ದೇವರ ಕನಿಕರವನ್ನು ನಿಮ್ಮ ನೆನಪಿಗೆ ತಂದು ನಿಮ್ಮನ್ನು ಬೇಡಿಕೊಳ್ಳುವದೇನೆಂದರೆ- ನೀವು ನಿಮ್ಮ ನಿಮ್ಮ ದೇಹಗಳನ್ನು ದೇವರಿಗೆ ಮೀಸಲಾಗಿಯೂ (ಪರಿಶುದ್ಧಗೊಂಡ) ಮೆಚ್ಚಿಗೆಯಾಗಿಯೂ ಇರುವ ಸಜೀವಯಜ್ಞವಾಗಿ ಅರ್ಪಿಸಿರಿ; ಇದೇ ನಿಮ್ಮ ವಿವೇಕಪೂರ್ವಕವಾದ ಆರಾಧನೆಯು" (12:1; ಒತ್ತಿ ಹೇಳಿದ್ದು ನನ್ನದು).

## ಕೃಪೆ-ಪಾಪ ಮಾಡಲು ಅನುಮತಿಯಲ್ಲ (6:1-14)

### ದೀಕ್ಷಾಸ್ನಾನದಲ್ಲಿ ಪಾಪಕ್ಕಾಗಿ ಸಾಯುವದು (6:1-7)

**1ಹಾಗಾದರೆ ಏನು ಹೇಳೋಣ? ದೇವರ ಕೃಪೆಯು ಹೆಚ್ಚಲಿ ಎಂದು ನಾವು ಪಾಪದಲ್ಲಿ
ಇನ್ನೂ ಇರಬೇಕೋ? 2ಎಂದಿಗೂ ಇರಬಾರದು. ಪಾಪದ ಪಾಲಿಗೆ ಸತ್ತವರಾದ ನಾವು ಇನ್ನೂ
ಅದರಲ್ಲೇ ಬದುಕುವದು ಹೇಗೆ? 3ಕ್ರಿಸ್ತ ಯೇಸುವಿನಲ್ಲಿ ಸೇರುವದಕ್ಕೆ ದೀಕ್ಷಾಸ್ನಾನ
ಮಾಡಿಸಿಕೊಂಡವರಾದ ನಾವೆಲ್ಲರು ಆತನ ಮರಣದಲ್ಲಿ ಪಾಲುಗಾರರಾಗುವದಕ್ಕೆ
ದೀಕ್ಷಾಸ್ನಾನ ಮಾಡಿಸಿಕೊಂಡೆವೆಂದು ನಿಮಗೆ ತಿಳಿಯದೋ? 4ಹೀಗಿರಲಾಗಿ ನಾವು
ದೀಕ್ಷಾಸ್ನಾನಮಾಡಿಸಿಕೊಂಡಾಗ ಆತನ ಮರಣದಲ್ಲಿ ಪಾಲುಗಾರರಾಗಿ ಆತನೊಂದಿಗೆ
ಹೂಣಲ್ಪಟ್ಟೆವು. ಆದದರಿಂದ ಕ್ರಿಸ್ತನು ಸತ್ತು ತಂದೆಯ ಮಹಿಮೆಯಿಂದ ಜೀವಿತನಾಗಿ
ಎಬ್ಬಿಸಲ್ಪಟ್ಟಂತೆಯೇ ನಾವು ಕೂಡ ಜೀವದಿಂದೆದ್ದು ಹೊಸಬರಾಗಿ ನಡಕೊಳ್ಳಬೇಕು.
5ಹೇಗಂದರೆ ನಾವು ಆತನ ಮರಣಕ್ಕೆ ಸದೃಶವಾದ ಮರಣವನ್ನು ಹೊಂದಿ ಆತನಲ್ಲಿ
ಐಕ್ಯವಾಗಿದ್ದರೆ ಆತನ ಪುನರುತ್ಥಾನಕ್ಕೆ ಸದೃಶವಾದ ಪುನರುತ್ಥಾನವನ್ನೂ ಹೊಂದಿ ಆತನಲ್ಲಿ
ಐಕ್ಯವಾಗುವೆವು. 6ಪಾಪಾಧೀನಸ್ವಭಾವವು ನಾಶವಾಗಿ ನಾವು ಇನ್ನೂ ಪಾಪದ
ವಶದಲ್ಲಿರದಂತೆ ನಮ್ಮ ಪೂರ್ವಸ್ವಭಾವವು ಕ್ರಿಸ್ತನ ಕೂಡ ಶಿಲುಬೆಗೆ ಹಾಕಲ್ಪಟ್ಟಿತೆಂದು
ತಿಳಿದಿದ್ದೇವೆ. 7ಸತ್ತವನು ಪಾಪದ ವಶದಿಂದ ಬಿಡುಗಡೆ ಹೊಂದಿದ್ದಾನಷ್ಟೆ.**

ರೋಮಾಪುರದವರಿಗೆ ಈ ಪತ್ರಿಕೆಯನ್ನು ಬರೆಯುವಲ್ಲಿ, ಪೌಲನು ಅನೇಕ ವೇಳೆ, ವಿಶೇಷವಾಗಿ ಯೆಹೂದ್ಯರಿಂದ ಆಕ್ಷೇಪಣೆಗಳನ್ನು ನಿರೀಕ್ಷಿಸಿದ್ದನು. ಈ ಅಧ್ಯಾಯದಲ್ಲಿ,

ಆತನು ಪುನಃ ಆಕ್ಷೇಪಣೆಗಳನ್ನು ನಿರೀಕ್ಷಿಸಿದನು, ಮತ್ತು ಆತನ "ಆಕ್ಷೇಪಣೆಗಾರರು" ಬಹುಶಃ ಯೆಹೂದಿ ಹಿನ್ನಲೆಯನ್ನು ಹೊಂದಿದ್ದರು (ನೋಡಿರಿ 6:15; 7:7)-ಆದರೆ ಆತನು ತನ್ನ ಹೇಳಿಕೆಗಳನ್ನು ದೀಕ್ಷಾಸ್ನಾನ ಹೊಂದಿದ್ದ ವಿಶ್ವಾಸಿಗಳನ್ನುದ್ದೇಶಿಸಿ ನುಡಿದನು (ನೋಡಿರಿ 6:3-11).

**ವಚನ 1.** ಅಧ್ಯಾಯವು ಒಂದು ಪ್ರಶ್ನೆಯೊಂದಿಗೆ ಆರಂಭಗೊಳ್ಳುತ್ತದೆ: **ಹಾಗಾದರೆ ಏನು ಹೇಳೋಣ?** ಬೇರೆ ಮಾತುಗಳಲ್ಲಿ ಹೇಳುವದಾದರೆ, "ಈ ಮುಂಚೆ ನಾವು ಹೇಳಿದ ಸಂಗತಿಗಳ ವಿಷಯದಲ್ಲಿ ನಾವು ಏನು ಹೇಳೋಣ?" ಆತನು ಆಗಷ್ಟೇ "ಪಾಪವು ಹೆಚ್ಚಿದಲ್ಲೇ ಕೃಪೆಯು ಎಷ್ಟೋ ಹೆಚ್ಚಾಗಿ ಪ್ರಬಲವಾಗುವದು" ಎಂದು ಹೇಳಿದ್ದನು (5:20). ಈಗ ಆತನು ಒಂದು ಪ್ರತ್ಯುತ್ತರವನ್ನು ಅಪೇಕ್ಷಿಸಿದನು: **ಕೃಪೆಯು ಹೆಚ್ಚಲಿ ಎಂದು ನಾವು ಪಾಪದಲ್ಲಿ ಇನ್ನೂ ಇರಬೇಕೋ?** ಈ ಪ್ರಶ್ನೆಯಲ್ಲಿ ಒಂದು ವಿಕೃತ ತರ್ಕವಿರುತ್ತದೆ: "ಪಾಪವು ಕೃಪೆಯನ್ನು ಹೆಚ್ಚಾಗುವಂತೆ ಮಾಡುವದರಿಂದ, ಹೆಚ್ಚು ಪಾಪವಿದ್ದರೆ ಹೆಚ್ಚು ಕೃಪೆ. ಮತ್ತು ಹೆಚ್ಚು ಕೃಪೆಯು ಒಳ್ಳೇದಾದ್ದರಿಂದ, ಹೆಚ್ಚು ಪಾಪವು ಸಹ ಒಳ್ಳೆಯದೇ ಆಗಿರಬೇಕಲ್ಲವೇ."

ಸ್ಪಷ್ಟವಾಗಿ ತೋರುವ ಹಾಗೆ, ಮೊದಲ ಶತಮಾನದಲ್ಲಿ ಈ ಮನೋಭಾವವು ಸಹಜವಾಗಿತ್ತು. ಯೂದನು "ಭಕ್ತಿಹೀನರೂ ನಮ್ಮ ದೇವರ ಕೃಪೆಯನ್ನು ನೆವಮಾಡಿಕೊಂಡು ನಾಚಿಕೆಗೆಟ್ಟ ಕೃತ್ಯಗಳನ್ನು ನಡಿಸುವವರು" ಎಂಬದಾಗಿ ಬರೆದನು (ಯೂದ 4; ನೋಡಿರಿ ಗಲಾತ್ಯ 5:13). Dietrich Bonhoeffer ಎಂಬವನು ದೇವರ ಕನಿಕರದ ಕಡೆಗೆ ಇರುವ ಚೆಲ್ಲಾಟದ ಮನೋಭಾವವನ್ನು ಬಣ್ಣಿಸುವದಕ್ಕೆ "ಅಗ್ಗವಾದ ಕೃಪೆ" (cheap grace) ಎಂಬ ಪದವನ್ನು ಹುಟ್ಟುಹಾಕಿದನು.[3] ಆತನು ಬರೆದದ್ದೇನೆಂದರೆ, ಕೃಪೆಯು ಅಗ್ಗವಾಗಿರುವ ಬದಲಿಗೆ ಅದು ದುಬಾರಿಯಾಗಿರುತ್ತದೆ: "ಅದು ಹಿಂಬಾಲಿಸುವಂತೆ ನಮ್ಮನ್ನು ಕರೆಯುವದರಿಂದ ದುಬಾರಿಯಾಗಿರುತ್ತದೆ," ಆದರೆ ಅದು "ಕೃಪೆಯಾಗಿಯೇ ಉಳಿಯುತ್ತದೆ ಯಾಕೆಂದರೆ ಅದು ಯೇಸು ಕ್ರಿಸ್ತನನ್ನು ಹಿಂಬಾಲಿಸುವಂತೆ ನಮ್ಮನ್ನು ಕರೆಯುತ್ತದೆ."[4]

ಪೌಲನ "ಆಕ್ಷೇಪಣೆಗಾರನು" ಭಕ್ತಹೀನ ಜೀವನಶೈಲಿಯನ್ನು ಸಮರ್ಥಿಸಿಕೊಳ್ಳುವದಕ್ಕೆ ಪ್ರಯತ್ನಿಸುತ್ತಿದ್ದನೋ? ಬಹುಶಃ ಇರಬಹುದು-ಆದರೆ ಅಂಥ ತರ್ಕವನ್ನು ಅಪೊಸ್ತಲನಿಗೆ ಕಳಂಕ ತರುವ ಪ್ರಯತ್ನಕ್ಕಾಗಿ ಮಾಡಿರಬಹುದಾದ ಸಾಧ್ಯತೆಯಿರುತ್ತದೆ. ಅಧ್ಯಾಯ 3ರಲ್ಲಿ, ನಾವು ಪೌಲನಿಂದ ಈ ಆಸ್ಫೋಟದ ನುಡಿಗಳನ್ನು ನೋಡಿದೆವು: "ಮೇಲು ಬರುವಂತೆ ಕೇಡು ಮಾಡೋಣ ಎಂದು ಯಾಕೆ ಹೇಳಬಾರದು? ಕೆಲವರು ನಮ್ಮ ಕುರಿತು— ಇವರು ಹೀಗೆ ಬೋಧನೆ ಮಾಡುವವರೆಂದು ದೂಷಿಸಿ ಹೇಳುತ್ತಾರಲ್ಲಾ" (3:8). ಕೆಲವರಂತೂ ಕೃಪೆಯ ಕುರಿತ ಪೌಲನ ಉಪದೇಶವು ಜನರನ್ನು ಪಾಪಮಾಡುವಂತೆ ಪ್ರೋತ್ಸಾಹಿಸುವದಾಗಿದೆ ಎಂದು ಸಹ ವಾದಿಸಿದರು. ಅಂಥ ತರ್ಕಗಳನ್ನು ಮಾಡುವ ಮೂಲಕ, ಅವರು ಪೌಲನೊಬ್ಬ ತಪ್ಪು ಬೋಧಕನಿರಬೇಕೆಂಬ ತೀರ್ಮಾನಕ್ಕೆ ಬಂದರು.

**ವಚನ 2.** "ಕೃಪೆಯು ಹೆಚ್ಚಲಿ ಎಂದು ನಾವು ಇನ್ನೂ ಪಾಪದಲ್ಲಿ ಇರಬೇಕೋ" *ಎಂಬ* ಪ್ರಶ್ನೆಗೆ ಪೌಲನು ಯಾವ ರೀತಿ ಪ್ರತಿಕ್ರಿಯಿಸಿದನು (6:1)? ಅಂಥ ಪ್ರಶ್ನೆಯಿಂದಾಗುವ ಪರಿಣಾಮಗಳು ಆತನಿಗೆ ಆಘಾತವುಂಟು ಮಾಡಿತ್ತು: "**ಎಂದಿಗೂ ಇರಬಾರದು!**" Phillips

ಬೈಬಲಿನಲ್ಲಿ “ಎಂಥ ಭೀಕರ ಆಲೋಚನೆ!” ಎಂದಿರುತ್ತದೆ.

ಕ್ರೈಸ್ತರು ಪಾಪದಿಂದ ದೂರವಿರುವದಕ್ಕೆ ಪೌಲನು ಹಲವಾರು ಕಾರಣಗಳನ್ನು ಮುಂದಿಟ್ಟನು. ಮೊದಲನೆಯದೆಂದರೆ, ಕ್ರೈಸ್ತನು “ಪಾಪದ ಪಾಲಿಗೆ ಸತ್ತವನು”: **ಪಾಪದ ಪಾಲಿಗೆ ಸತ್ತವರಾದ ನಾವು ಇನ್ನೂ ಅದರಲ್ಲೇ ಬದುಕುವದು ಹೇಗೆ?** “ಸತ್ತವರಾದ” (θάνατος, *thanatos*) ಎಂಬ ಪದದ ಅರ್ಥವನ್ನು ಈಗಾಗಲೇ ಚರ್ಚಿಸಲಾಗಿರುತ್ತದೆ (5:12ರ ಮೇಲಿನ ವ್ಯಾಖ್ಯಾನಗಳನ್ನು ನೋಡಿರಿ). ರೋಮಾ 6ರಲ್ಲಿ, ಪೌಲನು ಆ ಪದಕ್ಕೆ ವಾಕ್ಯಾಲಂಕಾರ ಪದಪ್ರಯೋಗವನ್ನು ನೀಡಿ ಶಾರೀರಿಕ ಮರಣವನ್ನು ಕ್ರೈಸ್ತರಾಗಿ ಮಾರ್ಪಡುವದಕ್ಕೆ ಹೋಲಿಸುತ್ತಾನೆ.

ಪಾಪದ ಪಾಲಿಗೆ ಸಾಯುವದನ್ನು ದೃಷ್ಟಾಂತಗೊಳಿಸುವದಕ್ಕೆ, ನಾವು ಒಂದು ಸತ್ತ ಪ್ರಾಣಿಯ ಬಗ್ಗೆ ಪರಿಗಣಿಸೋಣ. ನಾವು ಆ ಪ್ರಾಣಿಗೆ ಅಚ್ಚುಮೆಚ್ಚಿನ ಆಹಾರವನ್ನು ಅದರ ಮೂಗಿನ ಹತ್ತಿರ ಇಡಬಹುದು, ಮತ್ತು ಅದು ಯಾವ ಪ್ರತಿಕ್ರಿಯೆಯನ್ನು ನೀಡುವದಿಲ್ಲ. ಅದಂತೂ ಸತ್ತಿರುತ್ತದಲ್ಲವೇ. ಅದೇ ರೀತಿಯಲ್ಲಿಯೇ, ಪೌಲನು ಹೇಳುತ್ತಿರುವದೇನೆಂದರೆ, ಒಂದು ಅರ್ಥದಲ್ಲಿ ನಾವು ಸತ್ತವರಾಗಿದ್ದೇವೆ ಮತ್ತು ಆ ಕಾರಣದಿಂದ ಪಾಪವು ನಮ್ಮನ್ನು ಶೋಧಿಸಿ ದೇವರಿಂದ ದೂರ ಮಾಡುವದಕ್ಕೆ ಪ್ರಯತ್ನಿಸುವಾಗ ನಾವು ಯಾವ ಪ್ರತಿಕ್ರಿಯೆಯನ್ನೂ ನೀಡಬಾರದು.

ಎಲ್ಲಾ ಸಾದೃಶ್ಯಗಳಂತೆಯೇ, ಇದನ್ನು ಸಹ ಬಹಳ ದೂರಕ್ಕೆ ತಳ್ಳಿಕೊಂಡು ಹೋಗಬಾರದು. ಒಂದು ಸತ್ತ ಪ್ರಾಣಿಯು ಪ್ರಚೋದನೆಗೆ ಸ್ಪಂದಿಸುವದಕ್ಕೆ ಅಸಮರ್ಥವಾಗಿರುತ್ತದೆ, ಆದರೆ ಕ್ರೈಸ್ತರು ಶೋಧನೆಗಳಿಗೆ ಸ್ಪಂದಿಸುವದಕ್ಕೆ ಅಸಮರ್ಥನೆಂದು ಹೇಳುವದು ಪೌಲನ ಉದ್ದೇಶವಾಗಿರಲಿಲ್ಲ. ಅದಕ್ಕೆ ವಿರುದ್ಧವಾಗಿ, ಆತನು ತನ್ನ ಕ್ರೈಸ್ತ ವಾಚಕರಿಗೆ, ಅವರು ಪಾಪದ ಪಾಲಿಗೆ ಸತ್ತವರಾದ ಕಾರಣ, ಸಾಯತಕ್ಕ ತಮ್ಮ ದೇಹದ ಮೇಲೆ ಪಾಪವನ್ನು ಆಳಗೊಳಿಸಿ ದೇಹದ ದುರಾಶೆಗಳಿಗೆ ಒಳಪಡಬಾರದು ಎಂದು ಹೇಳಿದನು. ಅವರು ತಮ್ಮ ದೇಹದ ಅಂಗಗಳನ್ನು ದುಷ್ಟತ್ವ ನಡಿಸುವ ಸಾಧನಗಳಾಗಿ ಒಪ್ಪಿಸಿಕೊಡಬಾರದು (6:11-13). ಪರಿಸ್ಥಿತಿಯು ಈ ರೀತಿಯಲ್ಲಿ ಹೇಳಲ್ಪಟ್ಟಿದೆ: “ನಾವು ಪಾಪದ ಪಾಲಿಗೆ ಸಾಯುತ್ತೇವೆ, ಆದರೆ ಪಾಪವು ನಮ್ಮ ಪಾಲಿಗೆ ಸಾಯುವದಿಲ್ಲ.”

ಕ್ರೈಸ್ತರು ಪಾಪ ಮಾಡಲಾರರು ಎಂದು ಪೌಲನ ತಾತ್ಪರ್ಯವಾಗಿರಲಿಲ್ಲ, ಆದರೆ ಅವರು ಪಾಪ ಮಾಡಬಾರದು ಎಂದಾಗಿತ್ತು. ಒಂದು ಪಾಪಭರಿತ ಜೀವನಶೈಲಿಯು ಪಾಪದ ಪಾಲಿಗೆ ಸತ್ತ ಹೊಸ ಸ್ಥಿತಿಗೆ ಅಸಮಂಜಸವಾಗಿರುತ್ತದೆ. Jim Hylton ಬರೆದದ್ದೇನೆಂದರೆ “ಅನೇಕ ಕ್ರೈಸ್ತರು [ಪಾಪದ ಪಾಲಿಗೆ] ಸತ್ತಿದ್ದಾರೆ ಮತ್ತು ಅದನ್ನು ಅರಿಯದವರಾಗಿದ್ದಾರೆ ಮತ್ತು ಆ ಕಾರಣದಿಂದ . . . ಅವರು ಅದನ್ನು ತೋರಿಸುವದಿಲ್ಲ.”[5]

ಪೌಲನು ಈ ಸನ್ನಿವೇಶದಲ್ಲಿ ಏಕೆ ಮರಣದ ಸಾದೃಶವನ್ನು ಉಪಯೋಗಿಸಿದನು? ಆತನ ಪ್ರಾಥಮಿಕ ಉದ್ದೇಶವು ಸಂಭಾಷಣೆಯನ್ನು ಯೇಸುವಿನ ಶಿಲುಬೆಯೊಂದಿಗೆ ಜೋಡಿಸುವದಾಗಿತ್ತು. ಕ್ರಿಸ್ತನು ಪಾಪಿಗಳಿಗೋಸ್ಕರ ಪ್ರಾಣಕೊಟ್ಟ ಹಾಗೆಯೇ (5:6-8), ನಾವು ಸಹ ಪಾಪದ ಪಾಲಿಗೆ ಸಾಯಬೇಕು. ಅಲ್ಲದೆ ಪೌಲನು ಕೃಪೆಯಿಂದ

ರಕ್ಷಿಸಲ್ಪಟ್ಟವನೊಬ್ಬನಲ್ಲಿ ಆಗುವ ನಾಟಕೀಯ ಬದಲಾವಣೆಯನ್ನು ಎತ್ತಿ ತೋರಿಸುವದಕ್ಕಾಗಿ ಈ ಸದೃಶ್ಯವನ್ನು ಉಪಯೋಗಿಸಿರಬಹುದಾಗಿದೆ. ಶಾರೀರಿಕ ಮರಣದಿಂದಾಗುವ ಬದಲಾವಣೆಗಿಂತಲೂ ಹೆಚ್ಚು ನಾಟಕೀಯ ಹಾಗೂ ಸಂಪೂರ್ಣವಾದ ಬದಲಾವಣೆಯೊಂದನ್ನು ಯೋಚಿಸುವದು ಕಷ್ಟಕರವಾಗಿರು ತ್ತದೆ.

**ವಚನ 3.** ಅದು ನಮ್ಮನ್ನು ಒಂದು ಪ್ರಾಮುಖ್ಯವಾದ ಪ್ರಶ್ನೆಯೊಂದಕ್ಕೆ ಕರೆತರುತ್ತದೆ: "ನಾವು ಪಾಪದ ಪಾಲಿಗೆ ಹೇಗೆ ಮತ್ತು ಯಾವಾಗ ಸಾಯುತ್ತೇವೆ?" ಅನೇಕ ಕಾರಣಾಂಶಗಳನ್ನು ಇಲ್ಲಿ ಉಲ್ಲೇಖಿಸಬಹುದು. ನಾವು ನಮ್ಮ ಪಾಪಗಳು ಯೇಸುವನ್ನು ಶಿಲುಬೆಗೆ ಜಡಿದವು ಎಂಬದನ್ನು ಗ್ರಹಿಸಿಕೊಳ್ಳುವಾಗ ಪಾಪದ ಕಡೆಗೆ ನಮ್ಮ ಮನೋಭಾವವು ಬದಲಾಯಿತೆಂಬ ಬಗ್ಗೆ ಮಾತಾಡಬಹುದು (ನೋಡಿರಿ 1 ಕೊರಿಂಥ 15:3). ನಾವು ನಂಬಿಕೆ ಮತ್ತು ಪಶ್ಚಾತ್ತಾಪಪಡುವಿಕೆಯು ಹೇಗೆ ಒಂದು ಭಕ್ತಿಜೀವನವನ್ನು ನಡಿಸುವ ಬಯಕೆಯನ್ನು ಹುಟ್ಟಿಸಬಲ್ಲದೆಂಬ ಬಗ್ಗೆ ಚರ್ಚಿಸಬಹುದು (ಅಪೊಸ್ತ*ಲರ*ಕೃತ್ಯಗಳು 26:20). "ದೇಹದ ದುರಭ್ಯಾಸಗಳನ್ನು ನಾಶಮಾಡುವದಕ್ಕೆ" ದೇವರಾತ್ಮನು ಹೇಗೆ ನಮಗೆ ಸಹಾಯ ಮಾಡುತ್ತಾನೆಂಬದನ್ನು ನಾವು ಖಂಡಿತವಾಗಿಯೂ ಹೇಳಬಹುದು ಮತ್ತು ಹೇಳಲೇ ಬೇಕು (8:13).

ಹೇಗೂ, ಪೌಲನ ಮನಸ್ಸಿನಲ್ಲಿ ಒಂದು ನಿರ್ದಿಷ್ಟವಾದ ಸಂಗತಿಯಿತ್ತು. "ನಾವು ಪಾಪದ ಪಾಲಿಗೆ ಸತ್ತೆವು" ಎಂಬದನ್ನು ಹೇಳಿದಾಗ ಆತನ ತಾತ್ಪರ್ಯವೇನೆಂಬ ಬಗ್ಗೆ ಯಾವ ಸಂಶಯವೂ ಇರದಂತೆ ಜಾಗ್ರತೆವಹಿಸಿದನು. ಆತನು ತಕ್ಷಣವೇ ಆರಂಭದಲ್ಲಿ ಶಿಲುಬೆಗೆ ನಾವು ಮಾಡಿದ ಸ್ಪಂದನೆಯಿಂದಾದ ಪರಾಕಾಷ್ಠೆಯೆಡೆಗೆ ಸಾಗುತ್ತಾನೆ: ದೀಕ್ಷಾಸ್ನಾನ. John R. W. Stott ಗಮನಕ್ಕೆ ತಂದದ್ದೇನೆಂದರೆ "ನಾವು ಪಾಪದ ಪಾಲಿಗೆ ಸತ್ತಿರುವ ರೀತಿಯು ಹೇಗಂದರೆ ನಮ್ಮ ದೀಕ್ಷಾಸ್ನಾನವು ನಮ್ಮನ್ನು ಆತನ ಮರಣದಲ್ಲಿ ಐಕ್ಯಗೊಳಿಸಿರುತ್ತದೆ."[6]

ಈ ಪತ್ರಿಕೆಯಲ್ಲಿ, "ದೀಕ್ಷಾಸ್ನಾನ" ಮತ್ತು "ದೀಕ್ಷಾಸ್ನಾನಮಾಡಿಸಿಕೊಂಡಾಗ" ಎಂಬ ಪದಗಳು ಕೇವಲ 6:3, 4 ರಲ್ಲಿ ಮಾತ್ರವೇ ಕಾಣಿಸಿಕೊಳ್ಳುತ್ತವೆ. "ದೀಕ್ಷಾಸ್ನಾನ" (baptism) ಎಂಬುದು ಗ್ರೀಕ್ ನ βάπτισμα (*baptisma*) ಎಂಬ ಪದದಿಂದ ಬಂದದ್ದು, "ದೀಕ್ಷಾಸ್ನಾನ ಮಾಡಿಸಿಕೊಂಡಾಗ" ಎಂಬುದು βαπτίζω (*baptizō*) ಎಂಬ ಪದದಿಂದ ಬಂದಿದೆ. ಈ ಪ್ರತಿಯೊಂದು ಪದದ ಮೂಲವು βάπτω (*baptō*), ಅದರರ್ಥವು "ಮುಳುಗಿಸು" ಎಂಬದು. *Baptizō* ಅಂದರೆ "ಮುಳುಗಿಸು, ಅದ್ದು," ಮತ್ತು *baptisma* ಎಂದರೆ "ಮುಳುಗಿಸುವಿಕೆ."[7] ಆದಿ ಸಭೆಯಲ್ಲಿ ದೀಕ್ಷಾಸ್ನಾನದ ರೀತಿಯು ಮುಳುಗಿಸುವಿಕೆ ಮೂಲಕ ಕೊಡಲಾಗುತ್ತಿತ್ತೆಂಬದನ್ನು ಇತಿಹಾಸಕಾರರು ಒಪ್ಪಿಕೊಳ್ಳುತ್ತಾರೆ. ಆದುದರಿಂದ, CJB ಯು 6:3, 4 ವಚನಗಳನ್ನು ಹೀಗೆ ಅನುವಾದಿಸುತ್ತದೆ: "ನಾವು ಮೆಸ್ಸೀಯನಲ್ಲಿ [ಯೇಸು] ಸೇರುವದಕ್ಕೆ *ಮುಳುಗಿಸಲ್ಪಟ್ಟಾಗ* ಆತನ ಮರಣದಲ್ಲಿ *ಮುಳುಗಿಸಲ್ಪಟ್ಟೆ ವೆಂದು* ನಿಮಗೆ ತಿಳಿಯದೋ?" (ಒತ್ತಿ ಹೇಳಿದ್ದು ನನ್ನದು).

ದೀಕ್ಷಾಸ್ನಾನದ ಮಹತ್ವದ ಕುರಿತು ಇದೊಂದು ಶಕ್ತಿಯುತವಾದ ವಾಕ್ಯಭಾಗವಾಗಿರುವದರಿಂದ, ಕೆಲವೇ ಕೆಲವು ಲೇಖಕರು ಈ ವಚನವನ್ನು "ಆತ್ಮೀಕ"

ದೀಕ್ಷಾಸ್ನಾನ ಸೂಚಿಸುವ ರೀತಿಯಲ್ಲಿ ಅಥವಾ ಬಹುಶಃ "ಆತ್ಮನಲ್ಲಿ ದೀಕ್ಷಾಸ್ನಾನ" ಎಂದು ಸೂಚಿಸುವ ರೀತಿಯಲ್ಲಿ ವಿವರಿಸುವದಕ್ಕೆ ಪ್ರಯತ್ನಿಸುತ್ತಾರೆ. ಹಾಗಿದ್ದರೂ, ಪೌಲನ ಮನಸ್ಸಿನಲ್ಲಿ *ನೀರಿನ* ದೀಕ್ಷಾಸ್ನಾನ, ಮಹಾ ಆಜ್ಞೆಯಲ್ಲಿ ಹೇಳಲಾದ ದೀಕ್ಷಾಸ್ನಾನ ಇತ್ತೆಂಬದನ್ನು ಹೆಸರಾಂತ ವೇದಪಂಡಿತರು ಒಪ್ಪಿಕೊಳ್ಳುತ್ತಾರೆ. ಉದಾಹರಣೆಗೆ, Douglas J. Moo ಬರೆದದ್ದೇನೆಂದರೆ, "ಪೌಲನು ಸಾಮಾನ್ಯವಾಗಿ ಕ್ರೈಸ್ತ ದೀಕ್ಷಾಸ್ನಾನವನ್ನು ಸೂಚಿಸುವದಕ್ಕೆ *baptizō* ಎಂಬ ಕ್ರಿಯಾಪದವನ್ನು ಉಪಯೋಗಿಸುತ್ತಾನೆ . . . ಅಷ್ಟುಮಾತ್ರವಲ್ಲದೆ, 4ನೇ ವಚನದಲ್ಲಿರುವ 'baptism' (Gk. *baptisma*) ಎಂಬ ನಾಮಪದವು ಹೆಚ್ಚುಕಡಿಮೆ ಯಾವಾಗಲೂ ಇದೇ ಅರ್ಥವನ್ನು ಹೊಂದಿರುತ್ತದೆ."[8] Stott ಇದಕ್ಕೆ ಸೇರಿಸಿ ಹೇಳಿದ್ದೇನೆಂದರೆ "'ದೀಕ್ಷಾಸ್ನಾನ' ಮತ್ತು ದೀಕ್ಷಾಸ್ನಾನ ಮಾಡಿಸಿಕೊಳ್ಳುವ' ಎಂಬ ಪದಗಳು ಕಾಣಿಸಿಕೊಳ್ಳುವಾಗಲೆಲ್ಲಾ, ಅದು ಯಾವದರಲ್ಲಿ ಕೊಡಲಾಗುತ್ತದೆಂಬದು ಹೇಳಲ್ಪಡದೆಯೇ, ಅದು ನೀರಿನ ದೀಕ್ಷಾಸ್ನಾನ ಸೂಚಿಸುತ್ತದೆಂಬದು ಖಚಿತವಾಗಿರುತ್ತದೆ."[9] ಹೀಗೆ, ಈ ವಾಕ್ಯಭಾಗದಲ್ಲಿ, ನಾವು "ದೀಕ್ಷಾಸ್ನಾನ ಮಾಡಿಸಿಕೊಂಡೆವು" ಎಂಬದನ್ನು "ಮುಳುಗಿಸಲ್ಪಟ್ಟೆವು" ಎಂದು ಅನುವಾದಿಸಲು ಶಕ್ತರಾದದ್ದು ಮಾತ್ರವಲ್ಲದೆ, ನಾವು ನ್ಯಾಯಬದ್ಧವಾಗಿ "[ನೀರಿನಲ್ಲಿ]" ಎಂಬದನ್ನು ಸೇರಿಸಬಲ್ಲವರಾದೆವು.

ಪೌಲನು ಈ ಸಂದರ್ಭದಲ್ಲಿ ನೀರಿನ ದೀಕ್ಷಾಸ್ನಾನವನ್ನು ಪರಿಚಯಿಸಿದನೆಂಬದಕ್ಕೆ ಕೆಲವು ಲೇಖಕರು ಆಶ್ಚರ್ಯಗೊಳ್ಳುತ್ತಾರೆ. ಒಬ್ಬರು ಹೇಳಿದ್ದೇನೆಂದರೆ, "ಆತನು ನಮಗೆ 'ಕ್ರಿಸ್ತನಲ್ಲಿ ನಂಬಿಕೆಯಿಟ್ಟಿರುವ ನಾವು ಆತನ ಮರಣದಲ್ಲಿ ಐಕ್ಯವಾಗಿದ್ದೇವೆ' . . . ಮತ್ತು 'ನಾವು ನಮ್ಮ ನಂಬಿಕೆಯ ಮೂಲಕವಾಗಿ ಮರಣದಲ್ಲಿ ಹೂಣಲ್ಪಟ್ಟಿದ್ದೇವೆ' ಎಂದು ಹೇಳುವನೆಂಬದಾಗಿ ನಿರೀಕ್ಷಿಸಿದ್ದೆವು."[10] ಹೇಗೂ, ಅಧ್ಯಾಯ 1 ರಿಂದ 5ರಲ್ಲಿ "ನಂಬಿಕೆ" ಎಂಬದನ್ನು "ನಂಬಿಕೆಯಿಂದ ಮಾತ್ರವೇ" ಎಂದು ವ್ಯಾಖ್ಯಾನಿಸಿದವರಿಗೆ ಮಾತ್ರವೇ ದೀಕ್ಷಾಸ್ನಾನದ ಪರಿಚಯವು ಆಶ್ಚರ್ಯವನ್ನುಂಟು ಮಾಡುತ್ತದೆ. ರಕ್ಷಿಸುವ ನಂಬಿಕೆಯಲ್ಲಿ ವಿಧೇಯತೆಯೂ ಸೇರಿದೆ (1:5; 16:26) ಎಂಬದನ್ನು ಅರ್ಥಮಾಡಿಕೊಂಡವರಿಗೆ, ಪೌಲನು ದೀಕ್ಷಾಸ್ನಾನವನ್ನು ನಂಬಿಕೆಯ ಒಂದು ವ್ಯಕ್ತಗೊಳಿಸುವಿಕೆಯೆಂಬದಾಗಿ ಮಾತಾಡುವದು ಆಶ್ಚರ್ಯವನ್ನುಂಟು ಮಾಡುವದಿಲ್ಲ. ಯೇಸು ಮಹಾಆಜ್ಞೆಯನ್ನು ಕೊಡುವ ವೇಳೆಯಲ್ಲಿ, ನಂಬಿಕೆ, ದೀಕ್ಷಾಸ್ನಾನ ಮತ್ತು ರಕ್ಷಣೆಗಳನ್ನು ಜೋಡಣೆ ಮಾಡಿದನು: "ನಂಬಿ ದೀಕ್ಷಾಸ್ನಾನ ಮಾಡಿಸಿಕೊಳ್ಳುವವನು ರಕ್ಷಣೆ ಹೊಂದುವನು" (*ಮಾರ್ಕ* 16:16).

ದೇವರಿಂದ ಕೊಡಲ್ಪಟ್ಟಿರುವ ಈ ಆದೇಶದ ವಿಚಾರದಲ್ಲಿ ಜನರು ಬಹಳ ಅತಿರೇಕಕ್ಕೆ ಹೋಗಿರುವದರಿಂದಲೇ ದೀಕ್ಷಾಸ್ನಾನದ ಕುರಿತು ಬಹಳಷ್ಟು ವಿವಾದಗಳು ಹುಟ್ಟುತ್ತವೆ. ಕೆಲವರು ಒಂದು ವೈಪರೀತ್ಯಕ್ಕೆ ಹೋಗಿ, ದೀಕ್ಷಾಸ್ನಾನವನ್ನು "ಒಂದು ಸಂಸ್ಕಾರ" - ಪಡೆದುಕೊಳ್ಳುವವನಿಗೆ ನಂಬಿಕೆಯನ್ನು ಬಿಟ್ಟು ಪ್ರತ್ಯೇಕವಾದ ಕೃಪೆಯನ್ನು ತರುತ್ತದೆಂದು ಹೇಳುವ ಒಂದು ಆಚಾರ-ರೀತಿಯಲ್ಲಿ ಮಾಡಿಕೊಂಡಿರುತ್ತಾರೆ. ಅವರು ಕೂಸುಗಳಿಗೆ ದೀಕ್ಷಾಸ್ನಾನ ಮಾಡಿಸಿ ಅವರ ಆತ್ಮಗಳನ್ನು "ಲಿಂಬೋ" ಈ (Limbo) ದಿಂದ ರಕ್ಷಿಸಬಹುದೆಂದು ನಂಬುತ್ತಾರೆ. ಇನ್ನು ಕೆಲವರು ಇನ್ನೊಂದು ವೈಪರೀತ್ಯಕ್ಕೆ ಹೋಗಿ,

ದೀಕ್ಷಾಸ್ನಾನವನ್ನು ಒಂದು ಸಂಕೇತಕ್ಕಿಂತಲೂ ಸ್ವಲ್ಪ ಹೆಚ್ಚಿನದೆಂದು ಭಾವಿಸಿಕೊಂಡಿರುತ್ತಾರೆ. ಅನೇಕ ಪಂಗಡಗಳ ಬೋಧಕರು ಹಲವಾರು ವೇಳೆ ದೀಕ್ಷಾಸ್ನಾನವನ್ನು "ಅಂತರ್ಯದಲ್ಲಿನ ಶುದ್ಧತೆಗೆ ಒಂದು ಬಹಿರಂಗದ ಸಂಕೇತ" ಎಂದು ವ್ಯಾಖ್ಯಾನಿಸುತ್ತಾರೆ. ಈ ಎರಡು ಅತಿರೇಕಗಳ ಮಧ್ಯದಲ್ಲಿ *ಬೈಬಲ್‌ನ* ನಿಲುವು ಇರುತ್ತದೆ: *ನಂಬಿಕೆಯ* ಒಂದು ವ್ಯಕ್ತಗೊಳಿಸುವಿಕೆ (ಆ ನಂಬಿಕೆಯಿಲ್ಲದಿದ್ದರೆ ವ್ಯರ್ಥವಾದ ವ್ಯಕ್ತಗೊಳಿಸುವಿಕೆ) ಮತ್ತು ರಕ್ಷಣೆಗೆ ದೇವರಿಂದ ಕೊಡಲ್ಪಟ್ಟಿರುವ ಒಂದು *ಷರತ್ತು*. *ಸತ್ಯವೇಧಾರಿತ* ದೀಕ್ಷಾಸ್ನಾನದಲ್ಲಿ ಅಡಕವಾಗಿರುವದನ್ನೆಲ್ಲಾ ರೋಮಾ 6:3, 4 ವಚನಗಳಲ್ಲದೆ ಬೇರಾವ ಭಾಗವು ಅಷ್ಟೊಂದು ಉತ್ತಮವಾಗಿ ವಿವರಿಸುವದಿಲ್ಲ.

ಈ ವಾಕ್ಯಭಾಗವು ಹೀಗೆ ಆರಂಭಗೊಳ್ಳುತ್ತದೆ, **. . . ದೀಕ್ಷಾಸ್ನಾನ ಮಾಡಿಸಿಕೊಂಡವರಾದ ನಾವೆಲ್ಲರು . . . ನಿಮಗೆ ತಿಳಿಯದೋ?** ಪೌಲನು ಎಂದಿಗೂ ರೋಮಾಪುರಕ್ಕೆ ಭೇಟಿಕೊಟ್ಟಿರಲಿಲ್ಲ (1:13), ಆದರೆ ರೋಮಾಪುರದಲ್ಲಿದ್ದ ಕ್ರೈಸ್ತರು ದೀಕ್ಷಾಸ್ನಾನ ಮಾಡಿಸಿಕೊಂಡಿದ್ದರೆಂದು ಭಾವಿಸಿಕೊಂಡನು. ಇದು ಯೇಸುವಿನಲ್ಲಿ ನಂಬಿದವರು ದೀಕ್ಷಾಸ್ನಾನ ಮಾಡಿಸಿಕೊಳ್ಳುವದು ಸಹಜವಾದ ಪ್ರತಿಕ್ರಿಯೆಯಾಗಿತ್ತೆಂಬದನ್ನು ತೋರಿಸುತ್ತದೆ. F. F. Bruce ಮುಕ್ತಾಯಕ್ಕೆ ಬಂದಿದ್ದೇನೆಂದರೆ, "ದೀಕ್ಷಾಸ್ನಾನದ ಕುರಿತು ಈ ವಚನಗಳು ಮತ್ತು ಪೌಲನ ಬರಹಗಳಲ್ಲಿನ ಇತರ ವಚನಗಳಿಂದ ಸ್ಪಷ್ಟವಾಗಿ ತೋರಿಬರುವದೇನೆಂದರೆ ಕ್ರೈಸ್ತ ಜೀವಿತದಲ್ಲಿ ದೀಕ್ಷಾಸ್ನಾನವನ್ನು 'ಹೆಚ್ಚುವರಿ ಐಚ್ಛೀಕ' ಸಂಗತಿಯೆಂದು ಪರಿಗಣಿಸಲಿಲ್ಲ ಎಂಬುದು."[11] ಹೊಸ ಒಡಂಬಡಿಕೆಯ ಕಾಲಗಳಲ್ಲಿ, "ದೀಕ್ಷಾಸ್ನಾನ ಹೊಂದದ ಕ್ರೈಸ್ತನು" ಎಂಬುದಿರಲಿಲ್ಲ."[12]

ದೀಕ್ಷಾಸ್ನಾನ ಮಾಡಿಸಿಕೊಂಡವರಲ್ಲಿ ಪೌಲನು ತನ್ನನ್ನು ಸಹ ಸೇರ್ಪಡೆಗೊಳಿಸಿಕೊಂಡಿದ್ದನು, "ದೀಕ್ಷಾಸ್ನಾನ ಮಾಡಿಸಿಕೊಂಡವರಾದ ನಾವೆಲ್ಲರು" ಎಂದು ಸೂಚಿಸುತ್ತಾನೆ (ಒತ್ತು ಸೇರಿಸಲಾಗಿದೆ). ಮೂವತ್ತು ಅಥವಾ ಆಸುಪಾಸಿನ ವರ್ಷಗಳ ಹಿಂದೆ ಅನನೀಯನೆಂಬ ಒಬ್ಬ ಕ್ರೈಸ್ತನು ಆತನಿಗೆ ಹೇಳಿದ್ದೇನೆಂದರೆ, "ಈಗ ನೀನೇಕೆ ಸಾವಕಾಶ ಮಾಡುತ್ತೀ? ಎದ್ದು ಆತನ ಹೆಸರನ್ನು ಹೇಳಿಕೊಳ್ಳುವವನಾಗಿ ದೀಕ್ಷಾಸ್ನಾನ ಮಾಡಿಸಿಕೊಂಡು ನಿನ್ನ ಪಾಪಗಳನ್ನು ತೊಳೆದುಕೋ" (ಅಪೊಸ್ತಲರ ಕೃತ್ಯಗಳು 22:16). ಆ ಸಂದರ್ಭದಲ್ಲಿ, "ಎದ್ದು ದೀಕ್ಷಾಸ್ನಾನ ಮಾಡಿಸಿಕೊಂಡನು" (ಅಪೊಸ್ತಲರ ಕೃತ್ಯಗಳು 9:18).

ಪೌಲನು ಹೇಳಿದ್ದೇನೆಂದರೆ, **ಕ್ರಿಸ್ತಯೇಸುವಿನಲ್ಲಿ ಸೇರುವದಕ್ಕೆ** "ದೀಕ್ಷಾಸ್ನಾನಮಾಡಿಸಿಕೊಂಡವರಾದ ನಾವೆಲ್ಲರು." "ಕ್ರಿಸ್ತನಲ್ಲಿ" ಇರುವದೆಂದರೆ ಯೇಸುವಿನ ಸಂಗಡ ಒಂದು ವೈಯಕ್ತಿಕ ಸಂಬಂಧವನ್ನು ಹೊಂದಿರುವದೆಂದರ್ಥವಾಗಿದೆ (ನೋಡಿರಿ 15:5).[13] ಪೌಲನು ಗಲಾತ್ಯದಲ್ಲಿರುವ ಕ್ರೈಸ್ತರಿಗೆ ಹೀಗೆ ಹೇಳಿದನು, "ಹೇಗಂದರೆ ಕ್ರಿಸ್ತನಲ್ಲಿ ಸೇರುವದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡಿರುವ ನೀವೆಲ್ಲರು ಕ್ರಿಸ್ತನನ್ನು ಧರಿಸಿಕೊಂಡಿರಿ" (ಗಲಾತ್ಯ 3:27). ಯೇಸುವಿನ ಸಂಗಡದ ಈ ವೈಯಕ್ತಿಕ ರಕ್ಷಣೆಯುಂ*ಟು* ಮಾಡುವ ಸಂಬಂಧದ ಬಗ್ಗೆ ರೋಮಾ 6ನೇ ಅಧ್ಯಾಯದುದ್ದಕ್ಕೂ ಒತ್ತಿ ಹೇಳಲ್ಪಟ್ಟಿದೆ:

> "ಕ್ರಿಸ್ತ ಯೇಸುವಿನಲ್ಲಿ ಸೇರುವದಕ್ಕೆ ದೀಕ್ಷಾಸ್ನಾನ . . . *ಆತನ ಮರಣದಲ್ಲಿ*

ಪಾಲುಗಾರರಾಗುವದಕ್ಕೆ ದೀಕ್ಷಾಸ್ನಾನ" (6:3);
"ದೀಕ್ಷಾಸ್ನಾನ ಮಾಡಿಸಿಕೊಂಡಾಗ . . . *ಆತನೊಂದಿಗೆ* ಹೂಣಲ್ಪಟ್ಟೆವು" (6:4);
"*ಆತನಲ್ಲಿ* ಐಕ್ಯವಾಗುವೆವು" (6:5);
"ಕ್ರಿಸ್ತನ *ಕೂಡ* ಶಿಲುಬೆಗೆ ಹಾಕಲ್ಪಟ್ಟೆವು" (6:6);
"ಕ್ರಿಸ್ತನೊಡನೆ *ಸತ್ತ* ಪಕ್ಷದಲ್ಲಿ . . . *ಆತನೊಡನೆ ಜೀವಿಸುವೆವು"* (6:8).

William Barclay ಇದನ್ನು ಹೀಗೆ ದೃಷ್ಟಾಂತಗೊಳಿಸಿದನು: "ನಾವು ಶ್ವಾಸದಲ್ಲಿ ಇರುವ ಮತ್ತು ಶ್ವಾಸವು ನಮ್ಮಲ್ಲಿ ಇರುವ ಹೊರತು ಶಾರೀರಿಕವಾಗಿ ಬದುಕಲಾರೆವು; [ಹಾಗೆಯೇ] ನಾವು ಕ್ರಿಸ್ತನಲ್ಲಿ ಮತ್ತು ಕ್ರಿಸ್ತನು ನಮ್ಮಲ್ಲಿ ಇರುವ ಹೊರತು [ನೋಡಿರಿ ಕೊಲೊಸ್ಸೆ 1:27], ನಾವು ದೇವರ ಜೀವಿತವನ್ನು ಜೀವಿಸಲಾರೆವು."[14]

3ನೇ ವಚನದ ಈ ಸಂದರ್ಭದ ವರೆಗೆ, ಪೌಲನು ತನ್ನ ವಾಚಕರಿಗೆ ಮುಂಚೆಯೇ ಗೊತ್ತಿರುವಂಥ ಸಂಗತಿಗಳನ್ನು ಹೇಳಿದ್ದನು. ಆತನು ಮಾತನ್ನು ಪೂರ್ತಿಗೊಳಿಸುತ್ತಾ ಅವರು ಇದುವರೆಗೂ ಯೋಚಿಸಿಯೇ ಇಲ್ಲದಿರಬಹುದಾದ ಒಂದು ಸಂಗತಿಯನ್ನು ಹೇಳುತ್ತಾನೆ: ಏನೆಂದರೆ ಕ್ರಿಸ್ತಯೇಸುವಿನಲ್ಲಿ ಸೇರುವದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡವರೆಲ್ಲರು ಆತನ ಮರಣದಲ್ಲಿ ಪಾಲುಗಾರರಾಗುವದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡಿದ್ದಾರೆ. ಈ ರೀತಿಯಲ್ಲಿ, ಪೌಲನು ಈ ಕ್ರೈಸ್ತರು ಹೇಗೆ ಮತ್ತು ಯಾವಾಗ "ಪಾಪದ ಪಾಲಿಗೆ ಸಾಯಬೇಕು" ಎಂಬದನ್ನು ಚರ್ಚಿಸಲಾರಂಭಿಸುತ್ತಾನೆ. ಅವರು ದೀಕ್ಷಾಸ್ನಾನ ಮಾಡಿಸಿಕೊಂಡಾಗ, ಅವರು ಯೇಸುವಿನ ಮರಣ ಹಾಗೂ ಅದರ ಫಲಿತಗಳಲ್ಲಿ ಪಾಲುಗಾರರಾದರು.

1 ಕೊರಿಂಥ 15 ರಲ್ಲಿ, ಪೌಲನು ಸುವಾರ್ತೆಯ ತಿರುಳು ಕ್ರಿಸ್ತನ ಮರಣ, ಹೂಣಲ್ಪಡುವಿಕೆ ಮತ್ತು ಪುನರುತ್ಥಾನಗಳೇ ಆಗಿದೆ ಎಂಬದಾಗಿ ಬರೆದನು:

> ಸಹೋದರರರೇ, ನಾನು ನಿಮಗೆ ತಿಳಿಸಿದ ಸುವಾರ್ತೆಯನ್ನು ನಿಮ್ಮ ನೆನಪಿಗೆ ತರುತ್ತೇನೆ, . . .
>
> ನಾನು ನಿಮಗೆ ತಿಳಿಸಿದ ಮೊದಲನೆಯ ಸಂಗತಿಗಳೊಳಗೆ ಒಂದು ಸಂಗತಿಯನ್ನು ನಿಮಗೆ ತಿಳಿಸಿ ಕೊಟ್ಟೆನು. ಅದು ನಾನು ಸಹ ಕಲಿತುಕೊಂಡದ್ದೇ. ಅದೇನಂದರೆ ಶಾಸ್ತ್ರದಲ್ಲಿ ಮುಂತಿಳಿಸಿರುವ ಪ್ರಕಾರ ಕ್ರಿಸ್ತನು ನಮ್ಮ ಪಾಪಗಳ ನಿವಾರಣೆಗಾಗಿ ಸತ್ತನು; ಹೂಣಲ್ಪಟ್ಟನು; ಶಾಸ್ತ್ರದ ಪ್ರಕಾರವೇ ಮೂರನೆಯ ದಿನದಲ್ಲಿ ಎಬ್ಬಿಸಲ್ಪಟ್ಟನು (1 ಕೊರಿಂಥ 15:1-4).

ರೋಮಾ 6ನೇ ಅಧ್ಯಾಯದಲ್ಲಿ, ನಮ್ಮ ದೀಕ್ಷಾಸ್ನಾನವು ಹೇಗೆ ಆ ಮಹತ್ವಪೂರ್ಣ ಘಟನೆಗಳ ಮರಸೃಷ್ಟಿಯಾಗಿರುತ್ತದೆಂಬದನ್ನು ಪೌಲನು ನಮಗೆ ತೋರಿಸಿದನು. ಮೊದಲನೆಯದಾಗಿ, ನಾವು ಯೇಸುವಿನ ಮರಣದಲ್ಲಿ ಪಾಲುಗಾರರಾಗುತ್ತೇವೆ. ನಾವು ಪಾಪ*ದಲ್ಲಿ* ಸತ್ತವರಾಗಿದ್ದೆವು (ಎಫೆಸ 2:1), ಆದರೆ ದೀಕ್ಷಾಸ್ನಾನದಲ್ಲಿ ನಾವು ಪಾಪದ *ಪಾಲಿಗೆ* ಸಾಯುತ್ತೇವೆ. 6:6ರಲ್ಲಿ, "ನಮ್ಮ ಪೂರ್ವಸ್ವಭಾವವು ಕ್ರಿಸ್ತನ ಕೂಡ ಶಿಲುಬೆಗೆ ಹಾಕಲ್ಪಟ್ಟಿತು" ಎಂದು ಪೌಲನು ಹೇಳಿದನು.

**ವಚನ 4.** ಯೇಸು ಮರಣಿಸಿದ ಬಳಿಕ ಹೂಣಲ್ಪಟ್ಟನು. ಪೌಲನು ಈ ಸಮಾನಹೋಲಿಕೆಯನ್ನು ಮಾಡುತ್ತಾನೆ: **ಹೀಗಿರಲಾಗಿ ನಾವು ದೀಕ್ಷಾಸ್ನಾನ ಮಾಡಿಸಿಕೊಂಡಾಗ ಆತನ ಮರಣದಲ್ಲಿ ಪಾಲುಗಾರರಾಗಿ ಆತನೊಂದಿಗೆ ಹೂಣಲ್ಪಟ್ಟೆವು.** ಹೂಣಲ್ಪಡುವಿಕೆಯ ಸದೃಶ್ಯವು ನಾವು ನೀರಿನಲ್ಲಿ ಮುಳುಗುವದನ್ನು ಸೂಚಿಸುತ್ತದೆಂದು ಬಹುತೇಕ ಲೇಖಕರು ಒಪ್ಪಿಕೊಳ್ಳುತ್ತಾರೆ. James Macknight ಬರೆದದ್ದೇನೆಂದರೆ "ದೀಕ್ಷಾಸ್ನಾನದಲ್ಲಿ . . . ದೀಕ್ಷಾಸ್ನಾನಮಾಡಿಸಿಕೊಂಡ ವ್ಯಕ್ತಿಯು ನೀರಿನ ಅಡಿಯಲ್ಲಿ ಹೂಣಲ್ಪಡುತ್ತಾನೆ."[15] ಚಿಮುಕಿಸುವ ಪದ್ಧತಿಯನ್ನು ಅನುಸರಿಸುವವರು ಸಹ ಒಪ್ಪಿಕೊಳ್ಳಲೇಬೇಕಾದದ್ದೇನೆಂದರೆ "ಚಿಮಿಕಿಸುವದು ಅಷ್ಟೊಂದು ಸರಾಗವಾಗಿ ತನ್ನನ್ನು" ಹೂಣಲ್ಪಡುವಿಕೆ ಸಂಕೇತಕ್ಕೆ ಒಪ್ಪಿಸಿಕೊಳ್ಳುವದಿಲ್ಲ.[16]

ನಾವು ನೀರಿನ ದೀಕ್ಷಾಸ್ನಾನದಲ್ಲಿ ಹೂಣಲ್ಪಡುವಾಗ, ಪಾಪದ ಪಾಲಿಗೆ ಸಾಯುವ ಪ್ರಕ್ರಿಯೆಯು ಅಂತಿಮಗೊಳಿಸಲ್ಪಡುತ್ತದೆ. ಈ ನೀರಿನ ಹೂಣಲ್ಪಡುವಿಕೆಯು ಮರಣದಲ್ಲಿ ಪಾಲುಗಾರರಾಗಲು ಎಂಬದಾಗಿ ಪೌಲನು ಒತ್ತಿ ಹೇಳಿದನು, ಪುನಃ ಇಲ್ಲಿ ನಾವು ಮಾಡುವ ಕಾರ್ಯ ಮತ್ತು ಕ್ರಿಸ್ತನು ಮಾಡಿರುವಂಥ ಕಾರ್ಯದ ನಡುವೆ ಇರುವ ನಿಕಟ ಸಂಬಂಧ ವನ್ನು ಎತ್ತಿತೋರಿಸುತ್ತಾನೆ. "ಆತನಿಗೆ ಸಂಭವಿಸಿದ್ದೆಲ್ಲವೂ . . . ನಮಗೆ ಸಂಭವಿಸುತ್ತಿದೆ ಎಂದು ಪರಿಗಣಿಸಬಹುದು."[17]

ಮೂರನೆಯ ದಿನದಲ್ಲಿ, ಕ್ರಿಸ್ತನು ಸತ್ತವರೊಳಗಿಂದ ಎದ್ದನು. ಪೌಲನು ಹೀಗೆ ಮುಂದುವರೆಸುತ್ತಾನೆ, **ಅದದರಿಂದ ಕ್ರಿಸ್ತನು ಸತ್ತು ತಂದೆಯ ಮಹಿಮೆಯಿಂದ ಜೀವಿತನಾಗಿ ಎಬ್ಬಸಲ್ಪಟ್ಟಂತೆಯೇ ನಾವು ಕೂಡ ಜೀವದಿಂದೆದ್ದು ಹೊಸಬರಾಗಿ ನಡಕೊಳ್ಳಬೇಕು.** ಕ್ರಿಸ್ತನು ಸತ್ತವರೊಳಗಿಂದ ಎಬ್ಬಿಸಲ್ಪಟ್ಟ ಪ್ರಕಾರವೇ, ನಾವು ಸಹ ದೀಕ್ಷಾಸ್ನಾನದ "ನೀರಿನ ಸಮಾಧಿಯಿಂದ" ಎಬ್ಬಿಸಲ್ಪಡುತ್ತೇವೆ. ಪೌಲನು ಕೊಲೊಸ್ಸೆಯವರಿಗೆ ಹೇಳಿದ್ದೇನೆಂದರೆ, "ನೀವು ದೀಕ್ಷಾಸ್ನಾನದಲ್ಲಿ ಕ್ರಿಸ್ತನೊಂದಿಗೆ ಹೂಣಲ್ಪಟ್ಟದ್ದೀರಿ . . . ಆತನನ್ನು ಸತ್ತವರೊಳಗಿಂದ ಎಬ್ಬಿಸಿದ ದೇವರ ಸಾಮರ್ಥ್ಯದಲ್ಲಿ ನಂಬಿಕೆಯಿಡುವದರ ಮೂಲಕ ಆತನ ಕೂಡ ಎದ್ದು ಬಂದಿರಿ" (ಕೊಲೊಸ್ಸೆ 2:12).

ಪೌಲನು ರೋಮಾ 6ನೇ ಅಧ್ಯಾಯದಲ್ಲಿ ದೀಕ್ಷಾಸ್ನಾನದ ಬಗ್ಗೆ ಕಲಿಸಿದ ಉಪದೇಶದ ಮೇಲೆ Anders Nygren ಹೀಗೆ ವ್ಯಾಖ್ಯಾನಿಸಿದನು: "ದೀಕ್ಷಾಸ್ನಾನ ಮಾಡಿಸಿಕೊಳ್ಳುವವನು ನೀರಿನಲ್ಲಿ ಮುಳುಗಿಸಲ್ಪಟ್ಟಾಗ, ಆ ಕ್ರಿಯೆಯು 'ಕ್ರಿಸ್ತನ ಸಂಗಡ ಹೂಣಲ್ಪಡುವಿಕೆ'ಯನ್ನು ಸೂಚಿಸುತ್ತದೆ; ಮತ್ತು ಆತನು ಪುನಃ ನೀರಿನಿಂದ ಮೇಲಕ್ಕೆ ಬರುವಾಗ, ಅದು 'ಕ್ರಿಸ್ತನ ಸಂಗಡ ಪುನರುತ್ಥಾನಗೊಳ್ಳುವಿಕೆ'ಯನ್ನು ಸೂಚಿಸುತ್ತದೆ." Nygren ನಂತರ ದೀಕ್ಷಾಸ್ನಾನದ ಕುರಿತ ಪೌಲನ ಉಪದೇಶವನ್ನು ಕೇವಲ ಸಾಂಕೇತಿಕವೆಂದು ತಪ್ಪು ವ್ಯಾಖ್ಯಾನ ಮಾಡಬಾರದೆಂದು ಎಚ್ಚರಿಸುತ್ತಾನೆ. ಯಾಕೆಂದರೆ "ದೀಕ್ಷಾಸ್ನಾನವು ಯಾವದಕ್ಕೆ ಸಂಕೇತವಾಗಿರುತ್ತದೋ ಅದು ವಾಸ್ತವದಲ್ಲಿ ಸಹ *ಸಂಭವಿಸುತ್ತದೆ*, ಮತ್ತು ನಿರ್ದಿಷ್ಟವಾಗಿ ದೀಕ್ಷಾಸ್ನಾನದ ಮೂಲಕ ಸಂಭವಿಸುತ್ತದೆ . . . ಮುಂಚೆ ನಾವು ಕ್ರಿಸ್ತನ ದೇಹದಲ್ಲಿ ಅಂಗಗಳಾಗಿರಲಿಲ್ಲ; ಆದರೆ ದೀಕ್ಷಾಸ್ನಾನದ ಮೂಲಕವೇ ಅಂಗಗಳಾದೆವು ಮತ್ತು ಹೀಗೆ ಬೇರ್ಪಡಿಸಲು ಸಾಧ್ಯವಿಲ್ಲದವರಾಗಿ ಶಿರಸ್ಸಿನೊಂದಿಗೆ

ಜೋಡಿಸಲ್ಪಟ್ಟಿದ್ದೇವೆ."[18]

ಈ ಮುಂಚೆ ಹೇಳಿದ ಹಾಗೆಯೇ, 6:3, 4 ವಚನಗಳು ದೀಕ್ಷಾಸ್ನಾನದ ಕುರಿತು ಮತ್ತು ನಮ್ಮ ರಕ್ಷಣೆಗಾಗಿ ದೇವರು ಮಾಡಿರುವ ವ್ಯವಸ್ಥೆಯಲ್ಲಿ ದೀಕ್ಷಾಸ್ನಾನದ ಸ್ಥಾನದ ಕುರಿತು ಒಂದು ಬಲವಾದ ವಾಕ್ಯಭಾಗವಾಗಿದೆ. ದೀಕ್ಷಾಸ್ನಾನವು ನಂಬಿಕೆಯ ಪ್ರತಿಕ್ರಿಯೆಯಲ್ಲಿ ಒಂದು *ಅವಶ್ಯಕವಾದ* ಭಾಗವಾಗಿರುತ್ತದೆಂದು ಹೇಳಲು ಅವರು ಮನಸ್ಸಿಲ್ಲದವರಾಗಿ ರುತ್ತಾರೆ, ಆದರೆ ಅನೇಕರು ಅದು ಸತ್ಯವೆಂಬದನ್ನು ಬಹುತೇಕ ಒಪ್ಪಿಕೊಳ್ಳುತ್ತಾರೆ:

> Moo ಹೇಳಿದ್ದೇನೆಂದರೆ, "ಹೊಸ ಒಡಂಬಡಿಕೆಯು ನೀರಿನ ದೀಕ್ಷಾಸ್ನಾನವನ್ನು ದೊಡ್ಡ ಅನುಭವದೊಂದರ ಒಂದು ಚಿಕ್ಕ ಭಾಗ ಎಂಬದಾಗಿ ತಿಳಿಸುತ್ತದೆ, ಅದನ್ನು [James D. G.] Dunn 'ಪರಿವರ್ತನೆಯ-ಪ್ರವರ್ತನ' ಎಂದು ಕರೆಯುತ್ತಾನೆ."[19]
>
> Bruce ಹೇಳುವದೇನೆಂದರೆ, "ಕ್ರಿಸ್ತನಲ್ಲಿ ನಂಬಿಕೆ ಮತ್ತು ದೀಕ್ಷಾಸ್ನಾನ ಖಂಡಿತವಾಗಿಯೂ ಅಷ್ಟೇನೂ ಭಿನ್ನ ಅನುಭವಗಳಾಗಿರದೆ ಒಂದು ಒಟ್ಟಾರೆ ಅನುಭವದ ಭಾಗವಾಗಿರುತ್ತವೆ."[20]
>
> Walter W. Wessel ಬರೆದದ್ದೇನೆಂದರೆ, "[ಹೊಸ ಒಡಂಬಡಿಕೆಯ] ಸಮಯಗಳಲ್ಲಿ ಒಬ್ಬನು ರಕ್ಷಣೆ ಹೊಂದಿದ ತಕ್ಷಣ ದೀಕ್ಷಾಸ್ನಾನ ಮಾಡಿಸಲಾಗುತ್ತಿದ್ದದರಿಂದ ಎರಡನ್ನು ಸಹ ಒಂದೇ ಘಟನೆಯ ಭಾಗವೆಂದು ಪರಿಗಣಿಸಲಾಗುತ್ತಿತ್ತು."[21]

ಹೇಗೂ, ನಮ್ಮ ವಾಕ್ಯಭಾಗದಲ್ಲಿ ಪೌಲನ ಉದ್ದೇಶವು ದೀಕ್ಷಾಸ್ನಾನದ ಅತ್ಯಾವಶ್ಯಕತೆಯ ಬಗ್ಗೆ ಸಾಭಿತುಪಡಿಸುವದಾ ಗಿರಲಿಲ್ಲ; ಆತನ ಪತ್ರಿಕೆಯ ಮೂಲ ವಾಚಕರಲ್ಲಿ ಯಾರೊಬ್ಬರೂ ಸಹ ದೀಕ್ಷಾಸ್ನಾನದ ಅವಶ್ಯಕತೆಯ ಬಗ್ಗೆ ಪ್ರಶ್ನೆಯನ್ನು ಎತ್ತಿರಲಿಲ್ಲ. ಪೌಲನು ಹೇಳಲು ಬಯಸಿದ್ದೇನೆಂದರೆ ನಮ್ಮ ಪಾಪಗಳು ತೊಳೆಯಲ್ಪಟ್ಟಿವೆ ಎಂಬ ಅಂಶವು ಪರಿಶುದ್ಧ ಜೀವನ ನಡಿಸುವದಕ್ಕೆ ನಮ್ಮನ್ನು ಪ್ರೇರಿಸತಕ್ಕದ್ದು ಎಂಬದೇ. ನಾವು ನೀರಿನ ದೀಕ್ಷಾಸ್ನಾನದಿಂದ ಎಬ್ಬಿಸಲ್ಪಟ್ಟು "*ಹೊಸಬರಾಗಿ ನಡಕೊಳ್ಳಬೇಕು*" ಎಂದು ಆತನು ಹೇಳುತ್ತಾನೆ (ಒತ್ತಿ ಹೇಳಿದ್ದು ನನ್ನದು). "ನಡಕೊಳ್ಳಬೇಕು" ಎಂಬುದು ಒಂದು "ರೂಪಕಾಲಂಕಾರವಾಗಿದ್ದು ಕ್ರೈಸ್ತ ಜೀವನದ ಗುರುತಾಗಿರಬೇಕಾದ ಸ್ಥಿರತೆ, ಪ್ರೇಕ್ಷಣೆಯವಲ್ಲದ ಪ್ರಗತಿಯನ್ನು ಸೂಚಿಸುತ್ತದೆ."[22]

ನಮಗೆ "ಹೊಸ ಜೀವನ" ಇರುವದರಿಂದ, ನಾವು ಅದರಂತೆಯೇ *ನಡಕೊಳ್ಳಬೇಕು*. NEB ಹೇಳುವದೇನೆಂದರೆ ನಾವು "ಜೀವನದ ಹೊಸ ದಾರಿಯಲ್ಲಿ ನಮ್ಮ ಹೆಜ್ಜೆಗಳನ್ನಿಡಬೇಕು." ಪೌಲನು ಕೊಲೊಸ್ಸೆಯವರಿಗೆ ಅವರ ದೀಕ್ಷಾಸ್ನಾನದ ವಿಷಯವಾಗಿ ಹೀಗೆ ಬರೆದನು,

> ಆದಕಾರಣ ನೀವು ಕ್ರಿಸ್ತನೊಂದಿಗೆ ಎಬ್ಬಿಸಲ್ಪಟ್ಟಿರುವದರಿಂದ ಮೇಲಿರುವವುಗಳನ್ನು

ಹುಡುಕಿರಿ; ಅಲ್ಲಿ ಕ್ರಿಸ್ತನು ದೇವರ ಬಲಗಡೆಯಲ್ಲಿ ಆಸನಾರೂಢನಾಗಿದ್ದಾನೆ. ಮೇಲಿರುವಂಥವುಗಳ ಮೇಲೆ ಮನಸ್ಸಿಡಿರಿ, ಭೂಸಂಬಂಧ ವಾದವುಗಳ ಮೇಲೆ ಇಡಬೇಡಿರಿ. ಯಾಕೆಂದರೆ ನೀವು ಸತ್ತಿರಲ್ಲಾ, ನಿಮ್ಮ ಜೀವವು ಕ್ರಿಸ್ತನೊಂದಿಗೆ ದೇವರಲ್ಲಿ ಮರೆಯಾಗಿಟ್ಟದೆ (ಕೊಲೊಸ್ಸೆ 3:1-3).

**ವಚನ 5. ಹೇಗಂದರೆ ನಾವು ಆತನ ಮರಣಕ್ಕೆ ಸದೃಶವಾದ ಮರಣವನ್ನು ಹೊಂದಿ ಆತನಲ್ಲಿ ಐಕ್ಯವಾಗಿದ್ದರೆ ಆತನ ಪುನರುತ್ಥಾನಕ್ಕೆ ಸದೃಶವಾದ ಪುನರುತ್ಥಾನವನ್ನೂ ಹೊಂದಿ ಆತನಲ್ಲಿ ಐಕ್ಯವಾಗುವೆವು**. ಈ ಸನ್ನಿವೇಶದಲ್ಲಿ, "ವಾಗಿದ್ದರೆ" ಎಂಬುದು "ಆಗಿರುದವರಿಂದ" ಎಂಬರ್ಥವಾಗಿದೆ. "ಐಕ್ಯವಾಗಿದ್ದರೆ" ಎಂಬ ಅನುವಾದಿತ ಗ್ರೀಕ್ ಪದವು (σύμφυτος, *sumphutos*) ಒಂದು ಸಂಯುಕ್ತ ಪದವಾಗಿದ್ದು σύν (*sun*, "ಯೊಂದಿಗೆ") ಮತ್ತು φύω (*phuō*, "ಬೆಳೆ") ಎಂಬ ಪದಗಳನ್ನೊಳಗೊಂಡಿರುತ್ತದೆ, ಅದರರ್ಥವು "ಒಟ್ಟಾಗಿ ಬೆಳೆಯಲ್ಪಟ್ಟ"[23] ಅಥವಾ "ಒಟ್ಟಿಗೆ ನೆಡಲ್ಪಟ್ಟಿರುವ" ಎಂದಾಗುತ್ತದೆ (KJV). ಪೌಲನು ನೀರಿನಲ್ಲಿ ಮುಳುಗಿಸಲ್ಪಡುವದನ್ನು ಭೂಮಿಯಲ್ಲಿ ಒಂದು ಬೀಜವನ್ನು ಬಿತ್ತುವದಕ್ಕೆ ಹೋಲಿಸುತ್ತಾನೆ. ಹೊಸ ಜೀವವು ಹೊರಬರಬೇಕೆಂದರೆ ಒಂದು ಬೀಜವು "ಸಾಯ" ತಕ್ಕದ್ದು (ಯೋಹಾನ 12:24; 1 ಕೊರಿಂಥ 15:36).

ನಮ್ಮ "ನೆಡಲ್ಪಡುವಿಕೆ" ಗೆ ಮೌಲ್ಯವಿರುತ್ತದೆ ಯಾಕೆಂದರೆ ನಾವು "ಆತನ [ಕ್ರಿಸ್ತನ] ಮರಣದ ಸದೃಶವಾದ ಮರಣದಲ್ಲಿ *ಆತನೊಂದಿಗೆ* ಐಕ್ಯವಾಗಿದ್ದೇವೆ" (ಒತ್ತಿ ಹೇಳಿದ್ದು ನನ್ನದು). ವಿಷಯವು ಹಾಗಿರುವದರಿಂದ, "ಖಂಡಿತವಾಗಿಯೂ ನಾವು ಆತನ ಪುನರುತ್ಥಾನದ ಸದೃಶದಲ್ಲಿ ಸಹ ಇರಲಿದ್ದೇವೆ."[24] ಕ್ರಿಸ್ತನು ಮರಣದಿಂದ ಎಬ್ಬಿಸಲ್ಪಟ್ಟಾಗ, ಆತನ ಕುರಿತ ಕೆಲವು ಸಂಗತಿಗಳು ಬದಲಾಗದೆ ಇದ್ದವು. ಆತನಿಗೆ ಆಗಲೂ ಕೈಗಳಲ್ಲಿ ಮೊಳೆಗಳ ಗುರುತು ಮತ್ತು ಆತನ ಪಕ್ಕೆಯಲ್ಲಿ ಈಟಿಯ ಗುರುತು ಇದ್ದವು (ನೋಡಿರಿ ಯೋಹಾನ 20:27), ಆದರೆ ಕೆಲವು ಸಂಗತಿಗಳು ಬೇರೆಯಾಗಿದ್ದವು. ಆತನು ಹೊಸ ಜೀವಿತಕ್ಕೆ ಎಬ್ಬಿಸಲ್ಪಟ್ಟನು, ಇನ್ನೆಂದಿಗೂ ಮರಣದ ದಬ್ಬಾಳಿಕೆಗೆ ಅಧೀನನಾಗಿರಲಿಲ್ಲ (ರೋಮಾ 6:9). ಅದೇ ರೀತಿಯಲ್ಲಿಯೇ, ನಾವು ದೀಕ್ಷಾಸ್ನಾನದ ಸಮಾಧಿಯಿಂದ ಎಬ್ಬಿಸಲ್ಪಡುವಾಗ, ಕೆಲವು ಸಂಗತಿಗಳು ಇದ್ದ ಹಾಗೆಯೇ ಇರುತ್ತವೆ: ಉದಾಹರಣೆಗೆ, ನಮ್ಮ ಮುಖಚಹರೆ ಮುಂಚೆ ಇದ್ದಂತೆಯೇ ಇರುತ್ತದೆ. ಹೇಗೂ, ಕೆಲವು ಸಂಗತಿಗಳು ಭಿನ್ನವಾಗಿರುತ್ತವೆ: ಈಗ ನಮಗೆ ಕರ್ತನಲ್ಲಿ ಒಂದು ಹೊಸ ಜೀವನ ಸಿಕ್ಕಿರುತ್ತದೆ!

**ವಚನ 6.** ಪೌಲನು ಆ ಆಲೋಚನೆಗೆ ಈ ಮಾತುಗಳನ್ನು ಸೇರಿಸುತ್ತಾನೆ: **ಪಾಪಾಧೀನಸ್ವಭಾವವು ನಾಶವಾಗಿ ನಾವು ಇನ್ನೂ ಪಾಪದ ವಶದಲ್ಲಿರದಂತೆ ನಮ್ಮ ಪೂರ್ವಸ್ವಭಾವವು ಕ್ರಿಸ್ತನ ಕೂಡ ಶಿಲುಬೆಗೆ ಹಾಕಲ್ಪಟ್ಟಿತೆಂದು ತಿಳಿದಿದ್ದೇವೆ.** ನಮ್ಮ ಪೂರ್ವಸ್ವಭಾವವು ಕ್ರಿಸ್ತನ ಸಂಗಡ ಶಿಲುಬೆಗೆ ಹಾಕಲ್ಪಟ್ಟಿತು (ನೋಡಿರಿ ಗಲಾತ್ಯ 2:20). ಗ್ರೀಕ್ ಪ್ರತಿಯಲ್ಲಿ "ಪೂರ್ವಸ್ವಭಾವ" ಎಂಬದರ ಬದಲಾಗಿ ಅಕ್ಷರಶಃ "ಹಳೆಯ ಮನುಷ್ಯ" (παλαιὸς . . . ἄνθρωος, *palaios . . . anthrōpos*) ಎಂದಿರುತ್ತದೆ (ನೋಡಿರಿ KJV). "ಪೂರ್ವಸ್ವಭಾವ" ಎಂಬ ಪೌಲನ ಮಾತಿನ ತಾತ್ಪರ್ಯವೇನು ಎಂಬದರ ಬಗ್ಗೆ ಕೆಲವು ವ್ಯಾಖ್ಯಾನಕಾರರು ಗೊಂದಲಕ್ಕೀಡಾಗುತ್ತಾರೆ; ಆದರೆ ಅಪೊಸ್ತಲನು ಆ ಮಾತಿನ

ಅರ್ಥವನ್ನು 8ನೇ ವಚನದಲ್ಲಿ ಬಣ್ಣಿಸುತ್ತಾನೆ. 6 ಮತ್ತು 8 ವಚನಗಳಲ್ಲಿರುವ ಸಾಮ್ಯತೆಯನ್ನು ಗಮನಿಸಿರಿ:

> "*ನಮ್ಮ ಪೂರ್ವಸ್ವಭಾವ*ವು ಕ್ರಿಸ್ತನ ಕೂಡ ಶಿಲುಬೆಗೆ ಹಾಕಲ್ಪಟ್ಟಿತು" (6:6).
> "ನಾವು ಕ್ರಿಸ್ತನೊಡನೆ ಸತ್ತಿದ್ದೇವೆ" (6:8).

"ನಮ್ಮ ಪೂರ್ವಸ್ವಭಾವ" ವು ಕ್ರೈಸ್ತರಾಗುವದಕ್ಕೆ ಮುಂಚೆ ಇದ್ದ *ನಮ್ಮ*ನ್ನು ಸೂಚಿಸುತ್ತದೆ. NEB ಯಲ್ಲಿ "ಮುಂಚೆ ಇದ್ದ ಮನುಷ್ಯನು" ಎಂದಿರುತ್ತದೆ. Stott ಬರೆದದ್ದೇನೆಂದರೆ "ಕ್ರಿಸ್ತನ ಸಂಗಡ ಶಿಲುಬೆಗೆ ಹಾಕಲ್ಪಟ್ಟಂಥ ಅದು . . . ನಾವು ರಕ್ಷಣೆ ಹೊಂದುವದಕ್ಕಿದ್ದ ನಮ್ಮ ಇಡೀ ವ್ಯಕ್ತಿತ್ವವಾಗಿರುತ್ತದೆ."[25] ಒಬ್ಬ ಕ್ರೈಸ್ತನು ತನ್ನ ಜೀವಿತದಲ್ಲಿ ಸಂಭವಿಸುವ ಘಟನೆಗಳನ್ನು "ಕ್ರಿ.ಪೂ." (ಕ್ರಿಸ್ತನಿಗೆ ಮುಂಚೆ) ಅಥವಾ "ಕ್ರಿ.ಶ." (ಕ್ರಿಸ್ತನ ನಂತರ) ಎಂಬದಾಗಿ ಸೂಚಿಸಬಹುದು.[26]

"ಪೂರ್ವಸ್ವಭಾವ" ವು ಕ್ರಿಸ್ತನ ಸಂಗಡ *ಶಿಲುಬೆಗೆ ಹಾಕಲ್ಪಟ್ಟಿತು*-ಶಿಲುಬೆಗೆ ಜಡಿಯಲ್ಪಟ್ಟಿತು, ಮರಣಶಿಕ್ಷೆಗೆ ಗುರಿಯಾಯಿತು, ಮರಣಕ್ಕೊಳಪಟ್ಟಿತು! ಕೆಲವರು ತಮ್ಮ ಕೊರಳುಗಳಲ್ಲಿ ಶಿಲುಬೆಯ ಸರಗಳನ್ನು ಹಾಕಿಕೊಳ್ಳುವದಕ್ಕೆ ಅಥವಾ ಕಟ್ಟಡಗಳ ಮೇಲೆ ಶಿಲುಬೆಗಳನ್ನು ನಿರ್ಮಿಸುವದರಲ್ಲಿ ಹರ್ಷಪಡುತ್ತಾರೆ. ದೇವರು ಬಯಸುವಂಥ ಸ್ಪಂದನೆ ಯಾವದೆಂದರೆ ಆಭರಣಗಳಲ್ಲಿ ಅಥವಾ ಕಟ್ಟಡಗಳಲ್ಲಿ ಶಿಲುಬೆಯನ್ನು ಪ್ರದರ್ಶಿಸುವದಲ್ಲ, ಆದರೆ ಹೃದಯದಲ್ಲಿ ಶಿಲುಬೆಯನ್ನು ನೆಡುವದನ್ನೇ-ಪಾಪದ "ಪೂರ್ವಸ್ವಭಾ ವವನ್ನು" ಮರಣಕ್ಕೊಳಪಡಿಸುವದೇ![27]

"ನಮ್ಮ ಪಾಪಾಧೀನಸ್ವಭಾವವು ನಾಶವಾಗುವಂತೆ" ನಾವು ಕ್ರಿಸ್ತನ ಕೂಡ ಶಿಲುಬೆಗೆ ಹಾಕಲ್ಪಟ್ಟೆವು (ಒತ್ತು ಸೇರಿಸಲಾಗಿದೆ). "ಪಾಪಾಧೀನಸ್ವಭಾವ" (σῶμα, *sōma*) [ಅಥವಾ ದೇಹ] ಎಂಬ ಪದವು ಮುಂದಿನ ಕೆಲವು ಅಧ್ಯಾಯಗಳಲ್ಲಿ ಪ್ರಮುಖವಾಗಿರುತ್ತದೆ (ನೋಡಿರಿ 6:6, 12; 7:4, 24; 8:10, 11, 13, 23), ಆದ್ದರಿಂದ ನಾವು ಸ್ವಲ್ಪ ಸಮಯವನ್ನು ಆ ಪದದ ಪರೀಕ್ಷೆಗಾಗಿ ಕೊಡಬೇಕಾದ ಅಗತ್ಯವಿರುತ್ತದೆ.

ಶಾರೀರಿಕ ದೇಹವು ಸ್ವತಃ *ಒಳ್ಳೇದೂ ಅಲ್ಲ ಕೆಟ್ಟದ್ದೂ ಅಲ್ಲ*; ಅದು ಉಪಯೋಗಿಸಲ್ಪಡುವ ಒಂದು ಸಾಧನವಷ್ಟೇ. ಅದು "ಗ್ರಹಿಸುವ ಮತ್ತು ವ್ಯಕ್ತಪಡಿಸುವ ಒಂದು ಮಧ್ಯಮ" ಎಂದು ಕರೆಯಲ್ಪಟ್ಟಿದೆ. ದೇಹದ ಪಂಚೇಂದ್ರಿಯಗಳ ಮೂಲಕವೇ ನಮ್ಮ ಸುತ್ತಲಿನ ಲೋಕವನ್ನು ತಿಳಿದುಕೊಳ್ಳುತ್ತೇವೆ. ನಂತರ, ದೇಹದ ಕ್ರಿಯೆಗಳ ಮೂಲಕ (ಉದಾಹರಣೆಗೆ: ಮಾತು, ಸನ್ನೆಗಳು, ಮತ್ತು ಮುಖದ ಭಾವನೆಗಳಿಂದ) ಇತರರಿಗೆ ನಮ್ಮ ಅನಿಸಿಕೆ ಮತ್ತು/ಅಥವಾ ಅವರಿಗೆ ತಿಳಿಸಲಿಚ್ಚಿಸುವದನ್ನು ವ್ಯಕ್ತಪಡಿಸುತ್ತೇವೆ.

ದೇಹವನ್ನು *ಒಳ್ಳೇದಕ್ಕೆ* ಸಾಧನವಾಗಿ ಉಪಯೋಗಿಸಬಹುದು. ಪೌಲನು 13ನೇ ವಚನದಲ್ಲಿ ತನ್ನ ವಾಚಕರಿಗೆ ತಮ್ಮ ದೇಹದ ಅಂಗಗಳನ್ನು "ನೀತಿಕೃತ್ಯಗಳನ್ನು ನಡಿಸುವ ಸಾಧನಗಳಾಗಿ" ದೇವರಿಗೆ ಸಮರ್ಪಿಸಿರಿ ಎಂದು ಪ್ರೋತ್ಸಾಹಿಸುತ್ತಾನೆ. ರೋಮಾಪುರ ಪತ್ರಿಕೆಯ ಅನಂತರದ ಭಾಗದಲ್ಲಿ ಅಪೊಸ್ತಲನು ಬರೆದದ್ದೇನೆಂದರೆ, "ಆದದರಿಂದ ಸಹೋದರರೇ, ದೇವರ ಕನಿಕರವನ್ನು ನಿಮ್ಮ ನೆನಪಿಗೆ ತಂದು ನಿಮ್ಮನ್ನು

ಬೇಡಿಕೊಳ್ಳುವದೇನಂದರೆ-ನೀವು ನಿಮ್ಮ ನಿಮ್ಮ ದೇಹಗಳನ್ನು ದೇವರಿಗೆ ಮೀಸಲಾಗಿಯೂ ಮೆಚ್ಚಿಕೆಯಾಗಿಯೂ ಇರುವ ಸಜೀವಯಜ್ಞವಾಗಿ ಅರ್ಪಿಸಿರಿ" (12:1).

ದೇಹವನ್ನು *ಕೆಟ್ಟತನಕ್ಕಾಗಿ* ಸಹ ಉಪಯೋಗಿಸಬಹುದು. ಅದರ ಅಂಗಗಳನ್ನು "ದುಷ್ಕೃತ್ಯವನ್ನು ನಡಿಸುವ ಸಾಧನಗಳಾಗಿ" ಉಪಯೋಗಿಸಬಹುದಾಗಿದೆ (6:13). ದೇಹವು (ಶಾರೀರಿಕ ಸ್ವಭಾವ) ಅನೇಕ ಸಾರಿ ಶೋಧನೆಯನ್ನು ಎದುರಿಸುವ ವಿಷಯದಲ್ಲಿ ಅತ್ಯಂಥ ಬಲಹೀನವಾಗಿರುವ ಅಂಗವೆಂಬದನ್ನು ವಾಕ್ಯವು ಒಪ್ಪಿಕೊಳ್ಳುತ್ತದೆ (ನೋಡಿರಿ 7:5). ಅದು ಸತತವಾಗಿ ಸೈತಾನನ ಕೆಲವು ಬಲಿಷ್ಠ ಆಕ್ರಮಣಗಳಿಗೆ ತುತ್ತಾಗುತ್ತದೆ. ಆದದರಿಂದ, ರೋಮಾಪುರ ಪತ್ರಿಕೆಯಲ್ಲಿ, "ದೇಹ" ಎಂಬುದು ಸತತವಾಗಿ ದುಷ್ಟತನ ನಡಿಸುವ ಸಾಧನವೆಂಬ ಮಾತುಗಳೊಂದಿಗೆ ಜೋಡಿಸಲ್ಪಟ್ಟಿರುತ್ತದೆ (ನೋಡಿರಿ 7:24). 6ನೇ ವಚನದಲ್ಲಿ ಸಹ ಅದೇ ವಿಷಯವಾಗಿರುತ್ತದೆ, ಅದು "ನಮ್ಮ ಪಾಪಾಧೀನ ಸ್ವಭಾವ" (ದೇಹ) - ಅಂದರೆ, ನಾವು ಪಾಪ ಮಾಡುವ ಸಾಧನವಾಗಿರುವ ದೇಹದ ಬಗ್ಗೆ ಮಾತಾಡುತ್ತದೆ.

8:13 ರಲ್ಲಿ, ಪೌಲನು ಹೇಳಿದ್ದೇನೆಂದರೆ, ದೇವರಾತ್ಮನ ಸಹಾಯದೊಂದಿಗೆ ನಾವು ದೇಹದ ದುರಭ್ಯಾಸಗಳನ್ನು ನಾಶಮಾಡಬಹುದು. ಹೇಗೂ, ಈ ಕ್ಷಣದಲ್ಲಿ, ಆತನು ನಮ್ಮ "ಪಾಪಧೀನಸ್ವಭಾವವು ನಾಶವಾಗುವಂತೆ" ನಮ್ಮ ಪೂರ್ವಸ್ವಭಾವವು ಕ್ರಿಸ್ತನ ಕೂಡ ಶಿಲುಬೆಗೆ ಹಾಕಲ್ಪಟ್ಟಿತೆಂಬದನ್ನು ಮಾತ್ರ ಒತ್ತಿ ಹೇಳಿದನು. "ಪಾಪಾಧೀನಸ್ವಭಾವ ನಾಶವಾಗಿ" ಎಂಬುದು καταργέω (*katargeō*) ಎಂಬ ಸಂಯುಕ್ತ ಪದದಿಂದ ಬರುತ್ತದೆ, ಅದರಲ್ಲಿ κατά (*kata*, "ಕೆಳಗೆ") ಎಂಬದರೊಂದಿಗೆ ἀργός (*argos*, "ನಿಷ್ಕ್ರೀಯ") ಎಂಬ ಪದದ ಜೋಡನೆಯಗಿರುತ್ತದೆ. ಅದರ ಅಕ್ಷರಶಃ ಅರ್ಥವು "ನಿಷ್ಕ್ರೀಯವಾಗುವಂತೆ ಮಾಡು" ಎಂದಾಗಿರುತ್ತದೆ. NLT ಯು ಹೇಳುವದೇನೆಂದರೆ "ಪಾಪವು ನಮ್ಮ ಜೀವಿತಗಳಲ್ಲಿ ಶಕ್ತಿಯನ್ನು ಕಳೆದುಕೊಳ್ಳುವ ಹಾಗೆ ನಾವು ಕ್ರಿಸ್ತನ ಸಂಗಡ ಶಿಲುಬೆಗೆ ಹಾಕಲ್ಪಟ್ಟೆವು."

ಕೆಲವರು ತಮ್ಮ ದೇಹದ ಬಯಕೆಗಳ ಮೇಲೆ ಸ್ವಲ್ಪ ಅಥವಾ ಸಂಪೂರ್ಣ ನಿಯಂತ್ರಣವಿಲ್ಲದವರಾಗಿದ್ದೇವೆಂದು ಭಾವಿಸಿಕೊಳ್ಳುತ್ತಾರೆ. ಕ್ರಿಸ್ತನ ಮುಖಾಂತರ, ಆ ಆಳವಾದ ಇಚ್ಛೆಗಳನ್ನು ನಿಷ್ಕ್ರೀಯಗೊಳಿಸಬಹುದು ಮತ್ತು ನಮ್ಮನ್ನು ದಬ್ಬಾಳಿಕೆ ಮಾಡುವ ಶಕ್ತಿಯನ್ನು ಕಸಿದುಕೊಳ್ಳಬಹುದು ಎಂಬ ಸತ್ಯವು ನಮಗೆ ತಿಳಿದಿರಬೇಕೆಂಬದು ಪೌಲನ ಬಯಕೆಯಾಗಿತ್ತು.

ಯೇಸುವಿನ ಕಾರಣದಿಂದ, ನಮ್ಮ ಪಾಪದ ದಾಸತ್ವವು ಅಂತ್ಯಗೊಂಡಿತು. ನಮ್ಮ ಪಾಪಾಧೀನ ಶರೀರವು ನಿಷ್ಕ್ರೀಯ ಗೊಳಿಸಲ್ಪಟ್ಟಿದೆ, "ಹೀಗೆ ಅದು ಇನ್ನು ಮೇಲೆ ಪಾಪಕ್ಕೆ ದಾಸನಾಗಿರುವದಿಲ್ಲ." ಅಮೆರಿಕದಲ್ಲಿ, 1863, ಜನವರಿ 1 ರಂದು, ವಿಮೋಚನೆಯ ಘೋಷಣೆ (Emancipation Proclamation) ಘೋಷಿಸಲ್ಪಟ್ಟಿತು; ನಂತರ, 1865, ಡಿಸೆಂಬರ್ 18 ರಂದು, ಅಮೆರಿಕದ ಸಂವಿಧಾನದ ಹದಿಮೂರನೆಯ ತಿದ್ದುಪಡಿಯನ್ನು ಅಧಿಕೃತವಾಗಿ ಅಂಗೀಕರಿಸಲಾಯಿತು, ಅದು ಗುಲಾಮತನವನ್ನು ನಿರ್ಮೂಲಗೊಳಿಸಿತು. ಹದಿನೆಂಟು ನೂರು ವರ್ಷಗಳ ಮುಂಚೆ, ಕ್ರಿಸ್ತನು ಮರಣಿಸಿದನು, ಅದರ ಮೂಲಕ ನಮ್ಮ ಆತ್ಮೀಕ "ವಿಮೋಚನೆಯ ಘೋಷಣೆ" ಗೆ ತನ್ನ ಸ್ವರಕ್ತದಿಂದ ಸಹಿ ಹಾಕಿದನು.

**ವಚನ 7.** ಪೌಲನು ಪಾಪವನ್ನು ರಾಜನಂತೆ ಆಳಿಕೆ ಮಾಡುವದೆಂಬಂತೆ

ಹೇಳಿದ್ದನಾದರೂ (5:21), ಇನ್ನು ಮೇಲೆ ಯಾವ ಕಾರಣಕ್ಕೂ ಪಾಪದ ಮುಂದೆ ಮೊಣಕಾಲೂರುವ ಅಗತ್ಯತೆ ಇಲ್ಲ ಎಂಬದಾಗಿ ಹೇಳುತ್ತಾನೆ. ಕ್ರೈಸ್ತನು ಅದರ ಮಾತಿನಂತೆ ನಡೆಯುವ ಅಗತ್ಯವಿರುವದಿಲ್ಲ, ಯಾಕೆಂದರೆ ಸತ್ತವನು ಪಾಪದ ವಶದಿಂದ ಬಿಡುಗಡೆ ಹೊಂದಿದ್ದಾನಷ್ಟೆ. "ಬಿಡುಗಡೆ" ಎಂಬುದು δικαιόω (*dikaioō*) ಎಂಬ ಗ್ರೀಕ್ ಪದದಿಂದ ಬಂದದ್ದು, ಅದು ಸತತವಾಗಿ "ನೀತಿನಿರ್ಣಯಗೊಂಡವನು" ಎಂದು ಅನುವಾದಿಸಲ್ಪಟ್ಟಿದೆ. ನ್ಯಾಯಲಯದಲ್ಲಿ "ನೀತಿವಂತನೆಂದು ನಿರ್ಣಯಿಸಲ್ಪಟ್ಟವನು" ("ಅಪರಾಧಿ ಅಲ್ಲ" ಎಂದು ಸಾಭಿತು) ಬಿಡುಗಡೆಗೊಳಿಸಲ್ಪಡುತ್ತಾನೆ.

ಹೊಸ ಒಡಂಬಡಿಕೆಯ ಕಾಲದಲ್ಲಿ, ಗುಲಾಮತನದಿಂದ ಬಿಡುಗಡೆಯಾಗುವದಕ್ಕೆ ಗುಲಾಮರಿಗಿದ್ದ ಏಕೈಕ ಮಾರ್ಗ ವೆಂದರೆ ಸಾಯುವದು ಆಗಿತ್ತು. ನಾವು ದೀಕ್ಷಾಸ್ನಾನ ಮಾಡಿಸಿಕೊಂಡಾಗ, ನಾವು ಪಾಪದ ಪಾಲಿಗೆ ಸಾಯುತ್ತೇವೆ (6:2-4), ಅದು ನಮ್ಮನ್ನು ಪಾಪದಿಂದ ಬಿಡಿಗಡೆಗೊಳಿಸುತ್ತದೆ (6:7). ಮರಣವು ಎಲ್ಲಾ ನಿಬಂಧನೆಗಳನ್ನು ರದ್ದುಗೊಳಿಸುತ್ತದೆಂದು ರಬ್ಬಿಗಳು ಉಪದೇಶಿಸುತ್ತಿದ್ದರು.[28] ನಾವು ಪಾಪದ ಪಾಲಿಗೆ ಸಾಯುವಾಗ, ನಮಗೆ ಇನ್ನು ಮೇಲೆ ಪಾಪಕ್ಕೆ ಸೇವೆಮಾಡಬೇಕೆಂಬ ನಿರ್ಬಂಧವು ಇರುವದಿಲ್ಲ.

ಅಮೆರಿಕದಲ್ಲಿ, ಗುಲಾಮರು ಸ್ವತಂತ್ರಗೊಳಿಸಲ್ಪಟ್ಟಾಗ, ಕೆಲವರು ಗುಲಾಮ ರಾಗಿಯೇ ಜೀವಿಸುವದನ್ನು ಮುಂದುವರೆ ಸಿದರು. "ಅವರಿಗೆ ತಾವು ಸ್ವತಂತ್ರ ಗೊಂಡಿದ್ದೇವೆಂಬದು ತಿಳಿಯದಾಗಿತ್ತು, ಅಥವಾ ಅವರು ಗುಲಾಮತನದಲ್ಲಿಯೇ ಮುಳುಗಿದವರಾಗಿ ಅದಕ್ಕೆ ಒಗ್ಗಿಕೊಂಡಿದ್ದರಿಂದ ಅವರಿಗೆ ಬಿಡುಗಡೆಯನ್ನು ಕಲ್ಪಿಸಿಕೊಳ್ಳು ವದಕ್ಕೆ ಸಾಧ್ಯವಾಗಿರಲಿಲ್ಲ."[29] ದುಃಖಕರವೆಂದರೆ, ಪಾಪದ ದಾಸತ್ವ ದೊಳಗಿಂದ ಬಿಡಿಸಲ್ಪಟ್ಟಿರುವ ಕೆಲವರು ಇನ್ನೂ ಆ ಬಂಧನದಲ್ಲಿಯೇ ಬದುಕುತ್ತಿದ್ದಾರೆ. ಪೌಲನು ಎಲ್ಲಾ ಕ್ರೈಸ್ತರಿಗೆ ತಿಳಿಸಲಿಚ್ಛಿಸಿದ್ದೇನೆಂದರೆ, ಅವರು ಇನ್ನು ಮೇಲೆ ಪಾಪಕ್ಕೆ ದಾಸರಲ್ಲ ಮತ್ತು ಇನ್ನು ಮೇಲೆ "ಪಾಪಕ್ಕೆ ಸೇವೆ" ಮಾಡುವದು ಅನಾವಶ್ಯಕವಾಗಿದೆ (6:6; KJV).

## ಪಾಪದ ಪಾಲಿಗೆ ಸತ್ತವರು, ಕ್ರಿಸ್ತನಿಗಾಗಿ ಜೀವಿಸುವವರು (6:8-11)

**8ಇದಲ್ಲದೆ ನಾವು ಕ್ರಿಸ್ತನೊಡನೆ ಸತ್ತ ಪಕ್ಷದಲ್ಲಿ ಆತನೊಡನೆ ಜೀವಿಸುವೆವೆಂದು ನಂಬುತ್ತೇವೆ. 9ಯಾಕೆಂದರೆ ಕ್ರಿಸ್ತನು ಸತ್ತ ಮೇಲೆ ಜೀವಿತನಾಗಿ ಎದ್ದು ಬಂದದರಿಂದ ಆತನು ಇನ್ನು ಮುಂದೆ ಸಾಯತಕ್ಕವನಲ್ಲ, ಮರಣವು ಇನ್ನೂ ಆತನನ್ನು ಆಳುವದಿಲ್ಲವೆಂದು ನಮಗೆ ತಿಳದದೆ. 10ಆತನು ಸತ್ತದ್ದು ಒಂದೇ ಸಾರಿ, ಅದು ಪಾಪದ ಪಾಲಿಗೆ; ಆತನು ಜೀವಿಸುವದು ದೇವರಿಗಾಗಿಯೇ. 11ಅದೇ ಪ್ರಕಾರ ನೀವು ಸಹ ನಿಮ್ಮನ್ನು ಕ್ರಿಸ್ತ ಯೇಸುವಿನ ಐಕ್ಯದಿಂದ ಪಾಪದ ಪಾಲಿಗೆ ಸತ್ತವರೂ ದೇವರಿಗಾಗಿ ಜೀವಿಸುವವರೂ ಎಂದು ಎಣಿಸಿಕೊಳ್ಳಿರಿ.**

1 ರಿಂದ 7 ವಚನಗಳಲ್ಲಿ ಮುಖ್ಯವಾಗಿ ಪಾಪದ ಪಾಲಿಗೆ ಸಾಯುವದರ ಕುರಿತು ಒತ್ತಿಹೇಳಲಾಗಿರುತ್ತದೆ. 8 ರಿಂದ 11 ವಚನಗಳಲ್ಲಿ ಪುನಃ ನಾವು ಪಾಪದ ಪಾಲಿಗೆ ಸತ್ತವರೆಂಬದನ್ನು ಗಮನಿಸುತ್ತೇವೆ, ಆದರೆ ಮುಖ್ಯ ಒತ್ತು ದೇವರಿಗಾಗಿ ಜೀವಿಸುವದರ

ಕುರಿತು ಆಗಿರುತ್ತದೆ.

**ವಚನ 8.** ನಾವು "ಆತನ ಮರಣದಲ್ಲಿ ಪಾಲುಗಾರರಾಗುವದಕ್ಕೆ ದೀಕ್ಷಾಸ್ನಾನಮಾಡಿಸಿಕೊಂಡಾಗ" (6:3) **ನಾವು ಕ್ರಿಸ್ತನೊಡನೆ ಸತ್ತೆವು**. ಅಲ್ಲದೆ ನಾವು "ಹೊಸಬರಾಗಿ ನಡಕೊಳ್ಳುವದಕ್ಕೆ" ನೀರಿನ ಸಮಾಧಿಯೊಳಗಿಂದ ಎಬ್ಬಿಸಲ್ಪಟ್ಟಿರುವ ಕಾರಣ (6:4) **ಆತನೊಡನೆ ಜೀವಿಸುವೆವೆಂದು ನಂಬುತ್ತೇವೆ.**

**ವಚನ 9. ಯಾಕೆಂದರೆ ಕ್ರಿಸ್ತನು ಸತ್ತ ಮೇಲೆ ಜೀವಿತನಾಗಿ ಎದ್ದು ಬಂದದರಿಂದ ಆತನು ಇನ್ನು ಮುಂದೆ ಸಾಯತಕ್ಕವನಲ್ಲ.** ಶತಮಾನಗಳಿಂದ, ಹಲವಾರು ಜನರು ಸತ್ತವರೊಳಗಿಂದ ಎಬ್ಬಿಸಲ್ಪಟ್ಟರು; ಆದರೆ ಕ್ರಿಸ್ತನು ಮಾತ್ರವೇ "ಇನ್ನು ಮುಂದೆ ಸಾಯದವನಾಗಿ" ಎಬ್ಬಿಸಲ್ಪಟ್ಟನು. ಆತನ ಪುನರುತ್ಥಾನದ ಬಳಿಕ, ಯೇಸು ನಾಲ್ವತ್ತು ದಿನಗಳ ಕಾಲ ತನ್ನ ಶಿಷ್ಯರಿಗೆ ಕಾಣಿಸಿಕೊಂಡನು (ಅಪೊಸ್ತಲರ ಕೃತ್ಯಗಳು 1:3). ಆ ಕಾಲದ ಬಳಿಕ, ಆತನು ದೇವರ ಸಿಂಹಾಸನದ ಬಳಿಗೆ ಏರಿ ಹೋದನು (ಅಪೊಸ್ತಲರ ಕೃತ್ಯಗಳು 1:9; 2:33, 34).

ಅದರ ಫಲಿತವಾಗಿ, **ಮರಣವು ಇನ್ನೂ ಆತನನ್ನು ಆಳುವದಿಲ್ಲ.** ಕ್ರಿಸ್ತನು ಈ ಭೂಮಿಗೆ ಬಂದಾಗ, ಆತನು "ಮನುಷ್ಯರಿಗೆ ಸಾದೃಶ್ಯನಾಗಿ ಮಾಡಲ್ಪಟ್ಟನು" (ಫಿಲಿಪ್ಪಿ 2:7); ಆತನು "ನರಾವತಾರವೆತ್ತಿದ್ದನು" (ಯೋಹಾನ 1:14). ಆದುದರಿಂದ, ಆತನು ಶರೀರದ ಬಲಹೀನತೆಗಳಿಗೆ ಮತ್ತು ಮೀತಿಗಳಿಗೆ-ಮರಣವೂ ಸೇರಿದಂತೆ-ಒಳಪಟ್ಟಿದ್ದನು. ಆತನು "ಶಿಲುಬೆಯ ಮರಣವನ್ನಾದರೂ ಹೊಂದುವಷ್ಟರ" ಮಟ್ಟಿಗೆ ಕರೆತರಲ್ಪಟ್ಟನು (ಫಿಲಿಪ್ಪಿ 2:8). ಹೇಗೂ, ಆತನು ಸತ್ತವರೊಳಗಿಂದ ಎಬ್ಬಿಸಲ್ಪಟ್ಟಾಗ, "ಆತನನ್ನು ಮುಟ್ಟುವ ಮರಣದ ಅಧಿಕಾರವು ಅಂತ್ಯಗೊಂಡಿತು" (Phillips).

**ವಚನ 10.** ಈ ವಚನವು ಯೇಸುವಿನ ಮರಣ ಮತ್ತು ಆತನ ಪುನರುತ್ಥಾನ ಜೀವಿತದ ನಡುವೆ ವ್ಯತ್ಯಾಸವನ್ನು ಮುಂದಿಡುತ್ತದೆ. ಆರಂಭದಲ್ಲಿ ಅದು ಹೇಳುವದೇನೆಂದರೆ, **ಆತನು ಸತ್ತದ್ದು ಒಂದೇ ಸಾರಿ, ಅದು ಪಾಪದ ಪಾಲಿಗೆ.** ಯೇಸು ಸ್ವತಃ ಯಾವ ಪಾಪವನ್ನು ಮಾಡಿರಲಿಲ್ಲ ಮತ್ತು ಆತನು ನಮ್ಮ ಪಾಪಗಳಿಗೋಸ್ಕರ ಮರಣಿಸಿದನೆಂಬದು ಸ್ಪಷ್ಟವಾಗಿರುತ್ತದೆ (2 ಕೊರಿಂಥ 5:21; ಇಬ್ರಿಯ 4:15; 1 ಪೇತ್ರ 2:22). ಹಾಗಾದರೆ, ಹೇಗೆ ಇಲ್ಲಿ ಯೇಸು "ಪಾಪದ ಪಾಲಿಗೆ ಸತ್ತನು" ಎಂದು ಹೇಳಲು ಸಾಧ್ಯ? ಈ ಮಾತುಗಳ ಅರ್ಥವು ಯೇಸು "ಪಾಪಕ್ಕೆ ಸಂಬಂದಿಸಿದಂತೆ" ಸತ್ತನೆಂಬದಾಗಿರಬಹುದು. Leon Morris ಈ ಅಭಿಪ್ರಾಯದೊಂದಿಗೆ ಸಹಮತ ವ್ಯಕ್ತಪಡಿಸುತ್ತಾನೆ: "ನಮ್ಮ ಪಾಪದ ಸಮಸ್ಯೆಯನ್ನು ನಿವಾರಿಸುವದಕ್ಕಾಗಿ ಈ ಪಾಪದ ಲೋಕದೊಳಗೆ ಬಂದು ಪಾಪವನ್ನು ನೀಗಿಸುವಂಥ ಮರಣವನ್ನು ಅನುಭವಿಸುವದು ಅಗತ್ಯವಾಗಿತ್ತು. ಆ ಮರಣವು ಕ್ರಿಸ್ತನು ಪಾಪದ ವಲಯದಲ್ಲಿರುವದನ್ನು ಅಂತ್ಯಗೊಳಿಸುವದಾಗಿತ್ತು. ಅದು ಪಾಪದೊಂದಿಗಿನ ಆತನ ಇಡೀ ಸಂಬಂಧದ ಮರಣ ಆಗಿತ್ತು."[30]

"ಒಂದೇ ಸಾರಿ" ಎಂಬುದು ἐφάπαξ (*ephapax*) ಎಂಬ ಗ್ರೀಕ್ ಪದದ ಅನುವಾದವಾಗಿದೆ, ಅದು ἅπαξ (*hapax* —"ಒಮ್ಮೆ") ಮತ್ತು ಬಲಗೊಳ್ಳುವ ἐπί (*epi*, "ಮೇಲೆ") ಎಂಬ ಪದಗಳನ್ನೊಳಗೊಂಡಿರುತ್ತದೆ. *Ephapax* ಎಂಬುದು "'ಒಂದೇ ಸಾರಿ"

ಮಾಡಿ ಮುಗಿಸಿದ ಕಾರ್ಯವನ್ನು ಸೂಚಿಸುತ್ತದೆ, ಅದು "ಸಾರ್ವಕಾಲಿಕ ಮೌಲ್ಯವುಳ್ಳದ್ದು, ಹೊರತು ಪುನರಾವರ್ತಿಸಬೇಕಾದದ್ದಲ್ಲ."[31] ಕರ್ತನು ಇನ್ನೆಂದಿಗೂ ಸಾಯಬೇಕಾದ ಅಗತ್ಯವಿರುವದಿಲ್ಲ ಎಂಬ ಅಂಶವನ್ನು ಈ ವಾಕ್ಯವು ಒತ್ತಿಹೇಳುತ್ತಿರಬಹುದಾಗಿದೆ. ಹೆಚ್ಚು ಸಂಭಾವ್ಯವಾದದ್ದೇನೆಂದರೆ, ಇದು ಇಬ್ರಿಯ 7:27 ರಲ್ಲಿ ಉಪಯೋಗಿಸಲ್ಪಟ್ಟಿರುವ ಅದೇ ಅರ್ಥದಲ್ಲಿಯೇ ಇಲ್ಲಿ ಉಪಯೋಗಿಸಲ್ಪಟ್ಟಿರುತ್ತದೆ. ಪ್ರಾಣಿಗಳ ಯಜ್ಞಗಳನ್ನು ಪುನಃ ಪುನಃ ಮಾಡಬೇಕಿತ್ತು, ಆದರೆ ಯೇಸುವಿನ ಯಜ್ಞವು ಒಂದೇ ಸಾರಿ ಮಾಡಲ್ಪಟ್ಟಿತು ಎಂದು ಇಬ್ರಿಯ ಪುಸ್ತಕದ ಲೇಖಕನು ಬರೆಯುತ್ತಾನೆ. ಅದು ಸರ್ವರಿಗೂ ಸರ್ವಕಾಲಕ್ಕೂ ಮಾಡಿದ್ದಾಗಿತ್ತು (ನೋಡಿರಿ ಇಬ್ರಿಯ 9:24-28).

ಪೌಲನು ಮುಂದೆ ಹೇಳಿದ್ದೇನೆಂದರೆ, **ಆತನು ಜೀವಿಸುವದು ದೇವರಿಗಾಗಿಯೇ.** "ಮರಣ" ಎಂಬುದರ ಮೂಲ ವಿಚಾರವು ಬೇರ್ಪಡುವಿಕೆ ಆಗಿರುವದರಿಂದ, "ಜೀವ" ವನ್ನು ನಾವು ಐಕ್ಯಗೊಳಿಸುವಿಕೆ ಎಂಬದಾಗಿ ಯೋಚಿಸಬಹುದು: ಆತ್ಮೀಕ ಜೀವವನ್ನು ಹೊಂದಿರುವದೆಂದರೆ ದೇವರಿಗೆ ಸಮೀಪರಾಗಿರುವದು (ನೋಡಿರಿ ಯೋಹಾನ 17:3). AB ಯು 10ನೇ ವಚನವನ್ನು ವಿಸ್ತರಿಸಿ ಹೀಗೆ ಅನುವಾದಿಸುತ್ತದೆ, "ಆತನು ದೇವರಿಗೆ ಜೀವಿಸುವವನು-ಆತನ ಸಂಗಡ ಮುರಿಯಲ್ಪಡದ ಅನ್ಯೋನ್ಯತೆಯಲ್ಲಿರುವವನು." ಯೇಸು ಮನುಷ್ಯರ ಪ್ರಯೋಜನಾರ್ಥವಾಗಿ ಸತ್ತನು, ಆದರೆ ಆತನು ತನ್ನ ತಂದೆಯ ಸಂಗಡ ಇರಲು ಮತ್ತು ಆತನನ್ನು ಮಹಿಮೆಪಡಿಸಲು ಜೀವಿಸುತ್ತಾನೆ.

**ವಚನ 11.** ಯೇಸುವಿನ ಮಾದರಿಯನ್ನು ಮನಸ್ಸಿನಲ್ಲಿಟ್ಟುಕೊಂಡು ಪೌಲನು ಹೇಳಿದ್ದೇನೆಂದರೆ, **ಅದೇ ಪ್ರಕಾರ ನೀವು ಸಹ ನಿಮ್ಮನ್ನು ಕ್ರಿಸ್ತಯೇಸುವಿನ ಐಕ್ಯದಿಂದ ಪಾಪದ ಪಾಲಿಗೆ ಸತ್ತವರೂ ದೇವರಿಗಾಗಿ ಜೀವಿಸುವವರೂ ಎಂದು ಎಣಿಸಿಕೊಳ್ಳಿರಿ.** "ಎಣಿಸಿಕೊಳ್ಳಿರಿ" ಎಂಬುದು λογίζομαι (*logizomai*), ಎಂಬುದು ಅಧ್ಯಾಯ 4 ರಲ್ಲಿ ಪ್ರಮುಖವಾಗಿ ಕಂಡುಬರುವ ಅದೇ ಲೆಕ್ಕಪತ್ರದ ಪದವಾಗಿರುತ್ತದೆ. ಪೌಲನು ತನ್ನ ವಾಚಕರಿಗೆ ತಮ್ಮ ಮನಸ್ಸುಗಳಲ್ಲಿ ಕೆಲವೊಂದು ಸತ್ಯಗಳನ್ನು ಗುರುತುಮಾಡಿಟ್ಟು ಕೊಳ್ಳುವಂತೆ ಹೇಳುತ್ತಿದ್ದಾನೆ. ಕೆಲವು ಸತ್ಯಗಳನ್ನು ಕೇವಲ ತಿಳಿದುಕೊಂಡರೆ ಮಾತ್ರ ಸಾಕಾಗಿರಲಿಲ್ಲ; ಅವರು ಆ ಸತ್ಯಗಳನ್ನು ಪರಿಗಣಿಸಬೇಕಿತ್ತು, ಅವುಗಳ ಪೂರ್ಣ ಭಾವಾರ್ಥಗಳನ್ನು ಸೂಕ್ಷ್ಮವಾಗಿ ಆಲೋಚಿಸಿಕೊಳ್ಳಬೇಕಾಗಿತ್ತು.

ಪೌಲನು ತನ್ನ ವಾಚಕರಿಗೆ ಅವರು ಎರಡು ಮಹತ್ವದ ಸತ್ಯಗಳನ್ನು ಕುರಿತು ಆಲೋಚಿಸಬೇಕೆಂದು ಬಯಸಿದನು. ಮೊದಲನೆಯದ್ದೇನೆಂದರೆ, ಅವರು ನಿಜವಾಗಿಯೂ "ಪಾಪದ ಪಾಲಿಗೆ ಸತ್ತಿದ್ದಾರೆ" ಎಂಬದನ್ನು ಆಲೋಚಿಸಬೇಕಿತ್ತು. ಅವರು ದೀಕ್ಷಾಸ್ನಾನ ಮಾಡಿಸಿಕೊಂಡಾಗ ಪಾಪದ ಪಾಲಿಗೆ ಸತ್ತಿದ್ದರು (6:2-4), ಆದರೆ ಅವರು ವಾಸ್ತವಿಕತೆಯ ಎಲ್ಲಾ ಅರ್ಥಗಳನ್ನೂ ಗ್ರಹಿಸದೇ ಹೋಗಿರಬಹುದು. ಹೇಗೂ, ಅವರು ತಮ್ಮನ್ನು ಕೇವಲ ಸತ್ತವರೆಂದು ಪರಿಗಣಿಸುವದು ಮಾತ್ರವೇ ಸಾಕಾಗಿರಲಿಲ್ಲ, ಆದರೆ "ಕ್ರಿಸ್ತಯೇಸುವಿನ ಐಕ್ಯದಿಂದ ದೇವರಿಗಾಗಿ ಜೀವಿಸುವವರು" ಎಂಬದನ್ನು ಸಹ ಪರಿಗಣಿಸಬೇಕಿತ್ತು (ಒತ್ತಿ ಹೇಳಿದ್ದು ನನ್ನದು). ನಮ್ಮ ಸೃಷ್ಟಿಕರ್ತನ ಸಂಗಡ ಈ ಆಪ್ತ ಸಂಬಂಧವನ್ನು ಹೊಂದಿರುವದು ನಿಜಕ್ಕೂ ಅಮೋಘವಾದ ಆಶೀರ್ವಾದವಾಗಿರುತ್ತದೆ! ಅದೇ ವೇಳೆಯಲ್ಲಿ, ಅದರಲ್ಲಿ ಒಂದು

ಗಂಭೀರವಾದ ಜವಾಬ್ದಾರಿ ಸಹ ಇರುತ್ತದೆ. ಆತನ "ಸಂಗಡ ಮುರಿಯಲ್ಪಡದ ಅನ್ಯೋನ್ಯತೆಯಲ್ಲಿ" (AB) ಜೀವಿಸಬೇಕೆಂದರೆ, ನಾವು ಆತನ ಚಿತ್ತವನ್ನು ನಮ್ಮ ಸರ್ವಸಾಮರ್ಥ್ಯದೊಂದಿಗೆ ಮಾಡುವದಕ್ಕೋಸ್ಕರ ನಮ್ಮನ್ನು ಸಮರ್ಪಿಸಿಕೊಳ್ಳಬೇಕಾಗಿರುತ್ತದೆ.

## ಪಾಪದ ಆಳ್ವಿಕೆಗೆ ಒಳಪಡುವವರಲ್ಲ (6:12-14)

**12ಹೀಗಿರುವದರಿಂದ ಸಾಯತಕ್ಕ ನಿಮ್ಮ ದೇಹದ ಮೇಲೆ ಪಾಪವನ್ನು ಆಳಗೊಡಿಸಿ ನೀವು ದೇಹದ ದುರಾಶೆಗಳಿಗೆ ಒಳಪಡಬೇಡಿರಿ. 13ಇದು ಮಾತ್ರವಲ್ಲದೆ ನೀವು ನಿಮ್ಮ ಅಂಗಗಳನ್ನು ಪಾಪಕ್ಕೆ ಒಪ್ಪಿಸುವವರಾಗಿದ್ದು ದುಷ್ಟತ್ವವನ್ನು ನಡಿಸುವ ಸಾಧನಗಳಾಗಮಾಡಬೇಡಿರಿ; ಆದರೆ ಸತ್ತವರೊಳಗಿಂದ ಜೀವಿತರಾಗಿರಲಾಗಿ ನಿಮ್ಮನ್ನು ದೇವರಿಗೆ ಒಪ್ಪಿಸಿಕೊಟ್ಟು ನಿಮ್ಮ ಅಂಗಗಳನ್ನು ನೀತಿಕೃತ್ಯಗಳನ್ನು ನಡಿಸುವ ಸಾಧನಗಳನ್ನಾಗಿ ಆತನಿಗೆ ಸಮರ್ಪಿಸಿರಿ. 14ಯಾಕೆಂದರೆ ಪಾಪವು ನಿಮ್ಮ ಮೇಲೆ ಅಧಿಕಾರನಡಿಸದು; ನೀವು ಧರ್ಮಶಾಸ್ತ್ರಕ್ಕೆ ಅಧೀನರಲ್ಲ, ಕೃಪೆಗೆ ಅಧೀನರಾಗಿದ್ದೀರಷ್ಟೆ.**

ರೋಮಾ 6ನೇ ಅಧ್ಯಾಯದ ಮೊದಲ ಭಾಗದಲ್ಲಿ, ಪೌಲನು (ಪರೋಕ್ಷಭಾವದಲ್ಲಿ) ಹೇಳಿಕೆಗಳನ್ನು ನೀಡಿದನು; ಈಗ ಆತನು ಆಜ್ಞಾರೂಪದಲ್ಲಿ (ನೇರವಾದ ಭಾವದಲ್ಲಿ) ಮಾತಾಡುತ್ತಾನೆ. ಆತನು ತನ್ನನ್ನು ಸೇರಿಸಿಕೊಂಡು ಮಾತಾಡಿದ್ದನು ("ನಾವು" ಮತ್ತು "ನಮ್ಮ"); ಈಗ ಆತನು ಎರಡನೆಯ ವ್ಯಕ್ತಿಯನ್ನುದ್ದೇಶಿಸಿ ಮಾತಾಡುತ್ತಾನೆ ("ನೀನು"). ಇಲ್ಲಿ, ಆತನ ಮುಖ್ಯ ಒತ್ತು ಮಾಹಿತಿ ನೀಡುವದಾಗಿರಲಿಲ್ಲ, ಆದರೆ ಹುರಿದುಂಬಿಸುವದಾಗಿತ್ತು.

**ವಚನ 12.** ಈ ವಾಕ್ಯಭಾಗದ ಮೂರನೆಯ ವಿಭಾಗವು **ಹೀಗಿರುವದರಿಂದ** ಎಂಬದಾಗಿ ಆರಂಭಗೊಳ್ಳುತ್ತದೆ. ಪೌಲನು ತಾನು ಇದುವರೆಗೂ ಹೇಳಿದ ಸಂಗತಿಗಳಿಂದ ಜೀವನದಲ್ಲಿ ಅಳವಡಿಸಿಕೊಳ್ಳುವ ಕಾರ್ಯಗಳನ್ನು ಮುಂದಿಡುವದಕ್ಕೆ ಸಿದ್ಧನಾಗಿ ದ್ದನು. ಆತನ ವಾಚಕರು ಪಾಪದ ಪಾಲಿಗೆ ಸತ್ತವರಾಗಿದ್ದರಿಂದ, ಅವರು ದೀಕ್ಷಾಸ್ನಾನದಿಂದ ಕ್ರಿಸ್ತನಲ್ಲಿ ಹೊಸ ಜೀವನಕ್ಕಾಗಿ ಎಬ್ಬಿಸಲ್ಪಟ್ಟಿದ್ದರಾದ್ದರಿಂದ, ಅವರು ಒಂದು ನಿರ್ದಿಷ್ಟವಾದ ರೀತಿಯಲ್ಲಿ ನಡಕೊಳ್ಳಬೇಕಿತ್ತು.

"ಹೀಗಿರುವದರಿಂದ" ಪೌಲನು ಹೇಳಿದ್ದೇನೆಂದರೆ, **ಸಾಯತಕ್ಕ ನಿಮ್ಮ ದೇಹದ ಮೇಲೆ ಪಾಪವನ್ನು ಆಳಗೊಡಿಸಿ ನೀವು ದೇಹದ ದುರಾಶೆಗಳಿಗೆ ಒಳಪಡಬೇಡಿರಿ.** James R. Edwards ಪ್ರಕಾರ, ಇದು "ರೋಮಾಪುರ ಪತ್ರಿಕೆಯಲ್ಲಿ ಪ್ರಥಮ ನೈತಿಕ ಎಚ್ಚರಿಸುವಿಕೆ" ಆಗಿರುತ್ತದೆ.[32] ವಿಶ್ವಾಸಿಗಳು ಭಕ್ತಿಜೀವಿತಗಳನ್ನು ನಡಿಸಬೇಕೆಂಬ ಬಗ್ಗೆ ನಾವು ಬಲವಾದ ಸೂಚನೆಗಳನ್ನು ಕಂಡಿದ್ದೇವೆ (ನೋಡಿರಿ 2:5-10), ಆದರೆ ದೇವರು ತನ್ನ ಹಿಂಬಾಲಕರಿಂದ ಏನು ನಿರೀಕ್ಷಿಸುತ್ತಾನೆಂಬ ಕುರಿತು ಇವುಗಳು ಪ್ರಥಮವಾದ ನೇರ ಸಲಹೆಗಳಾಗಿರುತ್ತದೆ.

ಕ್ರೈಸ್ತರು "ಪಾಪದ ವಶದಿಂದ ಬಿಡುಗಡೆ" ಹೊಂದಿದ್ದಾರೆಂಬದರ ಕಡೆಗೆ ಪೌಲನು ಗಮನವನ್ನು ಸೆಳೆದಿದ್ದನು (6:7), ಅವರು ಇನ್ನು ಮೇಲೆ "ಪಾಪದ ವಶದಲ್ಲಿರುವವರಲ್ಲ"

(6:6). ಇದು ಒಂದು ವೇಳೆ ಪಾಪದಿಂದ ನಮಗೆ ಇನ್ನು ಮೇಲೆ ಅಪಾಯವಿರುವದಿಲ್ಲ ಎಂಬ ಭಾವನೆಯನ್ನುಂಟು ಮಾಡಬಹುದಾಗಿದೆ-ಆದರೆ ಅದು ಹಾಗಿರುವದಿಲ್ಲ. ದಾಸತ್ವದಲ್ಲಿದ್ದ ಒಬ್ಬ ಗುಲಾಮನು ಬಿಡುಗಡೆಗೊಳಿಸಲ್ಪಟ್ಟ ಮೇಲೂ ಗುಲಾಮನಾಗಿ ಸೇವೆ ಮುಂದುವರೆಸಬಹುದಾದರೆ, ಪಾಪದ ದಾಸತ್ವದಿಂದ ಬಿಡಿಸಲ್ಪಟ್ಟವನು ಸಹ ನಂತರವೂ ಪಾಪಕ್ಕೆ ಸೇವೆ ಸಲ್ಲಿಸುವ ಸಾಧ್ಯತೆಯಿರುತ್ತದೆ. ಆ ಕಾರಣದಿಂದ, ಪೌಲನು ತನ್ನ ವಾಚಕರನ್ನು ಬೇಡಿಕೊಂಡಿದ್ದೇನೆಂದರೆ, "ಅದು ಸಂಭವಿಸುವಂತೆ ಬಿಡಬೇಡಿರಿ!"

ನಮ್ಮ ದೇಹಗಳನ್ನು ಪಾಪದ ಬದಲಾಗಿ ದೇವರ ಸೇವೆಗಾಗಿ ಉಪಯೋಗಿಸುವದರ ಮೇಲೆ ಅಪೊಸ್ತಲನು ಮುಖ್ಯ ಗಮನ ಹರಿಸುತ್ತಾನೆ: "ಸಾಯತಕ್ಕ ನಿಮ್ಮ ದೇಹದ ಮೇಲೆ ಪಾಪವನ್ನು ಆಳಗೊಡಿಸಬೇಡಿರಿ." "ಸಾಯತಕ್ಕ" ಎಂಬುದು θνητός (*thnētos*), ಎಂಬ ಪದದಿಂದ ಬಂದದ್ದು, ಅದರರ್ಥವು "ಮರಣಕ್ಕೆ ಅಧೀನ."[33] ಹೀಗೊಂದು ಮಾತಿರುತ್ತದೆ, "ನಾವು ಹುಟ್ಟಿದ ಕ್ಷಣದಿಂದಲೇ, ಸಾಯುವದಕ್ಕೆ ಆರಂಭಿಸುತ್ತೇವೆ." "ಸಾಯತಕ್ಕ" ಎಂಬದು ತಿಳಿಸುವದೇನೆಂದರೆ ದೇಹವು ಹೇಗಿದ್ದರೂ ಸಾಯುವದಾಗಿರುವದರಿಂದ ಅದಕ್ಕೆ ಸ್ಪಂದಿಸುವದು (ಮತ್ತು ಅದರ ಆಶೆಗಳನ್ನು ನೆರವೇರಿಸುವದು) ಅರ್ಥಹೀನವಾಗಿ ರುತ್ತದೆಂಬದೆ.

ಪೌಲನು ತನ್ನ ವಾಚಕರು "[ದೇಹದ] ದುರಾಶೆಗಳಿಗೆ ವಿಧೇಯರಾಗುವದನ್ನು" ಬಯಸಲಿಲ್ಲ. "ದುರಾಶೆಗಳು" ಎಂಬುದು ἐπιθυμία (*epithumia*) ಎಂಬದರಿಂದ ತೆಗೆದುಕೊಳ್ಳಲ್ಪಟ್ಟಿರುತ್ತದೆ, ಅದು "ಯಾವದರ ಮೇಲೆ ಹೃದಯವು ನೆಟ್ಟಿರುತ್ತದೋ ಆ ಸಂಗತಿ" ಎಂಬದನ್ನು ಸೂಚಿಸುತ್ತದೆ. ಈ ಪದವು ಯಾವದೇ ರೀತಿಯ ಬಲವಾದ ಆಶೆಗಳನ್ನು, ಒಳ್ಳೆಯ ಅಥವಾ ಕೆಟ್ಟದಾದ ಬಲಿಷ್ಠ ಆಶೆಗಳನ್ನು ಸೂಚಿಸುತ್ತದೆ, ಆದರೆ ಅದು ಸಾಮಾನ್ಯವಾಗಿ ದುರಾಶೆಗಳನ್ನು ("ದುರಿಚ್ಛೆಗಳು") ಸೂಚಿಸುತ್ತದೆ.

ದೇವರು ನಮ್ಮ ದೇಹಗಳನ್ನು ಆಶೆಗಳಿರುವಂತೆ ಉಂಟುಮಾಡಿದ್ದಾನೆ, ಉದಾಹರಣೆಗೆ, ಆಹಾರಕ್ಕಾಗಿ ಆಶಿಸುವದು. ದೇವರು ಈ ಆಶೆಗಳನ್ನು ನಮ್ಮ ಒಳ್ಳೇದಕ್ಕೋಸ್ಕರವೂ ತನ್ನ ಉದ್ದೇಶಗಳನ್ನು ನೆರವೇರಿಸುವದಕ್ಕೋಸ್ಕರವೂ ಇಟ್ಟನು. ಹೇಗೂ, ದೇವರ ಮಿಕ್ಕ ಎಲ್ಲಾ ವರದಾನಗಳ ವಿಷಯದಲ್ಲಿರುವ ಹಾಗೆಯೇ, ಈ ಆಶೆಗಳನ್ನು ದುರ್ಬಳಕೆ ಮಾಡಿಕೊಳ್ಳಬಹುದಾಗಿದೆ. ಸೈತಾನನು ತಪ್ಪುದಾರಿಗಳಿಂದ, ದೇವರಿಗೆ ಅಸಮಧಾನವುಂಟು ಮಾಡುವಂಥ ದಾರಿಗಳಲ್ಲಿ ನಮ್ಮ ಆಶೆಗಳನ್ನು ನೆರವೇರಿಸಿಕೊಳ್ಳುವಂತೆ ಪ್ರೇರೇಪಿಸುತ್ತಾನೆ. ಯಾಕೋಬನು ಬರೆದದ್ದೇನೆಂದರ, "ಪ್ರತಿಯೊಬ್ಬನೂ ತನ್ನಲ್ಲಿರುವ ಆಶಾಪಾಶದಿಂದ ಎಳೆಯಲ್ಪಟ್ಟು ಮರುಳುಗೊಂಡವನಾಗಿ ಪ್ರೇರೇಪಿಸಲ್ಪಡುತ್ತಾನೆ" (1:14).

**ವಚನ 13.** ಪೌಲನು ತನ್ನ ಹುರಿದುಂಬಿಸುವಿಕೆಯನ್ನು ಮುಂದುವರೆಸುತ್ತಾನೆ, **ಇದು ಮಾತ್ರವಲ್ಲದೆ ನೀವು ನಿಮ್ಮ ಅಂಗಗಳನ್ನು ಪಾಪಕ್ಕೆ ಒಪ್ಪಿಸುವವರಾಗಿದ್ದು ದುಷ್ಟತ್ವವನ್ನು ನಡಿಸುವ ಸಾಧನಗಳಾಗಮಾಡಬೇಡಿರಿ.** "ಒಪ್ಪಿಸುವವರಾಗಿ" ಎಂಬುದು παρίστάνω (*paristanō*, ಪರಿಸ್ಟಾನೋ) ಎಂಬದರಿಂದ ಬಂದದ್ದು, ಇದು παρίστημι (*paristēmi*) ಎಂಬದಕ್ಕಿಂತ ಸ್ವಲ್ಪ ವ್ಯತ್ಯಾಸವಾಗಿರುತ್ತದೆ. ಈ ಪದವು παρά (*para* "ಪಕ್ಕದಲ್ಲಿ") ಮತ್ತು

ἵστημι (*histēmi*, "ನಿಲ್ಲು") ಎಂಬ ಪದಗಳ ಸಂಯೋಜನೆಯಾಗಿರುತ್ತದೆ. ಅದರರ್ಥವು "ಪಕ್ಕದಲ್ಲಿ ಇಡು, ಒಬ್ಬನ ವಶಕ್ಕೆ ಒಪ್ಪಿಸು" ಎಂದಾಗಿರಬಲ್ಲದು.[34] ಈ ಸನ್ನಿವೇಶದಲ್ಲಿ, *Paristanō* (ಪರಿಸ್ಟಾನೋ) ಎಂಬದನ್ನು ಬಹುಶಃ ಒಂದು ಯಜ್ಞಸಂಬಂಧಿತ ಭಾಷೆಯಲ್ಲಿ ಅರ್ಥಮಾಡಿಕೊಳ್ಳತಕ್ಕದ್ದು (ನೋಡಿರಿ 12:1). "ಒಪ್ಪಿಸುವವರಾಗಿ" ಎಂಬದರ ಜೊತೆಗೆ ಈ ಪದವನ್ನು "ಅರ್ಪಿಸು," "ಪ್ರತಿಷ್ಠಿಸು," ಅಥವಾ "ಸಮರ್ಪಿಸು" ಎಂದು ಸಹ ಅನುವಾದಿಸಬಹುದು. "ನಿಮ್ಮ ದೇಹದ ಅಂಗಗಳು" ಎಂಬುದು ಸ್ಪಷ್ಟವಾಗಿ ಕಣ್ಣುಗಳು, ಕಿವಿ, ಬಾಯಿ, ಕೈಗಳು ಮತ್ತು ಕಾಲುಗಳು ಇತ್ಯಾದಿ ನಮ್ಮ ಶರೀರದ ಭಾಗಗಳು. ಈ ಪ್ರತಿಯೊಂದು ಅಂಗವನ್ನು ದುಷ್ಟತನಕ್ಕೆ ಒಪ್ಪಿಸಿಕೊಡುವದು ಸಾಧ್ಯವಿರುತ್ತದೆ.

ನಾವು ನಮ್ಮ ದೇಹದಿಂದ ಮಾತ್ರವೇ ಪಾಪ ಮಾಡುತ್ತೇವೆಂದು ಯೋಚಿಸಬಾರದು, ನಿಜವೇನೆಂದರೆ ಪಾಪದ ಕೃತ್ಯಗಳು ನಮ್ಮ ಹೃದಯಗಳಲ್ಲಿ ಉದ್ಭವವಾಗುತ್ತವೆ (ಲೂಕ 6:45). ಆದ್ದರಿಂದ Edwards ಹೇಳಿದ್ದೇನೆಂದರೆ, "ಆದುದರಿಂದ . . . 13ನೇ ವಚನದಲ್ಲಿ ಕೇವಲ ಶಾರೀರಿಕ ದೇಹಕ್ಕೆ ಮಾತ್ರವೇ ಸಿಮೀತಗೊಳ್ಳುವ ಅಗತ್ಯವಿಲ್ಲ, ಯಾಕೆಂದರೆ ಅದು ನಿಶ್ಚಯವಾಗಿಯೂ ಎಲ್ಲಾ ಮಾನವ ತಲಾಂತುಗಳನ್ನು ಮತ್ತು ಸಾಮರ್ಥ್ಯಗಳನ್ನು ಒಳಗೊಂಡಿರುತ್ತದೆ."[35] AB ಯಲ್ಲಿ ಹೀಗಿರುತ್ತದೆ, "ಶಾರೀರಿಕ ಸದಸ್ಯರು [ಮತ್ತು ಅಂಗಗಳು]." CJB ಯು ಹೇಳುವದೇನೆಂದರೆ, "ನಿಮ್ಮ ಯಾವದೇ ಭಾಗವನ್ನು ದುಷ್ಟತ್ವದ ಸಾಧನವಾಗುವಂತೆ ಪಾಪಕ್ಕೆ ಅರ್ಪಿಸಬೇಡಿರಿ" (ಒತ್ತಿ ಹೇಳಿದ್ದು ನನ್ನದು).

"ಸಾಧನಗಳಾಗಿ" ಎಂಬದು ὅπλον (*hoplon*) ಎಂಬ ಬಹುವಚನದಿಂದ ಬರುತ್ತದೆ, ಅದು "ಉಪಕರಣ" ಎಂಬ ಅರ್ಥವನ್ನು ಕೊಡಬಲ್ಲದು. ಈ ಪದವು ಹೊಸ ಒಡಂಬಡಿಕೆಯಲ್ಲಿ ಸಾಮಾನ್ಯವಾಗಿ "ಆಯುಧಗಳು" ಅಥವಾ "ಯುದ್ಧಾಯುಧ" ಎಂದು ಅನುವಾದಿಸಲ್ಪಟ್ಟಿರುತ್ತದೆ (13:12; ಯೋಹಾನ 18:3; 2 ಕೊರಿಂಥ 6:7; 10:4). Vine ಹೇಳಿದ್ದೇನೆಂದರೆ ಬಹುಶಃ ಈ ಸನ್ನಿವೇಶದಲ್ಲಿ ಸಹ "ಸಾದೃಶ್ಯವು ಮಿಲಿಟರಿ" ಅರ್ಥವನ್ನು ಹೊಂದಿದೆ.[36] ಮತ್ತೊಂದು ಕಡೆಯಲ್ಲಿ, ಪೌಲನು ನಾವೆಲ್ಲರು ಆತ್ಮೀಕ ಯುದ್ಧದಲ್ಲಿದ್ದೇವೆ ಎಂಬದನ್ನು ಒತ್ತಿ ಹೇಳುತ್ತಾನೆ (ಎಫೆಸ 6:10-17). ಆ ಯುದ್ಧದಲ್ಲಿ, ನಾವು ಕರ್ತನ ಪಕ್ಷದಲ್ಲಾದರೂ ಇರುತ್ತೇವೆ ಅಥವಾ ಸೈತಾನನ ಪಕ್ಷದಲ್ಲಾದರೂ ಇರುತ್ತೇವೆ. ನಾವು ನಮ್ಮ ದೇಹಗಳನ್ನು (ಮತ್ತು ಅದರ ಎಲ್ಲಾ ಅಂಗಗಳನ್ನು) ದುಷ್ಟತ್ವಕ್ಕೆ ಸಮರ್ಪಿತವಾಗಿ ಅಥವಾ ಒಳ್ಳೇದಕ್ಕೆ ಸಮರ್ಪಿತವಾಗಿ ಉಪಯೋಗಿಸಬಹುದಾಗಿದೆ.

ದುಷ್ಟತನವನ್ನು ನಡಿಸದಂತೆ ದೂರವಿದ್ದರೆ ಮಾತ್ರವೇ ಸಾಲದು; ನಾವು ಒಳ್ಳೇದನ್ನು ಸಹ ಮಾಡಬೇಕು. "ತೋಟದಲ್ಲಿನ ಕಳೆಗಳನ್ನು ಕಿತ್ತುಹಾಕಿದರೆ ಸಾಕಾಗುವದಿಲ್ಲ; ನಾವು ಹೂಗಳ ಹಾಗೂ ತರಕಾರಿಗಳ ಬೀಜಗಳನ್ನು ಸಹ ಬಿತ್ತಬೇಕು." ಆದ್ದರಿಂದ ಪೌಲನು ಹೇಳಿದ್ದೇನೆಂದರೆ, ಆದರೆ ಸತ್ತವರೊಳಗಿಂದ ಜೀವಿತರಾಗಿರಲಾಗಿ ನಿಮ್ಮನ್ನು ದೇವರಿಗೆ ಒಪ್ಪಿಸಿಕೊಟ್ಟು ನಿಮ್ಮ ಅಂಗಗಳನ್ನು ನೀತಿಕೃತ್ಯಗಳನ್ನು ನಡಿಸುವ ಸಾಧನಗಳನ್ನಾಗಿ (ಆಯುಧಗಳನ್ನಾಗಿ) ಆತನಿಗೆ ಸಮರ್ಪಿಸಿರಿ (ಅರ್ಪಿಸಿರಿ). TEV ಯಲ್ಲಿ "ನೀತಿಯ ಉದ್ದೇಶಕ್ಕಾಗಿ ಉಪಯೋಗಿಸಲ್ಪಡುವಂತೆ ನಿಮ್ಮ ಸಂಪೂರ್ಣ ಜೀವಿತವನ್ನು ಆತನಿಗೆ ಒಪ್ಪಿಸಿಕೊಡಿರಿ" ಎಂದಿರುತ್ತದೆ.

Barclay ಗಮನಕ್ಕೆ ತಂದದ್ದೇನೆಂದರೆ ದೇವರು ಭೂಮಿಯ ಮೇಲೆ ತನ್ನ ಚಿತ್ತವನ್ನು ನೆರವೇರಿಸುವದಕ್ಕೆ ಮಾನವ ದೇಹಗಳನ್ನು ಉಪಯೋಗಿಸುತ್ತಾನೆ.[37] ಒಂದು ಮಾತನ್ನು ಹೇಳಲ್ಪಡಬೇಕೆಂದು ಆತನು ಬಯಸುವದಾದರೆ, ಆತನು ಅದನ್ನು ಮಾತಾಡುವದಕ್ಕೆ ಒಬ್ಬ ಮನುಷ್ಯನನ್ನು ಆರಿಸಿಕೊಳ್ಳುತ್ತಾನೆ. ಆತನು ಒಂದು ಕೃತ್ಯವು ನಡೆಯಬೇಕೆಂದು ಬಯಸುವದಾದರೆ, ಅದನ್ನು ಮಾಡುವದಕ್ಕೆ ಒಬ್ಬ ವ್ಯಕ್ತಿಯನ್ನು ನೇಮಿಸುವನು. ಒಬ್ಬನು ಸಂತೈಸಲ್ಪಡಬೇಕೆಂದು ಆತನು ಇಚ್ಚಿಸುವದಾದರೆ, ಆ ವ್ಯಕ್ತಿಯನ್ನು ಪ್ರೋತ್ಸಾಹಿಸುವದಕ್ಕೆ ಯಾರಾದರೊಬ್ಬರನ್ನು ಏರ್ಪಡಿಸುತ್ತಾನೆ. ಪೌಲನು ತನ್ನ ವಾಚಕರಿಗೆ (ನಮಗೆ ಸಹ) ಈ ಭೂಮಿಯ ಮೇಲೆ ತನ್ನ ಚಿತ್ತವನ್ನು ನೆರವೇರಿಸುವದಕ್ಕೆ ದೇವರಿಂದ ಉಪಯೋಗಿಸಲ್ಪಡ ಬಹುದಾದ ಜನರಾಗಿ ಇರಬೇಕೆಂದು ಬೇಡಿಕೊಳ್ಳುತ್ತಿದ್ದಾನೆ.

ಅಪೊಸ್ತಲನು ತನ್ನ ವಾಚಕರನ್ನು "ಸತ್ತವರೊಳಗಿಂದ ಜೀವಿತರಾಗಿರಲಾಗಿ" ಎಂದು ಹೇಳುವ ಮೂಲಕ ಒಂದು ಬಲವಾದ ಸ್ಫೂರ್ತಿಯನ್ನು ಸೇರಿಸುತ್ತಿದ್ದಾನೆ. Phillips ಇದನ್ನು ಹೀಗೆ ಅನುವಾದಿಸುತ್ತದೆ, "ನಿಶ್ಚಯವಾಗಿದ್ದ ಮರಣದಿಂದ ತಪ್ಪಿಸಲ್ಪಟ್ಟವರಾಗಿ." ಶಾರೀರಿಕ ಮರಣದಿಂದ ಕಾಪಾಡಲ್ಪಟ್ಟವನೊಬ್ಬನ ಸಹಜವಾದ ಪ್ರತಿಕ್ರಿಯೆಯು ತನ್ನನ್ನು ಕಾಪಾಡಿದವನಿಗೆ ಕೃತಜ್ಞತೆಯನ್ನು ವ್ಯಕ್ತಪಡಿಸುವದಾಗಿರುತ್ತದೆ. ಅದೇ ರೀತಿಯಲ್ಲಿ, ನಿಶ್ಚಯವಾಗಿದ್ದ ಆತ್ಮೀಕ ಮರಣದಿಂದ ಕಾಪಾಡಲ್ಪಟ್ಟಿರುವವರು ತಮ್ಮ ಜೀವಿತಗಳನ್ನು ದೇವರಿಗೆ ಅರ್ಪಿಸಿಕೊಳ್ಳುವ ಮೂಲಕ ಆತನಿಗೆ ತಮ್ಮ ಕೃತಜ್ಞತೆಯನ್ನು ತೋರ್ಪಡಿಸಬೇಕಾಗಿರುತ್ತದೆ.

**ವಚನ 14.** ಪೌಲನು ಈ ವಿಭಾಗವನ್ನು 1 ರಿಂದ 13 ವಚನಗಳಲ್ಲಿನ ಚರ್ಚೆಯನ್ನು ಸಾರಾಂಶಗೊಳಿಸುವ, 1ನೇ ವಚನದಲ್ಲಿನ ಪ್ರಶ್ನೆಗೆ ಉತ್ತರಿಸುವಂಥ ಮತ್ತು 6:15-23 ವಚನಗಳಲ್ಲಿ ಸಿಕ್ಕುವ ವ್ಯಾಖ್ಯಾನಗಳಿಗೆ ಒಂದು ಸೇತುವೆಯಾಗುವಂಥ ಹೇಳಿಕೆಯೊಂದಿಗೆ ಮುಕ್ತಾಯಗೊಳಿಸುತ್ತಾನೆ. ಆತನ ಹೇಳಿಕೆಯು ಈ ಮಾತುಗಳೊಂದಿಗೆ ಆರಂಭವಾಗುತ್ತದೆ: ಯಾಕೆಂದರೆ ಪಾಪವು ನಿಮ್ಮ ಮೇಲೆ ಅಧಿಕಾರ ನಡಿಸದು. "ನಡಿಸದು" ಎಂಬ ಪದವು ಕ್ರೈಸ್ತನ ಜೀವಿತದಲ್ಲಿ ಪಾಪಕ್ಕೆ ನಿಯಂತ್ರಣ ತೆಗೆದುಕೊಳ್ಳುವದು ಅಸಾಧ್ಯ ಎಂಬ ಅರ್ಥವನ್ನು ನೀಡುವದಿಲ್ಲ. ಅಂಥ ವ್ಯಾಖ್ಯಾನವು ದೇವರ ಮಕ್ಕಳನ್ನು ಪಾಪ ಮಾಡದಂತೆ ಪ್ರೋತ್ಸಾಹಿಸುವದಕ್ಕೆ ಬರೆಯಲ್ಪಟ್ಟಂಥ ವಾಕ್ಯಭಾಗದ ತಿರುಳನ್ನೇ ಹಾಳುಮಾಡುವದು.

ಒಂದು ಆಜ್ಞೆಯನ್ನು ಕೊಡುವದಕ್ಕಾಗಿ ಭವಿಷ್ಯತ್ಕಾಲದ ಪದವನ್ನು ಉಪಯೋಗಿಸಬಹುದಾಗಿದೆ.[38] ಬೇರೆ ಮಾತುಗಳಲ್ಲಿ ಹೇಳುವದಾದರೆ, ನೀವು ಒಬ್ಬರಿಗೆ, "ನೀವು ಅದನ್ನು ಮಾಡಬಾರದು," ಎಂದು ಹೇಳಬಹುದು, ಆಗ ನಿಮ್ಮ ಮಾತಿನ ಅರ್ಥವೇನಾಗಿರುವದೆಂದರೆ "ನೀವು ಅದನ್ನು ಮಾಡಬಹುದು, ಆದರೆ ನೀವು ಮಾಡಿದರೆ ಸಂಕಷ್ಟದಲ್ಲಿ ಬೀಳುವಿರಿ!" ಉದಾಹರಣೆಗೆ, ದೇವರು ಆದಾಮನಿಗೆ ಹೇಳಿದ್ದೇನೆಂದರೆ, "ಒಳ್ಳೇದರ ಕೆಟ್ಟದ್ದರ ಅರುಹನ್ನು ಹುಟ್ಟಿಸುವ ಮರದ ಹಣ್ಣನ್ನು ಮಾತ್ರ ತಿನ್ನಬಾರದು" (ಆದಿಕಾಂಡ 2:17; ಒತ್ತು ಸೇರಿಸಲಾಗಿದೆ). ಖಂಡಿತವಾಗಿಯೂ, ಆದಾಮನು ಮರದ ಹಣ್ಣನ್ನು ತಿನ್ನಬಹುದಿತ್ತು ಮತ್ತು ತಿಂದನು ಸಹ-ಮತ್ತು ಆತನು ಅದರ

ದುಷ್ಪರಿಣಾಮಗಳನ್ನು ಅನುಭವಿಸಬೇಕಾಯಿತು.

ಪೌಲನು "ಪಾಪವು ನಿಮ್ಮ ಮೇಲೆ ಅಧಿಕಾರ ನಡಿಸದು" ಎಂದು ಹೇಳಿದಾಗ, ಆತನು ತನ್ನ ವಾಚಕರಿಗೆ ನಿಶ್ಚಯತೆಯನ್ನು ನೀಡುವವನಾಗಿ ಅವರು ಪಾಪ ಮಾಡುವ ಅಗತ್ಯವಿಲ್ಲ ಯಾಕೆಂದರೆ ಅವರಿಗೆ ಪಾಪದ ಮೇಲೆ ಜಯವು ಕೊಡಲ್ಪಟ್ಟಿದೆ ಎಂದು ತಿಳಿಸುತ್ತಾನೆ. ಅಲ್ಲದೆ ಎಂದಿಗೂ ಪಾಪಕ್ಕೆ ತಮ್ಮ ಜೀವಿತಗಳಲ್ಲಿ ದೊರೆತನ ನಡಿಸಲು ಅವಕಾಶ ಕೊಡಬಾರದೆಂದು ಸಹ ಬೇಡಿಕೊಳ್ಳುತ್ತಿದ್ದಾನೆ. Jim McGuiggan ಬರೆದದ್ದೇನೆಂದರೆ, "'ಪಾಪವು ನಿಮ್ಮ ಮೇಲೆ ಕರ್ತನಾಗಿರದು' ಎಂಬದು ಭರವಸೆ ಮಾತ್ರವೇ ಅಲ್ಲ, ಅದು ಆಯುಧಗಳನ್ನು ಧರಿಸಿಕೊಳ್ಳಲು ಕರೆ [ಸಹ] ಆಗಿರುತ್ತದೆ."[39] CEV ಯಲ್ಲಿ "ಪಾಪವು ನಿಮ್ಮ ಜೀವಿತಗಳನ್ನು ಆಳ್ವಿಕೆಮಾಡುತ್ತಲೇ ಇರುವಂತೆ ಅನುಮತಿಸಬೇಡಿರಿ."

ಈ ವಿಭಾಗದ ಕಡೆಯ ಭಾಗದಲ್ಲಿ, ಪಾಪವು ಏಕೆ ಅವರ ಯಜಮಾನನಾಗಿರ ಬಾರದೆಂಬ ಬಗ್ಗೆ ಪೌಲನು ತನ್ನ ವಾಚಕರಿಗೆ ಹೇಳುತ್ತಾನೆ: **ನೀವು ಧರ್ಮಶಾಸ್ತ್ರಕ್ಕೆ ಅಧೀನರಲ್ಲ, ಕೃಪೆಗೆ ಅಧೀನರಾಗಿದ್ದೀರಷ್ಟೇ.** ಕೆಲವು ಈ ಮಾತುಗಳನ್ನು ಅವುಗಳ ಸನ್ನಿವೇಶದಿಂದ ಹೊರಕ್ಕೆ ತೆಗೆದು ಅಪಾರ್ಥಕಲ್ಪಿಸಿ ತಮ್ಮ ಜೀವಿತದ ಘೋಷವಾಕ್ಯವಾಗಿ ಮಾಡಿಕೊಂಡಿದ್ದಾರೆ: "ನಾವು ಧರ್ಮಶಾಸ್ತ್ರದ ಅಧೀನರಲ್ಲ, ಆದರೆ ಕೃಪೆಯ ಅಧೀನರು!" Moo ತೋರಿಸಿಕೊಟ್ಟದ್ದೇನೆಂದರೆ, "ನಾವು ಧರ್ಮಶಾಸ್ತ್ರಕ್ಕೆ ಅಧೀನರಲ್ಲ" ಎಂದು ಪೌಲನು ಹೇಳಿದಾಗ, "ಕ್ರೈಸ್ತರಿಗೆ ಜವಾಬ್ದಾರರಾಗಿರಬೇಕಾದ ಯಾವದೇ ಆಜ್ಞೆಗಳೂ ಇರುವದಿಲ್ಲ" ಎಂಬರ್ಥದಲ್ಲಿ ಆತನು ಹೇಳಲಿಲ್ಲ.[40] ಬದಲಾಗಿ, ಇಲ್ಲಿ "ಧರ್ಮಶಾಸ್ತ್ರ" ಎಂಬ ಪದವನ್ನು "ಒಂದು ನೇಮನಿಷ್ಠೆಯ ವ್ಯವಸ್ಥೆ" ಎಂಬ ಅರ್ಥದಲ್ಲಿ ಉಪಯೋಗಿಸಲಾಗಿದೆ. ಅದೇ ರೀತಿಯಲ್ಲಿ, ಈ ವಚನದಲ್ಲಿ "ಕೃಪೆ" ಎಂಬುದು ಸಹ "ಒಂದು ಕೃಪೆಯ ವ್ಯವಸ್ಥೆ" ಯನ್ನು ಸೂಚಿಸುತ್ತದೆ. ಒಂದು ನೇಮನಿಷ್ಠೆಯ ವ್ಯವಸ್ಥೆಯು ಯಾವದೆಂದರೆ ಧರ್ಮಶಾಸ್ತ್ರವನ್ನು ಪರಿಪೂರ್ಣವಾಗಿ ಕೈಕೊಂಡು ನಡೆಯುವದರಿಂದ ರಕ್ಷಣೆ ಬರುತ್ತದೆ ಎಂಬದು, ಆದರೆ ಕೃಪೆಯ ವ್ಯವಸ್ಥೆಯು ಹೇಗಂದರೆ ರಕ್ಷಣೆಯು ದೇವರ ವರದಾನದ ರೂಪದಲ್ಲಿ ಬರುತ್ತದೆ ಎಂಬದು.

ಧರ್ಮಶಾಸ್ತ್ರದ ವ್ಯವಸ್ಥೆಯಲ್ಲಿ, ಪಾಪದ ದೊರೆತನದಲ್ಲಿ ಇರದಿರುವದಕ್ಕೆ ಅಸಾಧ್ಯವಾಗಿತ್ತು, ಯಾಕೆಂದರೆ ಪರಿಹಾರ ಕಂಡುಕೊಳ್ಳಲು ಯಾವ ದಾರಿಯೂ ಇರಲಿಲ್ಲ. Bell ಈ ಸಾಲನ್ನು ಬರೆಯುತ್ತಾನೆ: "ಧರ್ಮಶಾಸ್ತ್ರವು ಅಧೀನಪಡಿಸಿಕೊಳ್ಳಬಹುದು ಮತ್ತು ದಾಸರನ್ನಾಗಿಸಿಕೊಳ್ಳಬಹುದು, ಆದರೆ ಅದು ಕಠಿಣ ಹೃದಯಗಳನ್ನು ಮೃದುಗೊಳಿಸಲಾರದು, ಮೊಂಡ ಚಿತ್ತಗಳನ್ನು ಮುರಿಯಲಾರದು, ಮತ್ತು ಕೃತಜ್ಞತಾಭಾವ ಹಾಗೂ ಪ್ರೀತಿಯನ್ನು ಹುಟ್ಟಿಸಲಾರದು."[41] ಹೆಚ್ಚು ಪ್ರಾಮುಖ್ಯವಾಗಿ, ಧರ್ಮಶಾಸ್ತ್ರವು ಪಾಪಿಯನ್ನು ನೀತಿವಂತನನ್ನಾಗಿ ಮಾಡಲಾರದು. ಧರ್ಮಶಾಸ್ತ್ರಕ್ಕೆ ಮಾಡಲಾಗದ್ದೆ ಲ್ಲವನ್ನೂ ಕೃಪೆಯು ಮಾಡಲು ಶಕ್ತವಾಗಿತ್ತು. ಒಂದು ಕೃಪೆಯ ವ್ಯವಸ್ಥೆಯ ಅಡಿಯಲ್ಲಿ, ಒಬ್ಬನು ಪಾಪದಿಂದ ಮುಕ್ತನಾಗಿರಬಲ್ಲನು. ಕೃಪೆಯು ಪಾಪದ ಹಿಡಿತವನ್ನು ಮುರಿಯುತ್ತದೆ, ಅದು ಧರ್ಮಶಾಸ್ತ್ರಕ್ಕೆ ಎಂದಿಗೂ ಸಾಧ್ಯವಾಗಿರಲಿಲ್ಲ. ಈ ರೀತಿಯಲ್ಲಿ ನಮಗೆ 1ನೇ ವಚನದಲ್ಲಿನ ಆರೋಪಕ್ಕೆ ಒಂದು ಉತ್ತರವಿರುತ್ತದೆ: ಕೃಪೆಯು ಪಾಪಮಾಡುವಂತೆ—

ಪ್ರೋತ್ಸಾಹಿಸುವ ಬದಲಿಗೆ, ಪಾಪವನ್ನು ವಿರೋಧಿಸುತ್ತದೆ.

# ಧರ್ಮಶಾಸ್ತ್ರದಿಂದ ಸ್ವತಂತ್ರತೆ-ಪಾಪ ಮಾಡುವದಕ್ಕೆ ಒಂದು ಅನುಮತಿಯಲ್ಲ (6:15-23)

## ನೀತಿಗೆ ದಾಸರು (6:15-19)

**[15]ಹಾಗಾದರೇನು? ನಾವು ಧರ್ಮಶಾಸ್ತ್ರಾಧೀನರಲ್ಲ, ಕೃಪಾಧೀನರಾಗಿದ್ದೇವೆಂದು ಪಾಪವನ್ನು ಮಾಡಬಹುದೋ? ಎಂದಿಗೂ ಮಾಡಬಾರದು. [16]ನೀವು ಯಾವನಿಗೆ ದಾಸರಂತೆ ವಿಧೇಯರಾಗುತ್ತೇವೆಂದು ನಿಮ್ಮನ್ನು ಒಪ್ಪಿಸಿಕೊಡುತ್ತೀರೋ ಆ ಯಜಮಾನನಿಗೆ ದಾಸರಾಗಿಯೇ ಇರುವಿರೆಂಬದು ನಿಮಗೆ ಗೊತ್ತಿಲ್ಲವೋ? ಪಾಪಕ್ಕೆ ದಾಸರಾದರೆ ಮರಣವೇ ಫಲ; [ನಂಬಿಕೆಯೆಂಬ] ವಿಧೇಯತ್ವಕ್ಕೆ ದಾಸರಾದರೆ ನೀತಿಯೇ ಫಲ. [17]ಆದರೆ ನೀವು ಮುಂಚೆ ಪಾಪಕ್ಕೆ ದಾಸರಾಗಿದ್ದರೂ ನಿಮಗೆ ಕಲಿಸಲ್ಪಟ್ಟ ಬೋಧನೆಗೆ ನೀವು ಮನಃಪೂರ್ವಕವಾಗಿ ಅಧೀನರಾದದರಿಂದಲೂ [18]ಪಾಪದಿಂದ ಬಿಡುಗಡೆಯನ್ನು ಹೊಂದಿ ನೀತಿಗೆ ದಾಸರಾದದರಿಂದಲೂ ದೇವರಿಗೆ ಸ್ತೋತ್ರವಾಗಲಿ. [19]ನಿಮ್ಮ ನರಭಾವದ ಬಲಹೀನತೆಯ ದೆಸೆಯಿಂದ ಲೋಕರೀತಿಯಾಗಿ ಮಾತಾಡುತ್ತೇನೆ. ಅಧರ್ಮಮಾಡುವದಕ್ಕಾಗಿ ನಿಮ್ಮ ಅಂಗಗಳನ್ನು ಬಂಡುತನಕ್ಕೂ ಅಧರ್ಮಕ್ಕೂ ದಾಸರನ್ನಾಗಿ ಒಪ್ಪಿಸಿಕೊಟ್ಟಿದ್ದಂತೆಯೇ ಈಗ ಪರಿಶುದ್ಧರಾಗುವದಕ್ಕಾಗಿ ನಿಮ್ಮ ಅಂಗಗಳನ್ನು ನೀತಿಗೆ ದಾಸರನ್ನಾಗಿ ಒಪ್ಪಿಸಿಕೊಡಿರಿ.**

**ವಚನ 15.** ಪೌಲನು 14ನೇ ವಚನದಲ್ಲಿನ ತನ್ನ ಉಪದೇಶಕ್ಕೆ ಒಂದು ಆಕ್ಷೇಪಣೆಯನ್ನು ಎದುರುನೋಡಿದ್ದನು: **ಹಾಗಾದರೇನು? ನಾವು ಧರ್ಮಶಾಸ್ತ್ರಾಧೀನ ರಲ್ಲ,**[42] **ಕೃಪಾಧೀನರಾಗಿದ್ದೇವೆಂದು ಪಾಪವನ್ನು ಮಾಡಬಹುದೋ?** ಸ್ಪಷ್ಟವಾಗಿರುವ ಪ್ರಕಾರ, ಕೆಲವು ಜನರು ಈ ರೀತಿಯ ತೀರ್ಮಾನಕ್ಕೆ ಬಂದಿರುತ್ತಾರೆ. ಅವರು ಯೋಚಿಸುವದೇನೆಂದರೆ, ನಾವು ಧರ್ಮಶಾಸ್ತ್ರದ ವ್ಯವಸ್ಥೆಯ ಅಧೀನದಲ್ಲಿ ಇಲ್ಲವಾದಲ್ಲಿ, ನಾವು ಯಾವದೇ ಆಜ್ಞೆಯನ್ನು ಕೈಕೊಳ್ಳಬೇಕೆಂಬ ಕಡ್ಡಾಯವಿರುವದಿಲ್ಲ. ಅವರು ಜೀವಿಸುವ ರೀತಿಯು, "ನಮಗೆ ಇಷ್ಟಬಂದದ್ದನ್ನು ಮಾಡುವ ಸ್ವಾತಂತ್ರವಿದೆ, ಪಾಪದ ಜೀವಿತವನ್ನು ಸಹ ನಡಿಸುವ ಸ್ವಾತಂತ್ರ್ಯ" ಎಂಬಂತಿರುತ್ತದೆ. ಈ ರೀತಿಯ ಅಭಿಪ್ರಾಯದ ಕುರಿತು ಪೌಲನು ನೀಡಿದ ಉತ್ತರವು ಒಂದು ಆಘಾತಕಾರಿ ಘೋಷಣೆಯಾಗಿತ್ತು: **ಎಂದಿಗೂ ಮಾಡಬಾರದು!** ಆತನು 1ನೇ ವಚನದಲ್ಲಿ ಇದೇ ರೀತಿಯ ಪ್ರಶ್ನೆಯನ್ನು ಕೇಳಿದ್ದನು ಮತ್ತು 2ನೇ ವಚನದಲ್ಲಿ ಇದೇ ರೀತಿಯಾಗಿ ಉತ್ತರಿಸಿದ್ದನು.

ಪಾಪದ ಕುರಿತು 1ನೇ ವಚನ ಹಾಗೂ 15ನೇ ವಚನದಲ್ಲಿ ಕೇಳುವ ಪ್ರಶ್ನೆಗಳಲ್ಲಿ ಸ್ವಲ್ಪವೇ ವ್ಯತ್ಯಾಸವಿರುತ್ತದೆಂದು ಕೆಲವು ಲೇಖಕರು ಅಭಿಪ್ರಾಯಪಡುತ್ತಾರೆ.[43] ಪೌಲನು 1ನೇ ವಚನದಲ್ಲಿ ಕೇಳಿದ್ದೇನೆಂದರೆ, "ಹಾಗಾದರೆ . . . ನಾವು ಪಾಪದಲ್ಲಿ ಇನ್ನೂ ಇರಬೇಕೋ?" ಎಂದಾದರೆ, 15ನೇ ವಚನದಲ್ಲಿ, "ನಾವು ಪಾಪವನ್ನು ಮಾಡ ಬಹುದೋ?"

ಎಂದು ಕೇಳಿದನು (ಒತ್ತು ಸೇರಿಸಲಾಗಿದೆ). ಕೆಲವರು ನಂಬುವದೇನೆಂದರೆ 1ನೇ ವಚನದಲ್ಲಿ ಪೌಲನು, "ನಾವು ಒಂದು ಪಾಪದ ಜೀವಿತಶೈಲಿಯನ್ನು ಮುಂದುವರೆಸಬೇಕೋ?" ಎಂದು ಕೇಳುವವನಾಗಿದ್ದನು. 15ನೇ ವಚನದಲ್ಲಿ ಪೌಲನ ತಾತ್ಪರ್ಯವು, "ಆಗಾಗ ಪಾಪವನ್ನು ಮಾಡುವದು ಸರಿಯೋ?" ಎಂದಾಗಿತ್ತು. ಆ ರೀತಿಯ ಭಿನ್ನತೆಯನ್ನು ಮಾಡಬೇಕೋ ಬೇಡವೋ ಎಂಬದು ಏನೇ ಇದ್ದರೂ, ಪೌಲನು ಕ್ರೈಸ್ತರಿಗೆ ತಿಳಿಸಲಿಚ್ಚಿಸಿದ್ದೇನೆಂದರೆ ಪಾಪ ಮತ್ತು ಪಾಪ ಮಾಡುವದು ಕ್ರೈಸ್ತಜೀವಿತ ಶೈಲಿಗೆ ಸರಿಹೊಂದುವಂಥದ್ದಾಗಿರುವದಿಲ್ಲ. Bruce ವಾದಿಸಿದ್ದೇನೆಂದರೆ, "'ಕೃಪೆಯ ಅಧೀನದಲ್ಲಿ' ಇರುವದನ್ನು ಪಾಪ ಮಾಡುವದಕ್ಕೆ ಒಂದು ನೆವವಾಗಿ ಮಾಡಿಕೊಂಡರೆ ಒಬ್ಬನು 'ಕೃಪೆಯ ಅಧೀನದಲ್ಲಿಯೇ' ಇಲ್ಲ ಎಂಬದಕ್ಕೆ ಗುರುತಾಗಿರುತ್ತದೆ."[44]

ರೋಮಾ 6ನೇ ಅಧ್ಯಾಯದಲ್ಲಿ, ಪೌಲನು ಕ್ರೈಸ್ತರಾದ ನಾವು ಏಕೆ ಪಾಪ ಮಾಡಬಾರದೆಂಬದಕ್ಕೆ ಹಲವಾರು ಕಾರಣಗಳನ್ನು ಕೊಟ್ಟನು. 6:1-14 ರಲ್ಲಿರುವ ಕಾರಣ ಯಾವದೆಂದರೆ ನಾವು ಕ್ರಿಸ್ತನ ಮರಣದಲ್ಲಿ ಪಾಲುಗಾರರಾಗುವದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡಾಗ (6:3) ಪಾಪದ ಪಾಲಿಗೆ ಸತ್ತಿದ್ದೇವೆ ಎಂಬುದು (6:2). ನಾವು ಪಾಪದ ಪಾಲಿಗೆ ಸತ್ತಾಗ, ಅದು ನಮ್ಮನ್ನು ಪಾಪದ ದಾಸತ್ವದೊಳಗಿಂದ ಬಿಡುಗಡೆಗೊಳಿಸಿತು (6:7, 9, 14). ಪೌಲನು 6:15-23 ವಚನಗಳಲ್ಲಿ ದಾಸತ್ವದ ಕುರಿತ ತನ್ನ ಸಾದೃಶ್ಯವನ್ನು ವಿಸ್ತರಿಸಿ ಮತ್ತಷ್ಟು ವಿವರಿಸುತ್ತಾನೆ. ಆತನ ಮೂಲಭೂತ ವಾದವೇನೆಂದರೆ ನಾವು ಪಾಪಕ್ಕೆ ಸೇವೆ ಮಾಡಬಾರದು ಯಾಕೆಂದರೆ ಇನ್ನು ಮೇಲೆ ನಾವು ಪಾಪದ ದಾಸರಲ್ಲ, ಆದರೆ ಈಗ ನಾವು ದೇವರಿಗೆ ದಾಸರಾಗಿದ್ದೇವೆ.

**ವಚನ 16.** ಪೌಲನು ಹೀಗೆ ಕೇಳುವ ಮೂಲಕ ಆರಂಭಿಸುತ್ತಾನೆ, **ನೀವು ಯಾವನಿಗೆ ದಾಸರಂತೆ ವಿಧೇಯರಾಗುತ್ತೇವೆಂದು ನಿಮ್ಮನ್ನು ಒಪ್ಪಿಸಿಕೊಡುತ್ತೀರೋ ಆ ಯಜಮಾನನಿಗೆ ದಾಸರಾಗಿಯೇ ಇರುವಿರೆಂಬದು ನಿಮಗೆ ಗೊತ್ತಿಲ್ಲವೋ?** "ದಾಸರು" ಎಂಬ ಪದದಲ್ಲಿ ನಕಾರಾತ್ಮಕ ಭಾವಾರ್ಥವಿರುವದರಿಂದ ಕೆಲವು ತರ್ಜುಮೆಗಳು "ಸೇವಕರು" ಎಂದು ಅನುವಾದಿಸಿರುತ್ತವೆ (KJV; ASV); ಆದರೆ ಗ್ರೀಕ್ ವಾಕ್ಯಭಾಗದಲ್ಲಿ, ಈ ಪದವು δοῦλος (*doulos*) ಎಂಬದರ ಬಹುವಚನವಾಗಿರುತ್ತದೆ, ಅದು "ದಾಸನು" ಎಂಬ ಅರ್ಥವನ್ನು ಹೊಂದಿದೆ.

ಮೊದಲ ಶತಮಾನದ ಜನರು ದಾಸತ್ವದ ಬಗ್ಗೆ ಬಹಳ ನಿಕಟ ಪರಿಚಯವನ್ನು ಹೊಂದಿದ್ದರು. ರೋಮಾಪುರ ಮತ್ತು ರೋಮಾಯರ ಸಾಮ್ರಾಜ್ಯದಲ್ಲಿ ದಾಸರ ಜನಸಂಖ್ಯೆಯು ಅಧಿಕ ಪ್ರಮಾಣದಲ್ಲಿತ್ತು. ಅನೇಕರು, ಬಹುಶಃ ಪೌಲನ ವಾಚಕರಲ್ಲಿ ಬಹುತೇಕರು ರಾಜಕೀಯವಾಗಿಯೂ ಕಾನೂನುಬದ್ಧವಾಗಿಯೂ ಸ್ವತಂತ್ರರಾಗಿದ್ದರು; ಆದರೆ ಆತ್ಮೀಕವಾಗಿ ಪ್ರತಿಯೊಬ್ಬ ಮನುಷ್ಯನೂ ಯಾವದೋ ಒಂದಕ್ಕೆ ದಾಸನಾಗಿದ್ದಾನೆಂಬದನ್ನು ಅವರು ತಿಳಿಯಬೇಕೆಂಬದು ಪೌಲನ ಇಚ್ಚೆಯಾಗಿತ್ತು. ಪ್ರತಿಯೊಬ್ಬನೂ ಒಂದಿಲ್ಲಾ ಒಂದು ಸಂಗತಿಗೆ ವಿಧೇಯನಾಗುತ್ತಾನೆ-ಅದು ಆತನ ಸ್ವಂತ ಮಾತು ಹಾಗೂ ಇಚ್ಛೆಗಳಷ್ಟೆ ಸಹ ಆಗಿರಬಹುದು. ಹಾಗೆ ಮಾಡುವ ಮೂಲಕ, ಆತನು ಆ ಸಂಗತಿಗೆ ದಾಸನಾಗುತ್ತಾನೆ.

ಪೌಲನು ಹೀಗೆ ಹೇಳುವ ಮೂಲಕ ತನ್ನ ಮಾತನ್ನು ಮುಂದುವರೆಸುತ್ತಾನೆ **ಪಾಪಕ್ಕೆ ದಾಸರಾದರೆ ಮರಣವೇ ಫಲ; [ನಂಬಿಕೆಯೆಂಬ] ವಿಧೇಯತ್ವಕ್ಕೆ ದಾಸರಾದರೆ ನೀತಿಯೇ ಫಲ.** ಅಂತಿಮವಾಗಿ, ದಾಸರಾಗುವದಕ್ಕೆ ಆಯ್ಕೆಮಾಡುವ ಒಬ್ಬನ ಆರಿಸಿಕೊಳ್ಳುವಿಕೆಯು ಎರಡು ಅಂಶಗಳಿಗೆ ಬಂದು ನಿಲ್ಲುತ್ತದೆ: ಆತನು ತನ್ನ ದುರಾಶೆಗಳಿಗೆ ಒಳಪಡಬಹುದು ಮತ್ತು ಪಾಪಕ್ಕೆ ದಾಸನಾಗಿರಬಹುದು, ಅಥವಾ ಆತನು ದೇವರಿಗೆ ವಿಧೇಯನಾಗಿ (6:17) ಕರ್ತನನ್ನು ತನ್ನ ಯಜಮಾನನನ್ನಾಗಿ ಮಾಡಿಕೊಳ್ಳಬಹುದು.

ಕೆಲವರು ಇದಕ್ಕೆ ಆಕ್ಷೇಪ ಮಾಡಿ, "ನಾನು ಯಾರೊಬ್ಬರ ದಾಸನೂ ಅಲ್ಲ! ನಾನು ಸ್ವತಂತ್ರನು!" ಎಂದು ಹೇಳಬಹುದು. ಯೆಹೂದ್ಯರು ಆ ರೀತಿ ಹೇಳಿಕೊಂಡಾಗ, ಯೇಸು ಅವರಿಗೆ ಉತ್ತರಿಸಿದ್ದೇನೆಂದರೆ, "ಪಾಪ ಮಾಡುವವರೆಲ್ಲರು ಪಾಪಕ್ಕೆ ದಾಸರಾಗಿದ್ದಾರೆ" (ಯೋಹಾನ 8:33, 34). ದೇವರಿಲ್ಲದ ಜೀವನವನ್ನು ನಡಿಸುವ ಅನೇಕರಿಗೆ ತಾವು ಎಷ್ಟು ದಾಸತ್ವದಲ್ಲಿದ್ದಾರೆಂಬುದು ತಿಳಿದಿರುವದಿಲ್ಲ.

ಪ್ರತಿಯೊಬ್ಬರು ದಾಸರಾಗಿರುವರು; ಒಂದೇ ಒಂದು ಪ್ರಶ್ನೆಯು ಏನೆಂದರೆ ಆ ವ್ಯಕ್ತಿಯು ಯಾರಿಗೆ ದಾಸನಾಗಿರುವನು ಎಂಬದೇ. 16ನೇ ವಚನದ ಪ್ರಕಾರ, ಒಬ್ಬನು ಪಾಪಕ್ಕೆ ದಾಸನಾಗಿದ್ದರೆ, ಆತನು "ಮರಣ"—ಆತ್ಮೀಕ ಮರಣ-ಶಾಪಕ್ಕೆ ಗುರಿಯಾಗುವನು. ಒಬ್ಬನು ದೇವರಿಗೆ ದಾಸನಾಗಿದ್ದರೆ, ಆತನು "ನೀತಿ"—ಕರ್ತನ ಸಂಗಡ ಸರಿಯಾದ ಸಂಬಂಧದ ಆಶೀರ್ವಾದ ಪಡೆಯುವನು.

ಪಾಪವೋ ಅಥವಾ ದೇವರೋ- ನಾವು ಇಬ್ಬರಲ್ಲಿ ಒಬ್ಬರನ್ನು ಸೇವಿಸುತ್ತೇವೆ; ನಾವು ಇಬ್ಬರನ್ನೂ ಸೇವಿಸಲಾರೆವು. ಯೇಸು ಹೇಳಿದ್ದೇನೆಂದರೆ, "ಯಾವನೂ ಇಬ್ಬರು ಯಜಮಾನರಿಗೆ ಸೇವೆ ಮಾಡಲಾರನು" (ಮತ್ತಾಯ 6:24). ಇಂದು, ಕೆಲವರು ಒಂದಕ್ಕಿಂತ ಹೆಚ್ಚು ಉದ್ಯೋಗಗಳನ್ನು ಹೊಂದಿದ್ದು ಬಹು "ಯಜಮಾನರಿಗೆ" (ಮಾಲೀಕರಿಗೆ) ಸೇವೆ ಮಾಡುತ್ತಾರೆ, ಆದರೆ ದಾಸನ ವಿಷಯದಲ್ಲಿ ಅದೊಂದು ಆಯ್ಕೆ ಇರಲಿಲ್ಲ. ದಾಸನಿಗೆ ಇರುವ ಸಮಸ್ತವೂ—ಆತನ ಸಮಯವೂ—ಆತನ ಯಜಮಾನನಿಗೆ ಸೇರಿದ್ದಾಗಿತ್ತು. JB ಯು ಈ 16ನೇ ವಚನವನ್ನು ಹೀಗೆ ಅನುವಾದಿಸುತ್ತದೆ, "*ಏಕಕಾಲದಲ್ಲಿ* ನೀವು ಮರಣಕ್ಕೆ ನಡಿಸುವಂಥ ಪಾಪದ ದಾಸರೂ ನೀತಿಗೆ ನಡಿಸುವಂಥ ವಿಧೇಯತೆಗೆ ದಾಸರೂ ಆಗಿರಲಾರಿರಿ."

**ವಚನ 17.** ಪೌಲನು 16ನೇ ವಚನದ ಸಾಮಾನ್ಯ ನಿಮಯದಿಂದ ತನ್ನ ವಾಚಕರ ನಿರ್ದಿಷ್ಟವಾದ ಸ್ಥಿತಿಯೆಡೆಗೆ ಗಮನವನ್ನು ಹರಿಸುತ್ತಾನೆ. ಆತನು ಅವರು ಮುಂಚೆ ಯಾರಿಗೆ ಬದ್ಧರಾಗಿದ್ದರೆಂಬದನ್ನು ತಿಳಿಸುತ್ತಾನೆ: **ಆದರೆ ನೀವು ಮುಂಚೆ ಪಾಪಕ್ಕೆ ದಾಸರಾಗಿದ್ದರೂ ನಿಮಗೆ ಕಲಿಸಲ್ಪಟ್ಟ ಬೋಧನೆಗೆ ನೀವು ಮನಃಪೂರ್ವಕವಾಗಿ ಅಧೀನರಾದದರಿಂದಲೂ ಪಾಪದಿಂದ ಬಿಡುಗಡೆಯನ್ನು ಹೊಂದಿ ನೀತಿಗೆ ದಾಸರಾದದರಿಂದಲೂ ದೇವರಿಗೆ ಸ್ತೋತ್ರವಾಗಲಿ.** ಗತಕಾಲದಲ್ಲಿ, ಅವರು "ಪಾಪಕ್ಕೆ ದಾಸರಾಗಿದ್ದರು," ಆದರೆ ಅವರು ನಿಷ್ಠೆಯನ್ನು ಬದಲಾಯಿಸಿ ಕರ್ತನಿಗೆ ವಿಧೇಯರಾಗಲು ತೀರ್ಮಾನಿಸಿದ್ದರು. "ಅಧೀನರಾದದರಿಂದಲೂ" ಎಂಬುದು ಒಂದು ὑπακούω (*hupakouō*), ಸಂಯುಕ್ತ ಪದವಾಗಿದ್ದು, ἀκούω (*akouō*, "ಆಲಿಸು") ಮತ್ತು ὑπό (*hupo*, "ಅಡಿಯಲ್ಲಿ") ಎಂಬ

ಪದಗಳ ಸಂಯೋಜನೆಯಾಗಿರುತ್ತದೆ. ಈ ಪದವು ಆಲಿಸಲ್ಪಟ್ಟದ್ದಕ್ಕೆ ಒಂದು ಸಕರಾತ್ಮಕ ಪ್ರತಿಸ್ಪಂದಿಸುವಿಕೆಯನ್ನು ಸೂಚಿಸುತ್ತದೆ-ಅಧಿಕಾರವುಳ್ಳವನಿಗೆ ಅಧೀನಪಡಿಸಿಕೊಳ್ಳು ವದನ್ನು ಸೂಚಿಸುತ್ತದೆ (ನೋಡಿರಿ ಯಾಕೋಬ 1:22).

"ನಂಬಿಕೆಯಿಂದ ಮಾತ್ರವೇ ರಕ್ಷಣೆ" ಎಂದು ಕಲಿಸುವವರು 16 ಮತ್ತು 17 ವಚನಗಳಲ್ಲಿ ಪೌಲನು ವಿಧೇಯತೆಯ ಬಗ್ಗೆ ಒತ್ತು ಕೊಟ್ಟಿದ್ದನ್ನು ಕಂಡು ಮುಜುಗರಕ್ಕೊಳಗಾಗುತ್ತಾರೆ, ವಿಶೇಷವಾಗಿ ಇಲ್ಲಿ ಪಾಪದಿಂದ ಬಿಡುಗಡೆಗೊಳ್ಳುವ ಮುಂಚೆ ಇದ್ದ ವಿಧೇಯತೆಯ ಬಗ್ಗೆ ಹೇಳಲಾಗುತ್ತದೆ (6:17, 18). ಹೇಗೂ, ಪೌಲನ ಮಾತುಗಳು ಎಲ್ಲಾ ಮನುಷ್ಯರೊಳಗೆ "ನಂಬಿಕೆಯೆಂಬ ವಿಧೇಯತ್ವವನ್ನುಂಟು ಮಾಡಬೇಕೆಂಬ" ಆತನ ಗುರಿಯೊಂದಿಗೆ ಸಾಮ್ಯತೆಯಲ್ಲಿರುತ್ತವೆ (1:5; ನೋಡಿರಿ 16:26). Moo ಇದನ್ನು ಈ ರೀತಿಯಲ್ಲಿ ಹೇಳಿದನು: "ಪೌಲನು ವಿಧೇಯತೆಯ ಪ್ರಾಮುಖ್ಯತೆಯನ್ನು ಮನದಟ್ಟುಮಾಡಿಕೊಡಲು ಬಯಸುತ್ತಾ ನೆಂಬದು ಸ್ಪಷ್ಟವಾಗಿ ತೋರುತ್ತದೆ."[45]

ಪೌಲನ ವಾಚಕರು "ಮನಃಪೂರ್ವಕವಾಗಿ ಅಧೀನರಾಗಿದ್ದರು." "ಕರ್ತನು ಹೃದಯವನ್ನೇ ನೋಡುವವನಾಗಿದ್ದಾನೆ" ಎಂದು ಬೈಬಲ್ ಕಲಿಸುತ್ತದೆ (1 ಸಮು*ವೇಲ* 16:7). ವಾಕ್ಯಗಳುದ್ದಕ್ಕೂ, ಹೃದಯಪೂರ್ವಕವಾಗಿ ದೇವರ ಚಿತ್ತವನ್ನು ಮಾಡುವದರ ಕುರಿತು ಒತ್ತು ಕೊಡಲಾಗಿರುತ್ತದೆ (ನೋಡಿರಿ ಧರ್ಮೋಪದೇಶಕಾಂಡ 10:12; 1 ಸಮುವೇಲ 12:20; ಎಫೆಸ 6:6). ಕರ್ತನು ಪರಿಪೂರ್ಣ ವಿಧೇಯತೆಯನ್ನು ಅಪೇಕ್ಷಿಸುವದಿಲ್ಲ (ಯಾರೂ ಅದನ್ನು ಮಾಡಲಾಗದು), ಆದರೆ ಆತನು ಪೂರ್ಣಹೃದಯದ ವಿಧೇಯತೆಯನ್ನು ಅಪೇಕ್ಷಿಸುತ್ತಾನೆ.

ರೋಮಾಪುರದ ಕ್ರೈಸ್ತರು ಯಾವ ಸಂಕೋಚವಿಲ್ಲದೆ "ತಮಗೆ ಕಲಿಸಲ್ಪಟ್ಟ ಬೋಧನೆಗೆ" ವಿಧೇಯರಾಗಿದ್ದರು. "ಕಲಿಸಲ್ಪಟ್ಟ" ಎಂಬದರ ಅನುವಾದಿಸಲ್ಪಟ್ಟ ಪದವು τύπος (*tupos*) ಎಂಬ ಪದದಿಂದ ಬಂದಿದ್ದು ಅದರಿಂದಲೇ "ನಮೂನೆ" (type) ಎಂಬ ಪದವು ಬಂದಿರುತ್ತದೆ (5:14 ರ ಮೇಲಿನ ವ್ಯಾಖ್ಯಾನಗಳನ್ನು ನೋಡಿರಿ). *Tupos* "ವಿಧ," "ಸದೃಶ್ಯ," ಅಥವಾ "ನಮೂನೆ" ಎಂಬದನ್ನು ಸೂಚಿಸಬಲ್ಲದು. 6:17 ರಲ್ಲಿ ಅದು "ಬೋಧನೆಯ ಕ್ರಮ" ವನ್ನು ಸೂಚಿಸುತ್ತದೆ.[46] ಇದು ತೋರ್ಪಡಿಸುವದೇನೆಂದರೆ, ಕ್ರಿ.ಶ. 50ರ ಆರಂಭದಲ್ಲಿಯೇ, ಕರ್ತನ ಸಭೆಗಳಲ್ಲಿ ಸ್ಥಿರವಾದ ಬೋಧನ ಕ್ರಮವನ್ನು ಅನುಸರಿಸಲಾಗುತ್ತಿತ್ತು ಎಂಬದು.

ಪೌಲನು ಈ ವಾಕ್ಯಭಾಗದಲ್ಲಿ ಹೇಳಿದ "ಬೋಧನಾ ಕ್ರಮ" ದ ಬಗ್ಗೆ ಲೇಖಕರು ಊಹೆಗಳನ್ನು ಮಾಡುತ್ತಾರೆ. ಹೇಗೂ, ವಾಕ್ಯದಲ್ಲಿ ಮತ್ತೊಂದೆಡೆಯಲ್ಲಿ, ಪೌಲನು ತಾನು ಹಾಗೂ ಇತರ ಪ್ರೇರಿತ ಸುವಾರ್ತಿಕರು ಬೋಧಿಸಿದ ಸಂದೇಶದ ತಿರುಳಿನ ಕುರಿತು ಸ್ಪಷ್ಟವಾಗಿ ತಿಳಿಸುತ್ತಾನೆ. ಆತನು ಕೊರಿಂಥದಲ್ಲಿನ ಕ್ರೈಸ್ತರಿಗೆ ಹೇಳಿದ್ದೇನೆಂದರೆ, "ನಾನು ಶಿಲುಬೆಗೆ ಹಾಕಲ್ಪಟ್ಟವನಾದ ಕ್ರಿಸ್ತನನ್ನು ಹೊರತು ಬೇರೆ ಯಾವದನ್ನೂ ತಿಳಿಯದವನಾಗಿ ನಿಮ್ಮಲ್ಲಿ ಇರುವೆನೆಂದು ತೀರ್ಮಾನಿಸಿಕೊಂಡೆನು" (1 ಕೊರಿಂಥ 2:2). ಪುನಃ ಆತನು ಅವರಿಗೆ ಹೇಳಿದ್ದೇನೆಂದರೆ, "ನಾನು ನಿಮಗೆ ತಿಳಿಸಿದ ಮೊದಲನೆಯ ಸಂಗತಿಗಳೊಳಗೆ ಒಂದು ಸಂಗತಿಯನ್ನು ನಿಮಗೆ ತಿಳಿಸಿಕೊಟ್ಟೆನು.[47] ಅದು ನಾನು ಸಹ ಕಲಿತುಕೊಂಡದ್ದೇ.

ಅದೇನೆಂದರೆ ಶಾಸ್ತ್ರದಲ್ಲಿ ಮುಂತಿಳಿಸಿರುವ ಪ್ರಕಾರ ಕ್ರಿಸ್ತನು ನಮ್ಮ ಪಾಪಗಳ ನಿವಾರಣೆಗಾಗಿ ಸತ್ತನು; ಹೂಣಲ್ಪಟ್ಟನು; ಶಾಸ್ತ್ರದ ಪ್ರಕಾರವೇ ಮೂರನೆಯ ದಿನದಲ್ಲಿ ಎಬ್ಬಿಸಲ್ಪಟ್ಟನು" (1 ಕೊರಿಂಥ 15:3, 4). ರೋಮಾಪುರದ ಕ್ರೈಸ್ತರಿಗೆ ಒಪ್ಪಿಸಲ್ಪಟ್ಟಿದ್ದ "ಬೋಧನಾ ಕ್ರಮ" ವು ಯಾವದೆಂದರೆ ಯೇಸು ಅವರ ಪಾಪಗಳಿಗೋಸ್ಕರ ಸತ್ತನು ಮತ್ತು ಅವರಿಗೆ ಹೊಸ ಜೀವವನ್ನು ಕೊಡುವದಕ್ಕಾಗಿ ಎಬ್ಬಿಸಲ್ಪಟ್ಟನು ಎಂಬದೇ."[48]

ರೋಮಾ 6ನೇ ಅಧ್ಯಾಯದ ಆರಂಭಿಕ ಭಾಗದಲ್ಲಿ ದೀಕ್ಷಾಸ್ನಾನದ ಕುರಿತು ಪೌಲನು ಮಾಡಿದ ಉಪದೇಶದಲ್ಲಿ ಕ್ರಿಸ್ತನ ಮರಣ, ಹೂಣಲ್ಪಡುವಿಕೆ ಮತ್ತು ಪುನರುತ್ಥಾನದ ವಿಷಯವು ಪ್ರಮುಖ ವಿಚಾರವಾಗಿತ್ತು. ಅನೇಕ ವ್ಯಾಖ್ಯಾನಕಾರರು 4ನೇ ವಚನವನ್ನು ದಾಟಿದ ಕೂಡಲೇ, ದೀಕ್ಷಾಸ್ನಾನದ ವಿಷಯವನ್ನು ನಿರ್ಲಕ್ಷಿಸುವದಕ್ಕೆ ತೀರ್ಮಾನಿಸುತ್ತಾರೆ; ಆದರೆ Barclay ಗಮನಕ್ಕೆ ತಂದ ಪ್ರಕಾರ, ಈಗ ಚರ್ಚೆಯಲ್ಲಿರುವ ವಾಕ್ಯಭಾಗವು "ದೀಕ್ಷಾಸ್ನಾನದ ಚರ್ಚೆಯಿಂದಲೇ" ಉದ್ಭವವಾಗಿರುತ್ತದೆ.[49] ಪೌಲನ ವಾಚಕರು ದೀಕ್ಷಾಸ್ನಾನ ಮಾಡಿಸಿಕೊಂಡಿದ್ದರು, "ಸುವಾರ್ತೆಯ" "ಕ್ರಮ," ಅಥವಾ "ನಮೂನೆ" ಗೆ ವಿಧೇಯರಾಗಿದ್ದರು. ಅವರು ಕ್ರಿಸ್ತನ ಮರಣದಲ್ಲಿ ಪಾಲುಗಾರರಾಗಿದ್ದರು, ಆತನ ಸಂಗಡ ನೀರಿನ ದೀಕ್ಷಾಸ್ನಾನದಲ್ಲಿ ಹೂಣಲ್ಪಟ್ಟಿದ್ದರು ಮತ್ತು ಹೊಸಬರಾಗಿ ನಡಕೊಳ್ಳುವದಕ್ಕೆ ಎಬ್ಬಿಸಲ್ಪಟ್ಟಿದ್ದರು. Macknightನು *tupos* ಎಂಬುದನ್ನು ಒಂದು "ಅಚ್ಚು" ಎಂದು ಅಭಿಪ್ರಾಯಪಡುತ್ತಾ "*ದೀಕ್ಷಾಸ್ನಾನದ ಮೂಲಕವಾಗಿ* ರೋಮಾಪುರದವರು ಅದರೊಳಗೆ ಇಡಲ್ಪಟ್ಟಿದ್ದರು." ಹೀಗೆ ಅವರು "ಹೊಸದಾಗಿ ರೂಪಿಸಲ್ಪಡುವದು" ಉದ್ದೇಶವಾಗಿತ್ತೆಂದು ಹೇಳುತ್ತಾನೆ.[50]

"ನಿಮಗೆ ಕಲಿಸಲ್ಪಟ್ಟ ಬೋಧನೆಗೆ . . . ಅಧೀನರಾದದರಿಂದ" ಎಂಬ ಮಾತುಗಳ ಬಗ್ಗೆ ಏನನ್ನಾದರೂ ಹೇಳಲೇಬೇಕು. "ಕಲಿಸಲ್ಪಟ್ಟ" ಎಂಬದರ ಅನುವಾದಿತ ಗ್ರೀಕ್ ಪದವು παραδίδωμι, (*paradidōmi*) ಎಂಬದರಿಂದ ಬಂದಿರುತ್ತದೆ, ಅದರ ಮೂಲ ಅರ್ಥವು "ಒಪ್ಪಿಸಲ್ಪಟ್ಟವರು" ಎಂದಾಗಿರುತ್ತದೆ. ಕೆಲವು ಅನುವಾದಕರು ಈ ಪದವನ್ನು "ನಿಮಗೆ ಒಪ್ಪಿಸಲ್ಪಟ್ಟ ಉಪದೇಶ" ಎಂದು ವ್ಯಾಖ್ಯಾನಿಸುತ್ತಾರೆ (ನೋಡಿರಿ KJV)-ಮತ್ತು ಅದನ್ನು ಅರ್ಥಮಾಡಿಕೊಳ್ಳಲು ಅದೊಂದು ಅತ್ಯಂತ ಸರಳ ದಾರಿಯಾಗಿರುತ್ತದೆ. ಹೇಗೂ, "ಕಲಿಸಲ್ಪಟ್ಟ/ಒಪ್ಪಿಸಲ್ಪಟ್ಟ" ಎಂಬ ಕ್ರಿಯಾಪದವು ತಟಸ್ಥ ಸ್ವರದಲ್ಲಿರುವದರಿಂದ, ಬಹುತೇಕರು ಈ ಪದಗುಚ್ಛವನ್ನು "ಕ್ರೈಸ್ತರು ವಾಕ್ಯಕ್ಕೆ ಒಪ್ಪಿಸಲ್ಪಟ್ಟಿದ್ದರು" ಎಂಬ ಅರ್ಥವು ಬರುವಂತೆ ಅನುವಾದಿಸುತ್ತಾರೆ. Edwardsನ ಅಭಿಪ್ರಾಯವೇನಾಗಿತ್ತೆಂದರೆ "ಪ್ರಮುಖ ಅಂಶವೇನೆಂದರೆ ಉಪದೇಶದ ಕ್ರಮವು (ನಮೂನೆಯು) ನಮಗೆ ಸೇರಿದ್ದಲ್ಲ, ಆದರೆ ನಾವು ಅದಕ್ಕೆ ಸೇರಿದವರಾಗಿದ್ದೇವೆ."[51] NEB ಯಲ್ಲಿ ಹೀಗಿರುತ್ತದೆ, "ನಾವು ಅಧೀನಪಡಿಸಲ್ಪಟ್ಟ ಬೋಧನೆ."

**ವಚನ 18.** ಪೌಲನ ವಾಚಕರು "ಮನಃಪೂರ್ವಕವಾಗಿ ಅಧೀನರಾದಾಗ" -ಹೊರತು ಅದಕ್ಕೆ ಮುಂಚೆ ಅಲ್ಲ- **ಪಾಪದಿಂದ ಬಿಡುಗಡೆ ಹೊಂದಿದರು**. KJV ತರ್ಜುಮೆಗಾರರು "ಆಗ" ಎಂಬ ಪದವನ್ನು ಸೇರ್ಪಡೆಗೊಳಿಸಿರುತ್ತಾರೆ: "ಆಗ ನೀವು ಪಾಪದಿಂದ ಬಿಡುಗಡೆ ಗೊಂಡವರಾಗಿ" (ಒತ್ತಿ ಹೇಳಿದ್ದು ನನ್ನದು(. ಈ ವಾಕ್ಯಭಾಗದಲ್ಲಿ ಘಟನಾವಳಿಗಳ ಕ್ರಮವು

ಹೀಗಿರುತ್ತದೆ:

"ಪಾಪಕ್ಕೆ ದಾಸರು" (6:17a).
"ಮನಃಪೂರ್ವಕವಾಗಿ ಅಧೀನರು" (6:17b).
"ಪಾಪದಿಂದ ಬಿಡುಗಡೆ ಹೊಂದಿದರು" (6:18a).
"ನೀತಿಗೆ ದಾಸರು" (6:18b).

ಇಲ್ಲಿ ಹೇಳಲ್ಪಟ್ಟಿರುವಂಥದು ಈ ಅಧ್ಯಾಯದ ಆರಂಭದಲ್ಲಿ ದೀಕ್ಷಾಸ್ನಾನದ ಕುರಿತು ಪೌಲನು ಹೇಳಿದ ಮಾತುಗಳಿಗೆ ಸಂಬಂಧವಿರುತ್ತದೆ. ನಾವು ನೀರಿನ ದೀಕ್ಷಾಸ್ನಾನದಿಂದ "ಹೊಸಬರಾಗಿ ನಡಕೊಳ್ಳುವದಕ್ಕೆ" (6:4) "ಎಬ್ಬಿಸಲ್ಪಟ್ಟೆವು," ನಾವು "[ಕ್ರಿಸ್ತನ] ಪುನರುತ್ಥಾನಕ್ಕೆ ಸದೃಶದಲ್ಲಿ ಐಕ್ಯವಾಗಿದ್ದೇವೆ" (6:5), *ಮತ್ತು ನಮ್ಮ* "*ಪಾಪಾಧೀನಸ್ವಭಾವವು*" "*ನಾಶವಾಗಿ*" *ಇರುತ್ತದೆ* (6:6) ಎಂಬದನ್ನು ಒತ್ತಿ ಹೇಳಿದನು. ನಂತರ ಆತನು 18ನೇ ವಚನದಲ್ಲಿ ಅದೇ ರೀತಿಯ ಪದಗಳನ್ನು ಬಳಕೆಮಾಡಿದನು: ಆಗ ನಾವು "ಪಾಪದ ವಶದಿಂದ ಬಿಡುಗಡೆ ಹೊಂದಿದೆವು" (6:7).

ಪಾಪಿಗಳು ಮನಃಪೂರ್ವಕವಾಗಿ ವಿಧೇಯರಾದಾಗ, ಅವರು "ಪಾಪದ ವಶದಿಂದ ಬಿಡುಗಡೆ ಹೊಂದಿದರು." ಅವರು ನಿರ್ಬಂಧದಿಂದ ಸ್ವತಂತ್ರರು, ಅವರು ದೇವರಿಗೂ ಮನುಷ್ಯನಿಗೂ ಭಯಪಡದೆ ಇಷ್ಟಬಂದದ್ದನ್ನು ಮಾಡುವದಕ್ಕೆ ಸ್ವತಂತ್ರರು ಎಂದು ಅದರ ಅರ್ಥವೋ? ಇಲ್ಲ! ಅವರು ಈಗ **ನೀತಿಗೆ ದಾಸರಾಗಿದ್ದರು.** ಪೌಲನು ಹೇಳಿದ್ದೇನೆಂದರೆ, "ನೀವು ಒಬ್ಬರಿಗೆ ನಿಮ್ಮನ್ನು ದಾಸರಾಗಿ ವಿಧೇಯರಾಗುವದಕ್ಕೆ ಒಪ್ಪಿಸಿಕೊಳ್ಳುವಾ*ಗ*, ನೀವು ಯಾರಿಗೆ ಅಧೀನರೋ ಅವರಿಗೆ ದಾಸರಾಗುವಿರಿ" (6:16). ಅವರು ದೇವರಿಗೆ "ಮನಃಪೂರ್ವಕವಾಗಿ ಅಧೀನರಾದದರಿಂದ" (6:17), ಈಗ ಅವರು ದೇವರಿಗೆ ದಾಸರಾಗಿದ್ದರು. ಅವರು ದೀಕ್ಷಾಸ್ನಾನಮಾಡಿಸಿಕೊಂಡಾಗ ಆ ಸಮರ್ಪಣೆಯನ್ನು ಮಾಡಿಕೊಂಡಿದ್ದರು.

**ವಚನ 19.** ನಮ್ಮ ವಾಕ್ಯಭಾಗದ ಈ ಹಂತದಲ್ಲಿ, ಪೌಲನು ಸ್ವಲ್ಪ ತಡೆದು, ತಾನು ಕ್ರೈಸ್ತತ್ವವನ್ನು ಏಕೆ ದಾಸತ್ವಕ್ಕೆ ಹೋಲಿಸುತ್ತಿದ್ದಾನೆಂಬದನ್ನು ವಿವರಿಸುತ್ತಾನೆ. ದಾಸತ್ವ ಪದ್ಧತಿಯು ಪ್ರಭಲವಾಗಿತ್ತೆಂದು ಮತ್ತು ಅದು ದುರವಸ್ಥೆಗೆ ಮೂಲಕಾರಣವೆಂದು ಬಲ್ಲವನಾಗಿದ್ದನು. ಆದಕಾರಣ ಆತನು ಅವಸರದಿಂದ ಈ ಮಾತುಗಳನ್ನು ಹೇಳುತ್ತಾನೆ, **ನಿಮ್ಮ ನರಭಾವದ ಬಲಹೀನತೆಯ ದೆಸೆಯಿಂದ ನಾನು ಲೋಕರೀತಿಯಾಗಿ ಮಾತಾಡುತ್ತೇನೆ.** ಬೇರೆ ಮಾತುಗಳಲ್ಲಿ ಹೇಳುವದಾದರೆ, "ನಾನು ನಿಮಗೆ ಪರಿಚಯವಿರುವಂಥ ದೃಷ್ಟಾಂತವನ್ನು ಉಪಯೋಗಿಸಿ ಮಾತಾಡುತ್ತೇನೆ ಯಾಕೆಂದರೆ ಹಾಗೆ ಮಾಡದಿದ್ದರೆ ನಿಮಗೆ ನನ್ನ ಉಪದೇಶವು ಗ್ರಹಿಕೆಗೆ ಬರುವದಿಲ್ಲ."

ಪೌಲನು ಕ್ರೈಸ್ತಜೀವಿತವನ್ನು ದಾಸತ್ವಕ್ಕೆ ಏಕೆ ಹೋಲಿಸಿದನೋ? ಕ್ರೈಸ್ತತ್ವ ಮತ್ತು ಸಾಮಾನ್ಯ ಬಳಕೆಯಲ್ಲಿದ್ದ ದಾಸತ್ವದ ನಡುವೆ ಬೃಹತ್ ಅಂತರವಿತ್ತು: ದೇವರಿಗೆ ದಾಸತ್ವದಲ್ಲಿರುವದು ಸ್ವಯಂಪ್ರೇರಿತವಾಗಿತ್ತು, ಹೊರತು ಕಡ್ಡಾಯವಾಗಿರಲಿಲ್ಲ; ಮತ್ತು ಕರ್ತನು ಒಬ್ಬ ನಿರಂಕುಶ ದೊರೆಯಂತಾಗಿರಲಿಲ್ಲ. ಈಗಷ್ಟೆ ಹೇಳಿದ ಹಾಗೆ, ಪೌಲನು

ಎಲ್ಲರಿಗೂ ಪರಿಚಿತವಾಗಿದೆ ಎಂಬ ಕಾರಣಕ್ಕೆ ದಾಸತ್ವದ ಸಾದೃಶ್ಯವನ್ನು ಉಪಯೋಗಿಸಿದನು; ಆದರೆ Halford Luccock ಒಂದು ಹೆಚ್ಚುವರಿ ಕಾರಣವನ್ನು ಸಲಹೆ ಮಾಡುತ್ತಾನೆ. ಆತನು ಬರೆದದ್ದೇನೆಂದರೆ, "ದಾಸನು ಎಂಬದು ಬಲವಾದ ಪದವಾಗಿದೆ. ಆದರೆ ದೇವರಿಗೆ ದಾಸತ್ವದಲ್ಲಿರುವದು ಬಲವಾದ ಸಂಗತಿಯಾಗಿದೆ. ಕ್ರಿಸ್ತನು ನಮ್ಮಿಂದ ಅಪೇಕ್ಷಿಸುವಂಥ ಅವಿಭಜಿತ ನಿಷ್ಠೆಯನ್ನು ಯಾವ ಕಡಿಮೆಯಾದ ಪದವು ಬಣ್ಣಿಸಲಾರದು."[52]

"ಮನಃಪೂರ್ವಕವಾಗಿ" ದೇವರಿಗೆ ವಿಧೇಯರಾಗುವ ಮೂಲಕ, ಪೌಲನ ವಾಚಕರು ಅದರ ಫಲಿತವಾಗಿ ಕರ್ತನಿಗೆ ತಮ್ಮ ಪೂರ್ಣಹೃದಯದ ನಿಷ್ಠೆಯನ್ನು ವ್ಯಕ್ತಪಡಿಸಿದ್ದರು. ಈಗ ಪೌಲನು ಅವರನ್ನು ಆ ಸಮರ್ಪಣೆಗೆ ತಕ್ಕಂತೆ ಜೀವಿಸಬೇಕೆಂದು ಪ್ರೋತ್ಸಾಹಿಸುತ್ತಾನೆ: **ಅಧರ್ಮಮಾಡುವದಕ್ಕಾಗಿ ನಿಮ್ಮ ಅಂಗಗಳನ್ನು ಬಂಡುತನಕ್ಕೂ ಅಧರ್ಮಕ್ಕೂ ದಾಸರನ್ನಾಗಿ ಒಪ್ಪಿಸಿಕೊಟ್ಟಿದ್ದಂತೆಯೇ ಈಗ ಪರಿಶುದ್ಧರಾಗುವದಕ್ಕಾಗಿ ನಿಮ್ಮ ಅಂಗಗಳನ್ನು ನೀತಿಗೆ ದಾಸರಾನ್ನಾಗಿ ಒಪ್ಪಿಸಿಕೊಡಿರಿ.** ಗತಕಾಲದಲ್ಲಿ, ಪಾಪದ ದಾಸರಾಗಿದ್ದ ಅವರು ತಮ್ಮ ದೇಹಗಳನ್ನು ಮತ್ತು ತಮ್ಮದೆಲ್ಲವನ್ನು "ಬಂಡುತನಕ್ಕೆ" (ἀκαθαρσία, *akatharsia*) ಮತ್ತು "ಅಧರ್ಮಕ್ಕೆ" (ἀνομία, *anomia*) ಸಮರ್ಪಿಸಿಕೊಂಡಿದ್ದರು. ಅವರ ಸಮರ್ಪಣೆಯು ತೀವ್ರವಾಗಿತ್ತು; ತೃಪ್ತಿಯೆಂಬುದೇ ಇರಲಿಲ್ಲ, ಅವರು ಪಾಪದಲ್ಲಿ ಹೆಚ್ಚೆಚ್ಚು ಆಳವಾಗಿ ಮುಂದುವರೆದಿದ್ದರು. ಈಗ ಪೌಲನು ಹೇಳಿದ್ದೇನೆಂದರೆ ದೇವರ ದಾಸರಾಗಿರುವವರು ಕರ್ತನೆಡೆಗೆ ಅದೇ ರೀತಿಯ ರಾಜಿಯಿಲ್ಲದಂಥ ನಿಷ್ಠೆಯನ್ನು ಹೊಂದಿರತಕ್ಕದ್ದು ಎಂಬದೆ: "ಈಗ ಪರಿಶುದ್ಧರಾಗುವದಕ್ಕಾಗಿ ನಿಮ್ಮ ಅಂಗಗಳನ್ನು ನೀತಿಗೆ ದಾಸರನ್ನಾಗಿ ಒಪ್ಪಿಸಿಕೊಡಿರಿ."

ಜನರು ತಮ್ಮ ಜೀವಿತಗಳನ್ನು ಪಾಪಕ್ಕೆ ಒಪ್ಪಿಸಿಕೊಟ್ಟಾಗ, ಇದು "ಇನ್ನಷ್ಟು ಅಧರ್ಮಕ್ಕೆ" ನಡಿಸುತ್ತದೆ. ಅವರು ತಮ್ಮನ್ನು ನೀತಿಗೆ ಸಮರ್ಪಿಸಿಕೊಂಡಾಗ, ಅದು "ಪರಿಶುದ್ಧಗೊಳ್ಳುವಿಕೆ" (ἁγιασμός, *hagiasmos*) ಯಲ್ಲಿ ಫಲಿತಗೊಳ್ಳುತ್ತದೆ. ಈ ಪದವನ್ನು ಈ ಅಧ್ಯಾಯದ ಆರಂಭದಲ್ಲಿ ಚರ್ಚಿಸಲಾಗಿರುತ್ತದೆ (131-33 ಪುಟಗಳನ್ನು ನೋಡಿರಿ). ಈ ಪದವನ್ನು "ಪವಿತ್ರ" ಎಂದು ಸಹ ಅನುವಾದಿಸಬಹುದು ಹಾಗೂ ಇದು ದೇವರಿಗೋಸ್ಕರ "ಪ್ರತ್ಯೇಕಿಸಲ್ಪಡುವದನ್ನು" ಸೂಚಿಸುತ್ತದೆ-ಪರಿಶುದ್ಧ ಜೀವನವನ್ನು, ಆತನಿಗೆ ಭಕ್ತಿಯುಳ್ಳ ಜೀವನವನ್ನು ನಡಿಸಲು ಪ್ರತ್ಯೇಕಿಸಲ್ಪಟ್ಟಿರುವದು.

ನಮಗಿರುವ ಸವಾಲು ಏನೆಂದರೆ ದೇವರಿಗೋಸ್ಕರ ತಮ್ಮನ್ನು "ಪ್ರತ್ಯೇಕಿಸಿಕೊಂಡಿರುವ" ಜನರಾಗಿ ನಡಕೊಳ್ಳುವದು. ಪೌಲನು ಕೊರಿಂಥದವರಿಗೆ ಹೇಳಿದ್ದೇನೆಂದರೆ, ನಾವು ಶರೀರಾತ್ಮಗಳ ಕಲ್ಮಶವನ್ನು ತೊಲಗಿಸಿ ನಮ್ಮನ್ನು ಶುಚಿಮಾಡಿಕೊಂಡು ದೇವರ ಭಯದಿಂದ ಕೂಡಿದವರಾಗಿ ಪ್ರವಿತತ್ವವನ್ನು ಸಿದ್ಧಿಗೆ ತರುವದಕ್ಕೆ ಪ್ರಯತ್ನಿಸೋಣ" (2 ಕೊರಿಂಥ 7:1). ಇಬ್ರಿಯ ಪುಸ್ತಕರ ಲೇಖಕನು ಹೇಳಿದ್ದೇನೆಂದರೆ, "ಎಲ್ಲರ ಸಂಗಡ ಸಮಾಧಾನದಿಂದಿರು ವದಕ್ಕೂ ಪರಿಶುದ್ಧತೆಯನ್ನು ಹೊಂದುವದಕ್ಕೂ ಪ್ರಯತ್ನ ಮಾಡಿರಿ; ಪರಿಶುದ್ಧತೆಯಿಲ್ಲದೆ ಯಾವನೂ ಕರ್ತನನ್ನು ಕಾಣುವದಿಲ್ಲ" (12:14). ಒಬ್ಬರು ಈ ರೀತಿಯಾಗಿ ಹೇಳಿದ್ದಾರೆ: "ಕ್ರೈಸ್ತನಿಗಿರುವ ಸವಾಲು ಏನೆಂದರೆ ನಾವೇನಾಗಿದ್ದೇವೋ ಅದಾಗುವದೇ" (ಅಂದರೆ, ಪರಿಶುದ್ಧರಾಗುವದು).

## ದೇವರಿಗೆ ದಾಸರು (6:20-23)

**[20]ನೀವು ಪಾಪಕ್ಕೆ ದಾಸರಾಗಿದ್ದಾಗ ನೀತಿಯ ಹಂಗಿನವರಾಗಿದ್ದಿಲ್ಲ. [21]ಆದರೆ ನೀವು ಆಗ ಮಾಡಿದ ಕೃತ್ಯಗಳಿಂದ ನಿಮಗುಂಟಾದ ಫಲವೇನು? ಈಗ ಅವುಗಳ ವಿಷಯದಲ್ಲಿ ನಿಮಗೆ ನಾಚಿಕೆಯುಂಟಷ್ಟೆ. ಕಡೆಗೆ ಅವುಗಳಿಂದ ಬರುವದು ಮರಣವಲ್ಲವೇ. [22]ಈಗಲಾದರೋ ನೀವು ಪಾಪದಿಂದ ಬಿಡುಗಡೆಯನ್ನು ಹೊಂದಿ ದೇವರಿಗೆ ದಾಸರಾದದರಿಂದ ಪರಿಶುದ್ಧರಾಗುವದೇ ನಿಮಗೆ ಫಲ; ಕಡೆಗೆ ದೊರೆಯುವಂಥದು ನಿತ್ಯಜೀವ. [23]ಯಾಕೆಂದರೆ ಪಾಪವು ಕೊಡುವ ಸಂಬಳ ಮರಣ; ದೇವರ ಉಚಿತಾರ್ಥ ವರವು ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಲ್ಲಿರುವ ನಿತ್ಯಜೀವ.**

**ವಚನ 20.** ಪೌಲನು ಗಮನಕ್ಕೆ ತಂದದ್ದೇನೆಂದರೆ, **ನೀವು ಪಾಪಕ್ಕೆ ದಾಸರಾಗಿದ್ದಾಗ ನೀತಿಯ ಹಂಗಿನವರಾಗಿದ್ದಿಲ್ಲ.** ನಾವು ಪಾಪಕ್ಕೆ ದಾಸರಾಗಿರುವಷ್ಟು ಕಾಲ, ನಮಗೆ ನೀತಿಯ ಸೇವೆ ಮಾಡಬೇಕೆಂಬ, ಸರಿ ಯಾವದೋ ಅದನ್ನು ಮಾಡಬೇಕೆಂಬ ಹಂಗು ಇರುವದಿಲ್ಲ. ಅದಕ್ಕೆ ವಿರುದ್ಧವಾದದ್ದು ಸಹ ಅಷ್ಟೇ ಸತ್ಯ: ಒಮ್ಮೆ ನಾವು ದೇವರಿಗೆ ದಾಸರಾದರೆ, ಪಾಪದ ಹಂಗಿನಿಂದ ಬಿಡುಗಡೆಗೊಳ್ಳುತ್ತೇವೆ, ಅದರ ಆಜ್ಞೆಗಳಿಗೆ ಇನ್ನು ಮೇಲೆ ವಿಧೇಯರಾಗುವ ನಿರ್ಬಂಧದಲ್ಲಿರುವದಿಲ್ಲ.

ಪೌಲನು ನಿರಂತರವಾಗಿ ತಮ್ಮ ಜೀವಿತಗಳನ್ನು ಕರ್ತನಿಗೆ ಒಪ್ಪಿಸಿಕೊಡುತ್ತಿರುವಂತೆ ಕ್ರೈಸ್ತರನ್ನು ಪ್ರೋತ್ಸಾಹಿಸುತ್ತಾನೆ. ಕೆಲವರು ತಾವು ಕರ್ತನಿಗೆ ವಿಧೇಯರಾಗಲು ತೀರ್ಮಾನ ಮಾಡಿ ಪಾಪದ ವಶದಿಂದ ಬಿಡುಗಡೆಗೊಂಡ ಬಳಿಕ ಇನ್ನು ಮೇಲೆ ಅವರು ಪಾಪದ ವಿಷಯದಲ್ಲಿ ಯಾವದೇ ತೀರ್ಮಾನಗಳನ್ನು ಮಾಡಬೇಕಾಗಿರುವದಿಲ್ಲ ಎಂದು ಯೋಚಿಸಿಕೊಳ್ಳಬಹುದು-ಆದರೆ ಅನುದಿನವೂ ತೀರ್ಮಾನ ಮಾಡಬೇಕಾದ ದಿನವಾಗಿರುತ್ತದೆ. ನಾವು ಅನುದಿನವೂ ಗೊಂದಲದ ಸ್ಥಿತಿಯಲ್ಲಿರುತ್ತೇವೆ ಮತ್ತು "ಜೀವಕ್ಕೆ ನಡಿಸುವ" ಇಕ್ಕಟ್ಟಾದ ದಾರಿಯಲ್ಲಿ ಸಾಗಬೇಕೋ ಅಥವಾ "ನಾಶನಕ್ಕೆ ನಡಿಸುವ" ಅಗಲವಾದ ದಾರಿಯೆಡೆಗೆ ತಿರಿಗಿಕೊಳ್ಳಬೇಕೋ ಎಂಬದರ ನಡುವೆ ಆರಿಸಿಕೊಳ್ಳಬೇಕಾಗಿರುತ್ತದೆ (ಮತ್ತಾಯ 7:13, 14).

**ವಚನ 21.** ನಾವು ಆಯ್ಕೆಗಳ ಮುಂದೆ ನಿಲ್ಲುವ ವೇಳೆ, ಸರಿಯಾದ ಆಯ್ಕೆಯನ್ನು ಮಾಡಿಕೊಳ್ಳುವಂತೆ ನಮ್ಮನ್ನು ಯಾವದು ಸ್ಫೂರ್ತಿಗೊಳಿಸುತ್ತದೆ? ಪೌಲನು ತನ್ನ ವಾಚಕರಿಗೆ (ಮತ್ತು ನಮ್ಮನ್ನು) ಹುರಿದುಂಬಿಸಿದ್ದೇನೆಂದರೆ ಪ್ರತಿ ದಾರಿಯನ್ನೊಮ್ಮೆ ನೋಡಿ ಅದು ಕೊನೆಗೆ ಎಲ್ಲಿಗೆ ಸೇರಿಸುತ್ತದೆಂಬದನ್ನು ಪರೀಕ್ಷಿಸಬೇಕು ಎಂಬದೇ. ಆತನು ಮೊದಲು ಕೇಳಿಕೊಂಡಿದ್ದೇನೆಂದರೆ, **ಆದರೆ ನೀವು ಆಗ ಮಾಡಿದ ಕೃತ್ಯಗಳಿಂದ ನಿಮಗುಂಟಾದ ಫಲವೇನು? ಈಗ ಅವುಗಳ ವಿಷಯದಲ್ಲಿ ನಿಮಗೆ ನಾಚಿಕೆಯುಂಟಷ್ಟೆ.** "ಫಲ" ಎಂಬ ಅನುವಾದಿಸಲ್ಪಟ್ಟ ಗ್ರೀಕ್ ಪದವು καρπός (*karpos*), ಎಂಬುದು, ಅದು "ಫಲ" ಎಂಬದಕ್ಕಾಗಿ ಉಪಯೋಗಿಸುವ ಪದ (ನೋಡಿರಿ KJV). NIV ಯಲ್ಲಿ "ನೀವು ಯಾವ

ಪ್ರಯೋಜನವನ್ನು ಪಡೆದಿರಿ?" ಎಂದಿರುತ್ತದೆ.

"ಈಗ ಅವುಗಳ ವಿಷಯದಲ್ಲಿ ನಿಮಗೆ ನಾಚಿಕೆಯುಂಟಷ್ಟೆ" ಎಂಬುದು ವಾಚಕರ ಹಿಂದಿನ ಪಾಪಗಳನ್ನು ಜ್ಞಾಪಿಸುತ್ತದೆ. ದುಃಖಕರವಾಗಿ, ಅಲ್ಪ-ಸಮರ್ಪಣೆಯುಳ್ಳ ಕೆಲವು ಕ್ರೈಸ್ತರು ತಮ್ಮ ಹಿಂದಿನ ಜೀವಿತಗಳನ್ನು ಹಂಬಲಿಕೆಯಿಂದ ಜ್ಞಾಪಿಸಿಕೊಳ್ಳುತ್ತಾರೆ. ಅವರು ಇಸ್ರಾಯೇಲ್ಯರ ಹಾಗಿರುತ್ತಾರೆ, ಗತಕಾಲವನ್ನು ಸವಿ ನೆನಪಿನಿಂದ ನೋಡಿದರು (ಅರಣ್ಯಕಾಂಡ 11:5), ಐಗುಪ್ತ್ಯದಲ್ಲಿನ ತಮ್ಮ ದಾಸತ್ವವನ್ನು ಮರೆತುಬಿಟ್ಟರು. ಅವರು ಬೀದಿಯಿಂದ ರಕ್ಷಿಸಲ್ಪಟ್ಟಿರುವ ಒಬ್ಬ ಅನಾಥನಿಗೆ ಹೋಲಿಕೆಯಾಗಬಹುದು, ಆತನು ಇದುವರೆಗೂ ತಿನ್ನುತ್ತಿದ್ದಂಥ ಕೇಕ್ ತುಂಡುಗಳನ್ನು ನೆನಪಿಸಿಕೊಳ್ಳುತ್ತಾನೆ ಆದರೆ ಅವುಗಳು ಆತನಿಗೆ ಕಸದ ತೊಟ್ಟಿಯಲ್ಲಿ ಸಿಕ್ಕಿದವೆಂಬದನ್ನು ಮರೆತುಬಿಡುತ್ತಾನೆ. ಆದರೆ ಪ್ರಶಂಸಿಸತಕ್ಕದ್ದೆಂದರೆ, ಪೌಲನು ಯಾರನ್ನು *ಉ*ದ್ದೇಶಿಸಿ ಮಾತಾಡುತ್ತಿದ್ದಾನೋ ಅವರು ತಮ್ಮ ಹಿಂದಿನ ಪಾಪದ ಜೀವಿತಗಳ ಬಗ್ಗೆ ನಾಚಿಕೆ ಪಟ್ಟುಕೊಂಡರು.

ಅವರು ತಮ್ಮ ನಾಚಿಕೆಕರ ಜೀವಿತಗಳಿಂದ ಯಾವ ಪ್ರಯೋಜವನ್ನು ಪಡೆದುಕೊಂಡರೆಂಬ*ದರ* ಬಗ್ಗೆ ಗಂಭೀರವಾಗಿ ಯೋಚಿಸುವಂತೆ ಪೌಲನು ಅವರನ್ನು ಕೇಳಿಕೊಳ್ಳುತ್ತಾನೆ. ಪಾಪದಿಂದ ಸಿಕ್ಕುವ ಕೆಲವು "ಪ್ರಯೋಜನಗಳು" ಇಲ್ಲಿವೆ: ಒಂದು ಪಾಪಪ್ರಜ್ಞೆ, ನಮ್ಮ ವಿಷಯದಲ್ಲಿ ದೇವರು ಉದ್ದೇಶಿಸಿದ ರೀತಿಯಲ್ಲಿ ಜೀವಿಸಲು ವಿಫಲತೆ, ನಮ್ಮ ಪ್ರಿಯರಿಂದ ಬೇರ್ಪಡುವಿಕೆ, ಮತ್ತು ನಮಗೆ ನೀಡಬೇಕೆಂದು ದೇವರು ಇಚ್ಚಿಸುವ ಆಶೀರ್ವಾದಗಳನ್ನು ಆನಂದಿಸುವದಕ್ಕೆ ಅಶಕ್ತತೆ. ನಿಶ್ಚಯವಾಗಿಯೂ, ಅತ್ಯಂಥ ಭಯಂಕರವಾದ ಫಲಿತವೆಂದರೆ, ಆತ್ಮೀಕ ಮರಣ. ಪೌಲನು ಹೇಳಿದ್ದೇನೆಂದರೆ, **ಕಡೆಗೆ ಅವುಗಳಿಂದ** [ಯಾವವುಗಳ ಬಗ್ಗೆ ಈಗ ಅವರು ನಾಚಿಕೆಪಟ್ಟಿದ್ದರೋ] **ಬರುವದು ಮರಣವಲ್ಲವೇ.** ಇಲ್ಲಿ "ಮರಣ" ಎಂಬುದು ಶಾರೀರಿಕ ಮರಣವನ್ನು ಸೂಚಿಸುವದಿಲ್ಲ, ಅದು ಸರ್ವರಿಗೂ ಬರುತ್ತದೆ (ಇಬ್ರಿಯ 9:27), ಮತ್ತು ಕೆಲವು ಸಾರಿ ಪಾಪರಹಿತ ಕೂಸುಗಳಿಗೂ ಬರುತ್ತದೆ. ಬದಲಾಗಿ, ಇದು ಆತ್ಮೀಕ ಮರಣವನ್ನು ಸೂಚಿಸುತ್ತದೆ, ದೇವರಿಂದ ಬೇರ್ಪಡುವಿಕೆ (ಯೆಶಾಯ 59:1, 2). ಈ ಸನ್ನಿವೇಶದಲ್ಲಿ, ಅದು "ನಿತ್ಯಜೀವದ" ವಿರೋಧವಾಗಿ ಹೋಲಿಸಲ್ಪಟ್ಟಿರುವದರಿಂದ (6:22), ಪೌಲನು ಮನಸ್ಸಿನಲ್ಲಿ "ನಿತ್ಯಮರಣ" ವನ್ನು ಇಟ್ಟುಕೊಂಡು ಈ ಮಾತನ್ನು ಹೇಳಿದನೆಂಬದು ಸ್ಪಷ್ಟವಾಗುತ್ತದೆ-ಅಂದರೆ ದೇವರ ಸನ್ನಿದಾನದಿಂದ ಶಾಶ್ವತವಾಗಿ ನಿತ್ಯಕ್ಕೂ ಅಗಲಿಸಲ್ಪಡುವದು (2 ಥೆಸಲೋನಿಕ 1:8, 9). ಪಾಪವು ಒಬ್ಬ ಮಿತ್ರನಾಗಿರುತ್ತೇನೆಂದು ಮಾತು ಕೊಡುತ್ತದೆ, ಆದರೆ ಅದು ನಿಜವಾಗಿಯೂ ಒಂದು ವೈರಿಯಾಗಿದೆ; ಅದು ಸ್ವಾತಂತ್ರ್ಯವನ್ನು ವಾಗ್ದಾನ ಮಾಡುತ್ತದೆ, ಆದರೆ ಅದು ದಾಸತ್ವಕ್ಕೆ ಸಿಲುಕಿಸುತ್ತದೆ; ಅದು ಸಂತೋಷದ ವಾಗ್ದಾನ ಮಾಡುತ್ತದೆ, ಆದರೆ ವಿಷಾದ ಮತ್ತು ನಾಚಿಕೆ ತರುತ್ತದೆ; ಅದು ಜೀವವನ್ನು ಕೊಡುವದಾಗಿ ವಾಗ್ದಾನ ಮಾಡುತ್ತದೆ, ಆದರೆ ಅಂತ್ಯದಲ್ಲಿ ಮರಣವನ್ನು ಉಂಟುಮಾಡುತ್ತದೆ.[53]

**ವಚನ 22.** ಪಾಪದ ದಾರಿಯ ಅಂತ್ಯದಲ್ಲಿ ಇರುವದು ಮರಣವೇ (ನೋಡಿರಿ ಮತ್ತಾಯ 7:13). ಇನ್ನೊಂದು ದಾರಿಯಲ್ಲಿ ಏನಿರುತ್ತದೆ? ಪೌಲನು ಮುಂದುವರೆಸುತ್ತಾನೆ, **ಈಗಲಾದರೋ ನೀವು ಪಾಪದಿಂದ ಬಿಡುಗಡೆಯನ್ನು ಹೊಂದಿ ದೇವರಿಗೆ ದಾಸರಾದದರಿಂದ**

**ಪರಿಶುದ್ಧರಾಗುವದೇ ನಿಮಗೆ ಫಲ; ಕಡೆಗೆ ದೊರೆಯುವಂಥದು ನಿತ್ಯಜೀವ.** ಕ್ರಿಸ್ತನು ನೀತಿಯ ದಾರಿಯಲ್ಲಿ ತನ್ನ ಪಯಣವನ್ನು ಮುಂದುವರೆಸಿದಂತೆ, ಆತನು ಪರಿಶುದ್ಧಗೊಂಡ (ಪ್ರತ್ಯೇಕಿಸಲ್ಪಟ್ಟ) ಜೀವನವನ್ನು ನಡಿಸುವವನಾಗಿರುತ್ತಾನೆ. ಹೀಗೆ ಒಂದು ಫಲಿತವೆಂದರೆ "ಪರಿಶುದ್ಧಗೊಳ್ಳುವಿಕೆ." NIRVಯಲ್ಲಿ "ನಿಮಗೆ ಸಿಕ್ಕುವ ಫಲವು ಪರಿಶುದ್ಧ ಜೀವಿತಕ್ಕೆ ನಡಿಸುತ್ತದೆ" ಎಂದಿರುತ್ತದೆ. ಹೆಚ್ಚು ಪ್ರಾಮುಖ್ಯವೆಂದರೆ, ಆ ದಾರಿಯಲ್ಲಿ ಸಾಗುವದು ಅಂತಿಮವಾಗಿ ಜೀವಕ್ಕೆ ನಡಿಸುತ್ತದೆ (ನೋಡಿರಿ ಮತ್ತಾಯ 7:14)-ನಿತ್ಯನಿತ್ಯಕ್ಕೂ ಕರ್ತನ ಸಂಗಡ ಮತ್ತು ವಿಮೋಚಿಸಲ್ಪಟ್ಟವರ ಸಂಗಡ ಜೀವಿಸುವದು!

**ವಚನ 23.** ಪಾಪ ಅಥವಾ ದೇವರಿಗೆ ದಾಸರಾಗಿರುವದರಿಂದಾಗುವ ಪರಿಣಾಮಗಳನ್ನು ಒಬ್ಬನು ಹೇಗೆ ಸಾರಾಂಶಿಸಬಹುದು? ರೋಮಾಪುರ ಪತ್ರಿಕೆಯಲ್ಲಿ 23ನೇ ವಚನವು ಬಹಳ ಪರಿಚಿತ ವಚನವಾಗಿದ್ದು ಅದು ಪೌಲನ ಸಾರಾಂಶವಾಗಿರುತ್ತದೆ: **ಯಾಕೆಂದರೆ ಪಾಪವು ಕೊಡುವ ಸಂಬಳ ಮರಣ; ದೇವರ ಉಚಿತಾರ್ಥ ವರವು ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಲ್ಲಿರುವ ನಿತ್ಯಜೀವ.**

ಅನೇಕರು ಪಾಪದ ಸಂಬಳದಲ್ಲಿ ಸುಖ, ಪ್ರಸಿದ್ಧಿ, ಮತ್ತು ಯಶಸ್ಸುಗಳಿರುತ್ತವೆಂದು ಭಾವಿಸುತ್ತಾರೆ; ಆದರೆ ಅದು ಹಾಗಿರುವದಿಲ್ಲವೆಂದು ಪೌಲನು ಹೇಳುತ್ತಾನೆ. "ಪಾಪವು ಕೊಡುವ ಸಂಬಳ ಮರಣ," ಆತ್ಮೀಕ ಮರಣ. "ಸಂಬಳ" ಎಂಬುದರ ಅನುವಾದಿತ ಪದವು (ὀφώνια, *opsōnia*) ಸಲ್ಲಿಸಲಾದ ಸೇವೆಗಳಿಗೆ ಸಿಕ್ಕುವ ವೇತನ ಎಂಬದನ್ನು ಸೂಚಿಸುತ್ತದೆ. ಲೇಖಕರು ಸಲಹೆಮಾಡುವದೇನೆಂದರೆ ಪೌಲನು ಪುನಃ ಇಲ್ಲಿ ಮಿಲಿಟರಿ ಚಿತ್ರಣವನ್ನು ಉಪಯೋಗಿಸಿದನು ಎಂಬದಾಗಿ (6:13ರ ಮೇಲಿನ ವ್ಯಾಖ್ಯಾನಗಳನ್ನು ನೋಡಿರಿ). Barclay ಬರೆದದ್ದೇನೆಂದರೆ, *opsōnia* ಸೈನಿಕನ ಸಂಬಳವಾಗಿತ್ತು, "ಆತನು ತನ್ನ ದೇಹವನ್ನು ಅಪಾಯಕ್ಕೊಡ್ಡುವ ಮೂಲಕ ಮತ್ತು ತನ್ನ ಬೆವರು ಸುರಿಸುವ ಮೂಲಕ ಸಂಪಾದಿಸಿಕೊಂಡ ಸಂಬಳ, ಆತನಿಂದ ಕಸಿದುಕೊಳ್ಳಲಾಗದಂಥ ಆತನಿಗೆ ಸಲ್ಲತಕ್ಕ ಸಂಗತಿ ಅದಾಗಿರುತ್ತದೆ."[54] ಒಬ್ಬನು ತನ್ನ ಪಾಪಭರಿತ ಜೀವನದಿಂದ ಯಾವದಕ್ಕೆ ಯೋಗ್ಯನಾಗಿರುತ್ತಾನೆ? ಆತನು ಏನು ಸಂಪಾದಿಸಿಕೊಂಡಿದ್ದಾನೆ? ಮರಣ!

ಅದಕ್ಕೆ ವಿರುದ್ಧವಾಗಿ ಹೋಲಿಸಿ ನೋಡುವದಾದರೆ, ಪೌಲನು ಹೀಗೆ ಹೇಳುತ್ತಾನೆ, "ದೇವರ ಉಚಿತಾರ್ಥ ವರವು ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಲ್ಲಿರುವ ನಿತ್ಯಜೀವ."[55] ಪಾಪವು ಸಂಬಳವನ್ನು ಕೊಡುತ್ತದೆ, ಆದರೆ ದೇವರು "ವರ" (*χάρισμα*, *charisma*) ಕೊಡುತ್ತಾನೆ. ಪೌಲನು ವಿಧೇಯನಾದ ವಿಶ್ವಾಸಿಗೆ ಸಿಕ್ಕುವ ಸಂಬಳ ಅಥವಾ ಪ್ರತಿಫಲವನ್ನು ಉಲ್ಲೇಖಿಸುವದಕ್ಕೆ ಪ್ರತಿರೋಧ ಹೊಂದಿರಲಿಲ್ಲ (1 ಕೊರಿಂಥ 3:8; ಕೊಲೊಸ್ಸೆ 3:24). ವಾಸ್ತವದಲ್ಲಿ, ಪೌಲನು ಈ ಅಧ್ಯಾಯದಲ್ಲಿ ವಿಧೇಯತೆಯ ಬಗ್ಗೆ ಒತ್ತಿ ಹೇಳುತ್ತಾನೆ (ನೋಡಿರಿ 6:16, 17). ಈ ವಿಧೇಯತೆಯು ನಮ್ಮ ನಂಬಿಕೆಯನ್ನು ವ್ಯಕ್ತಗೊಳಿಸುವಿಕೆಯಾಗಿರುತ್ತದೆ (1:5; 16:26). ಹೇಗೂ, ಇದರರ್ಥ ನಾವು ನಂಬಿಕೆಯಿಡುವ ಮತ್ತು ವಿಧೇಯರಾಗುವ ಮೂಲಕ ನಮ್ಮ ರಕ್ಷಣೆಯನ್ನು ಸಂಪಾದಿಸಿಕೊಳ್ಳುತ್ತೇವೆ ಅಥವಾ ಯೋಗ್ಯರಾಗುತ್ತೇವೆ ಎಂಬದೋ? ಎಂದಿಗೂ ಇಲ್ಲ. ರಕ್ಷಣೆಯು ಯಾವಾಗಲೂ ಒಂದು ವರ- ದೇವರ ಕೃಪಾವರ—ಆಗಿರುತ್ತದೆ, ಹಾಗೆಯೇ ಇರತಕ್ಕದ್ದು. ನಂಬಿಕೆ ಮತ್ತು

ವಿಧೇಯತೆಗಳು ಆ ವರವನ್ನು ಸ್ವೀಕರಿಸಿಕೊಳ್ಳುವದಕ್ಕಾಗಿ ದೇವರು ವಿಧಿಸಿರುವ ದಾರಿಗಳಾಗಿವೆಯಷ್ಟೇ.

# ಅನ್ವಯಿಸುವಿಕೆ

## ನೀವು ಪರಿಶುದ್ಧಗೊಳಿಸಲ್ಪಟ್ಟಿದ್ದೀರೋ? (6ನೇ ಅಧ್ಯಾಯ)

"ಪರಿಶುದ್ಧಗೊಳಿಸಲ್ಪಡುವಿಕೆ" ಎಂಬುದು ಒಂದು ಸಾಮಾನ್ಯ ಪದವಾಗಿರುವದಿಲ್ಲ. ಕೆಲವೊಂದು ವರ್ಷಗಳ ಹಿಂದೆ, ಒಬ್ಬ ಬೋಧಕನು ತನ್ನ ಪೀಠಿಕೆಯ ಮಾತುಗಳನ್ನು ತನ್ನ ಸಭಿಕರಿಗೆ ಸಾರಿದನು, "ಈ ದಿನ ನಾನು ಪರಿಶುದ್ಧಗೊಳಿಸಲ್ಪಡುವಿಕೆ ಬಗ್ಗೆ ಬೋಧಿಸಲಿದ್ದೇನೆ. ಪರಿಶುದ್ಧಗೊಳಿಸಲ್ಪಟ್ಟ ಎಲ್ಲರೂ ದಯವಿಟ್ಟು ಎದ್ದು ನಿಲ್ಲಿರಿ." ಅಲ್ಲಿ ನಾನ್ನೂರಕ್ಕಿಂತ ಹೆಚ್ಚು ಜನರಿದ್ದರು, ಆದರೆ ಇಬ್ಬರು ಮಾತ್ರವೇ ಎದ್ದು ನಿಂತರು (ಒಬ್ಬನು ಹಿರಿಯನು ಮತ್ತು ಮತ್ತೊಬ್ಬನು ಬೋಧಕ). ಅವರಲ್ಲಿ ಬಹುತೇಕರಿಗೆ ತಾವು ಪರಿಶುದ್ಧಗೊಂಡವರೋ ಇಲ್ಲವೋ ಎಂಬದು ಖಚಿತವಾಗಿ ತಿಳಿದಿರಲಿಲ್ಲವೆಂದು ತೋರುತ್ತದೆ. ವಾಸ್ತವದಲ್ಲಿ, ಪರಿಶುದ್ಧಗೊಂಡವರು ಎದ್ದು ನಿಲ್ಲುವಂತೆ ಬೋಧಕನು ಹೇಳಿದಾಗ, ಅಲ್ಲಿದ್ದಂಥ ಎಲ್ಲಾ ಕ್ರೈಸ್ತರಿಗೂ ಎದ್ದು ನಿಲ್ಲುವ ಹಕ್ಕು ಇತ್ತು.

## ದೇವರ ಸಂತಾಪದ ಅಂಕಣ (6:1-11)

ಅಮೆರಿಕದಲ್ಲಿ, ಸ್ಥಳಿಯ ಸುದ್ಧಿ ಪತ್ರಿಕೆಯಲ್ಲಿ ಸಾಮಾನ್ಯವಾಗಿ ಸಂತಾಪಸೂಚನೆಯ ಅಂಕಣವಿರುತ್ತದೆ, ಸಮುದಾಯದಲ್ಲಿ ಇತ್ತೀಚೆಗೆ ಮರಣಿಸಿದವರ ಬಗ್ಗೆ ಪ್ರಕಟಿಸುವ ಒಂದು ವಿಭಾಗ. ನನ್ನ ಪತ್ನಿಯು ಸುದ್ಧಿಪತ್ರಿಕೆಯಲ್ಲಿ ಓದುವಂಥ ಪ್ರಥಮ ಪುಟ ಇದೇ ಆಗಿರುತ್ತದೆ. ನಾವು Cleburne, Texas, ನಲ್ಲಿ ವಾಸಿಸುತ್ತಿದ್ದ ವೇಳೆ, ಆಕೆಯು David Roper ಮರಣಿಸಿದ್ದಾನೆ ಮತ್ತು ಸ್ಥಳಿಯ church of Christ ಸಭೆಯಲ್ಲಿ ಶವ ಸಂಸ್ಕಾರವಿರುತ್ತದೆಬದನ್ನು ಓದಿ ಆಘಾತಗೊಂಡಳು. ಖಂಡಿತವಾಗಿಯೂ, ಅದು ಬೇರೊಬ್ಬ David Roper ಆಗಿತ್ತು; ಆದರೆ ಆಗಲೂ ಆಕೆಯು ಸಂತಾಪ ಅಂಕಣದಲ್ಲಿ ಆ ಹೆಸರನ್ನು ನನಗೆ ತೋರಿಸಿದಾಗ ಕ್ಷಣ ಹೊತ್ತು ಮನಸ್ಸು ಘಾಸಿಗೊಂಡಿತ್ತು.

ವಾಕ್ಯಾಲಂಕಾರವಾಗಿ ಮಾತಾಡುವದಾದರೆ, ನಾವು 6:1-11 ವಚನಗಳನ್ನು "ದೇವರ ಸಂತಾಪದ ಅಂಕಣ" ಎಂದು ಕರೆಯಬಹುದು ಯಾಕೆಂದರೆ ಪೌಲನ ಪ್ರಮುಖ ಒತ್ತು ಮರಣದ ಕುರಿತಾಗಿರುತ್ತದೆ.[56] ಈ ವಚನಗಳಲ್ಲಿ, ಅಪೊಸ್ತಲನು ಆಗಾಗ "ಸತ್ತವರಾದ," "ಮರಣದಲ್ಲಿ ಪಾಲುಗಾರರು" ಮತ್ತು "ಮರಣ" ಎಂಬ ಪದಗಳನ್ನು ಉಪಯೋಗಿಸುತ್ತಾನೆ. ಪೌಲನು ತನ್ನ ಹೆಸರು ಹಾಗೂ ತನ್ನ ವಾಚಕರ ಹೆಸರುಗಳು "ದೇವರ ಸಂತಾಪದ ಅಂಕಣ" ದಲ್ಲಿ ಕಾಣಿಸಿಕೊಂಡದ್ದಕ್ಕೆ ಸಂತೋಷಪಟ್ಟನು ಯಾಕೆಂದರೆ ಆತನ ಪ್ರಮುಖ ಒತ್ತು ಪಾಪದ ಪಾಲಿಗೆ ಸಾಯುವದರ ಮೇಲಾಗಿತ್ತು.

ಇಂದು, ನಮ್ಮ ಹೆಸರುಗಳು "ದೇವರ ಸಂತಾಪ ಅಂಕಣ" ದಲ್ಲಿರುತ್ತವೋ? ಎಂಬದಾಗಿ ಕೇಳಿಕೊಳ್ಳಬೇಕು. ಪಶ್ಚಾತ್ತಾಪಪಟ್ಟ ವಿಶ್ವಾಸಿಯಾಗಿ ದೀಕ್ಷಾಸ್ನಾನಮಾಡಿಸಿ

ಕೊಳ್ಳುವ ಮೂಲಕ ಪಾಪದ ಪಾಲಿಗೆ ಸತ್ತಿದ್ದೇವೋ? ನಾವು ವಾಕ್ಯದನುಸಾರ ದೀಕ್ಷಾಸ್ನಾನ ಮಾಡಿಸಿಕೊಂಡಿದ್ದರೆ, ದೇವರು ಹೊಸ ಜೀವನವನ್ನು ಕೊಟ್ಟಂಥ ಜನರಾಗಿ ನಾವು ಜೀವಿಸುತ್ತಿದ್ದೇವೋ?

## ಕ್ರಿಸ್ತನಲ್ಲಿ ಒಬ್ಬ ಹೊಸ ಮನುಷ್ಯನು (6:1-4)

ಒಬ್ಬ ಭಕ್ತಿಹೀನನಾಗಿ, ಅನೈತಿಕ ಜೀವನವನ್ನು ನಡಿಸಿದ Augustine ಯೇಸುವಿನ ಒಬ್ಬ ಮಹಾನ್ ವಿಶ್ವಾಸಿಯಾದನು. ಅದರ ಫಲಿತವಾಗಿ, ಆತನ ಜೀವನ ಮಾರ್ಪಟ್ಟಿತು. ಒಂದು ದಿನ, ಆತನು ಬೀದಿಯಲ್ಲಿ ನಡೆದು ಹೋಗುತ್ತಿರುವಾಗ, ಆತನು ಗತಕಾಲದಲ್ಲಿ ವ್ಯಭಿಚಾರ ಮಾಡಿದಂಥ ಒಬ್ಬ ಸ್ತ್ರೀಯು ಎದುರಿಗೆ ಬರುತ್ತಾಳೆ. ಆ ಹೆಂಗಸು ಆತನೆಡೆಗೆ ಮೋಹದಿಂದ ನಗುತ್ತಾಳೆ. ಆತನು ಯಾವ ಪ್ರತಿಕ್ರಿಯೆಯನ್ನೂ ತೋರದಿದ್ದಾಗ, ಆಕೆಯು ಹೇಳಿದ್ದೇನೆಂದರೆ, "Augustine, ನಾನು, ನೆನಪಿಲ್ಲವೇ!" ಆತನು ಹೊರಟು ಹೋಗುತ್ತಾ ಹೇಳಿದ್ದೇನೆಂದರೆ, "ಅವನು ನಾನಲ್ಲ."[57]

## ಹೆಚ್ಚು ಪಾಪ, ಹೆಚ್ಚು ಕೃಪೆಯೋ? (6:1, 2)

6:1 ರಲ್ಲಿ, ಪೌಲನು ಈ ಪ್ರಶ್ನೆಯನ್ನು ಕೇಳಿದನು, "ಕೃಪೆಯು ಹೆಚ್ಚಲಿ ಎಂದು ಪಾಪದಲ್ಲಿ ಇನ್ನೂ ಇರಬೇಕೋ?" ಜನರು ಈ ರೀತಿಯಾಗಿ ತರ್ಕಮಾಡುತ್ತಾರೋ? ಹಾಗೆಯೇ ತೋರುತ್ತದೆ. ಅದಕ್ಕೊಂದು ಗಮನಾರ್ಹವಾದ ಐತಿಹಾಸಿಕ ಉದಾಹರಣೆ ಯೆಂದರೆ Grigori Rasputin (ಕ್ರಿ.ಶ. 1872-1916), ಆತನೊಬ್ಬ ರಷ್ಯಾದ ಸನ್ಯಾಸಿಯಾಗಿದ್ದು ರಷ್ಯಾದ Czarina Alexandraಗೆ ಆಪ್ತನಾಗಿದ್ದನು.[58] Rasputin ತನ್ನ ಭಕ್ತಿಹೀನ ಜೀವನ ಶೈಲಿಯನ್ನು ಮತ್ತು ಲಜ್ಜೆಗೆಟ್ಟ ನಡವಳಿಕೆಯನ್ನು ಈ ರೀತಿಯ ತರ್ಕದಿಂದ ಸಮರ್ಥಿಸಿಕೊಂಡನು:

> ಪಾಪ ಮಾಡುವವರಿಗೆ ಹೆಚ್ಚು ಕ್ಷಮೆಯ ಅಗತ್ಯವಿರುತ್ತದೆ.
> ಜನರು ಪಶ್ಚಾತ್ತಾಪಪಡುವಾಗ ದೇವರು ಅವರನ್ನು ಕ್ಷಮಿಸುತ್ತಾನೆ.
> ಹೀಗೆ ಹೆಚ್ಚು ಪಾಪ ಮಾಡಿ, ನಂತರ ಪಶ್ಚಾತ್ತಾಪಪಟ್ಟರೆ, ಆತನು ಬೇರೆ ಪಾಪಿಗಳಿಗಿಂತಲೂ ಹೆಚ್ಚು ದೇವರ ಕ್ಷಮಾಪಣೆಯ ಕೃಪೆಯನ್ನು ಆನಂದಿಸುತ್ತಾನೆ.

ಅಂಥ ಉದಾಹರಣೆಗಳು ಚಾರಿತ್ರಿಕ ದಾಖಲೆಗಳಿಗೆ ಮಾತ್ರ ಸಿಮೀತವಾಗಿಲ್ಲ. ಇಂದು, ಅನೇಕರು ತಾವು ಪಾಪ ಮಾಡಿದ ಬಳಿಕ ದೇವರು ತಮ್ಮನ್ನು ಕ್ಷಮಿಸುವನೆಂಬ ಮನೋಭಾವದೊಂದಿಗೆ ಉದ್ದೇಶಪೂರ್ವಕವಾಗಿ ಪಾಪ ಮಾಡುತ್ತಾರೆ. Glen Pace ತನಗೆ ಬಹಳ ಸಂಭ್ರಮದಿಂದ, "ಈಗಷ್ಟೇ ನಾನು ಕೃಪೆಯನ್ನು ಕಂಡುಕೊಂಡಿದ್ದೇನೆ!" ಎಂದು ಹೇಳಿದ ಒಬ್ಬ ಮಿತ್ರನ ಕುರಿತು ತಿಳಿಸುತ್ತಾನೆ ಆ ಮನುಷ್ಯನು ಅನಂತರದಲ್ಲಿ ತನ್ನ ಪತ್ನಿಯನ್ನು ತೊರೆದನು. ಆತನು Glenಗೆ ಹೇಳಿದ್ದೇನೆಂದರೆ, "ಹೌದು, ಇದು ಪಾಪವೆಂದು

ಬೈಬಲ್ ಹೇಳುತ್ತದೆಂಬದು ನನಗೆ ಗೊತ್ತಿದೆ, ಆದರೆ ಕೃಪೆಯು ಅದನ್ನು ಮುಚ್ಚಿಕೊಳ್ಳುವದು."[59]

ಅದಕ್ಕೆ ಪೌಲನು ನೀಡುವ ತೀಕ್ಷ್ಣವಾದ ಪ್ರತ್ಯುತ್ತರವು-" ಎಂದಿಗೂ ಇರಬಾರದು!" (6:2)-ನಮ್ಮನ್ನು ಪಾಪದ ಕಡೆಗೆ ಅಂತಹ ನಿರಾತಂಕವಾದ ಮನೋಭಾವ ಹೊಂದಿರುವದರ ವಿರುದ್ಧ ಎಚ್ಚರಿಸತಕ್ಕದ್ದು. ನಮಗೋಸ್ಕರ ಯೇಸು ಶಿಲುಬೆಯ ಮೇಲೆ ಅನುಭವಿಸಿದ ಬಾಧೆಯನ್ನು ನಾವು ಅರ್ಥಮಾಡಿಕೊಳ್ಳುವಾಗ, ನಮ್ಮನ್ನು ಅದು ಪಾಪವನ್ನು ಕಡೆಗಾಣಿಸಿ ಅದರ ಪಾಲಿಗೆ ಸಾಯುವಂತೆ ನಡಿಸತಕ್ಕದ್ದಾಗಿರಬೇಕು. ನಾವು ನಮ್ಮ ಜೀವಿತಗಳಲ್ಲಿ ದೇವರ ಕೃಪೆಯನ್ನು ಕೀಳುಮಟ್ಟಕ್ಕೆ ಇಳಿಸುವ ಅಪರಾಧವನ್ನು ಮಾಡದಿರೋಣ.

## ಕಲಿಸಲ್ಪಟ್ಟ ಬೋಧನೆಯ ಮಾದರಿ (6:3-6, 17, 18)

ರೋಮಾ 6ನೇ ಅಧ್ಯಾಯವು "ನಾವು ಹೊಸ ಒಡಂಬಡಿಕೆಯಲ್ಲಿ ಕಾಣುವಂಥ ದೀಕ್ಷಾಸ್ನಾನದ ಸ್ಥಾನ ಮತ್ತು ಉದ್ದೇಶ ಮತ್ತು ಕ್ರಿಯೆಯ ಕುರಿತ ಅತ್ಯಂತ ಪೂರ್ಣವಾದ ಹಾಗೂ ಸವಿಸ್ತಾರವಾದ ಚರ್ಚೆ" ಎಂಬದಾಗಿ ಕರೆಯಲ್ಪಟ್ಟಿದೆ.[60] ಪೌಲನು ರೋಮಾಪುರದ ಕ್ರೈಸ್ತರಿಗೆ ದೀಕ್ಷಾಸ್ನಾನದ ಕುರಿತು ಹೇಳಿದಂಥ ವಾಕ್ಯಭಾಗದಿಂದ ವಿಷಯವನ್ನು ತೆಗೆದುಕೊಂಡು ಅದನ್ನು ನಮ್ಮ ಜೀವಿತಗಳಿಗೆ ಅನ್ವಯಿಸಿಕೊಳ್ಳುವದರಲ್ಲಿ ಖಂಡಿತವಾಗಿಯೂ ಮೌಲ್ಯವಿರುತ್ತದೆ.

1 ಕೊರಿಂಥ 15:1-4ರಲ್ಲಿ, ಪೌಲನು ಸುವಾರ್ತೆಯ ತಿರುಳಿನಲ್ಲಿ ಮೂರು ಮೂಲಭೂತ ವಾಸ್ತವಾಂಶಗಳಿರುತ್ತವೆಂದು ಹೇಳಿದನು: ಕ್ರಿಸ್ತನ ಮರಣ, ಹೂಣಲ್ಪಡುವಿಕೆ ಮತ್ತು ಪುನರುತ್ಥಾನ. ಇದನ್ನು ಸತ್ಯವೆಂದು ಅರ್ಥಮಾಡಿಕೊಂಡಾಗ, "ಸುವಾರ್ತೆಗೆ ವಿಧೇಯರಾಗುವದು" ಎಂಬದನ್ನು ಓದುವದು ಒಂದು ರೀತಿಯಲ್ಲಿ ದಿಗ್ಭ್ರಾಂತಗೊಳಿಸುತ್ತದೆ (ನೋಡಿರಿ 2 ಥೆಸಲೋನಿಕ 1:8; 1 ಪೇತ್ರ 4:17). ನಾವು *ವಾಸ್ತವಾಂಶಗಳಿಗೆ* ಹೇಗೆ ವಿಧೇಯರಾಗಲು ಸಾಧ್ಯ? ಪೌಲನು ನಮಗೆ ರೋಮಾ 6ನೇ ಅಧ್ಯಾಯದಲ್ಲಿ ಉತ್ತರವನ್ನು ಕೊಡುತ್ತಾನೆ:

> ಆದರೆ ನೀವು ಮುಂಚೆ ಪಾಪಕ್ಕೆ ದಾಸರಾಗಿದ್ದರೂ ನಿಮಗೆ ಕಲಿಸಲ್ಪಟ್ಟ ಬೋಧನೆಗೆ ನೀವು ಮನಃಪೂರ್ವಕವಾಗಿ ಅಧೀನರಾದದರಿಂದಲೂ ಪಾಪದಿಂದ ಬಿಡುಗಡೆಯನ್ನು ಹೊಂದಿ ನೀತಿಗೆ ದಾಸರಾದದರಿಂದಲೂ ದೇವರಿಗೆ ಸ್ತೋತ್ರವಾಗಲಿ (6:17, 18; ಒತ್ತಿಹೇಳಿದ್ದು ನನ್ನದು)

ನಾವು ವಾಸ್ತವಾಂಶಗಳಿಗೆ ವಿಧೇಯಾರಾಗಲು ಸಾಧ್ಯವಿಲ್ಲ, ಆದರೆ ವಾಸ್ತವಾಂಶಗಳ ಒಂದು *ಮಾದರಿ*ಗೆ ವಿಧೇಯರಾಗಬಲ್ಲೆವು. ಪೌಲನು ಅದನ್ನು ಹೇಗೆ ಮಾಡುವದಕ್ಕೆ ಸಾಧ್ಯವಿರುತ್ತದೆಂಬುದನ್ನು ರೋಮಾ 6:3, 4ರಲ್ಲಿ ವಿವರಿಸುತ್ತಾನೆ:

> ಕ್ರಿಸ್ತಯೇಸುವಿನಲ್ಲಿ ಸೇರುವದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡವರಾದ ನಾವೆಲ್ಲರೂ ಆತನ *ಮರಣ*ದಲ್ಲಿ ಪಾಲುಗಾರರಾಗುವದಕ್ಕಾಗಿ ದೀಕ್ಷಾಸ್ನಾನ ಮಾಡಿಸಿಕೊಂಡೆವೆಂದು

> ನಿಮಗೆ ತಿಳಿಯದೋ? ಹೀಗಿರಲಾಗಿ ನಾವು ದೀಕ್ಷಾಸ್ನಾನಮಾಡಿಸಿಕೊಂಡಾಗ ಆತನ ಮರಣದಲ್ಲಿ ಪಾಲುಗಾರ ರಾಗಿ ಆತನೊಂದಿಗೆ *ಹೂಣಲ್ಪಟ್ಟೆವು*. ಆದದರಿಂದ ಕ್ರಿಸ್ತನು ಸತ್ತು ತಂದೆಯ ಮಹಿಮೆಯಿಂದ ಜೀವಿತನಾಗಿ ಎಬ್ಬಿಸಲ್ಪಟ್ಟಂತೆಯೇ ನಾವು ಕೂಡ *ಜೀವದಿಂದೆದ್ದು* ಹೊಸಬರಾಗಿ ನಡಕೊಳ್ಳಬೇಕು (ಒತ್ತಿ ಹೇಳಿದ್ದು ನನ್ನದು).

ಕ್ರಿಸ್ತನು ಶಿಲುಬೆಯ ಮೇಲೆ *ಮರಣಿಸಿದ* ಹಾಗೆಯೇ, ನಾವು ಯೇಸುವಿನಲ್ಲಿ ನಂಬಿಕೆಯಿಟ್ಟು, ನಮ್ಮ ಪಾಪಗಳಿಗಾಗಿ ಪಶ್ಚಾತಾಪಪಟ್ಟು ನಮ್ಮ ಕರ್ತನಿಗೆ ವಿಧೇಯರಾಗುವಾಗ "ಪಾಪದ ಪಾಲಿಗೆ ಮರಣಿಸುತ್ತೇವೆ" (ನೋಡಿರಿ 6:2). ನಾವು ಆತನ ಮರಣದಲ್ಲಿ ಪಾಲುಗಾರರಾಗುವದಕ್ಕೆ "ದೀಕ್ಷಾಸ್ನಾನ ಮಾಡಿಸಿಕೊಳ್ಳುತ್ತೇವೆ" (6:3). ಕ್ರಿಸ್ತನು ಅರಿಮತಾಯದ ಯೋಸೇಫ ಎಂಬುವವನ ಹೊಸದಾದ ಸಮಾಧಿಯಲ್ಲಿ ಹೂಣಲ್ಪಟ್ಟನು, ಮತ್ತು ನಾವು ದೀಕ್ಷಾಸ್ನಾನದ ನೀರಿನ ಸಮಾಧಿಯಲ್ಲಿ "ಹೂಣಲ್ಪಡುತ್ತೇವೆ" (6:4). ಒಬ್ಬ ವ್ಯಕ್ತಿಯ ಶವದ ಪೆಟ್ಟಿಗೆಯ ಮೇಲೆ ಕೈಮುಷ್ಠಿಯಷ್ಟು ಮಣ್ಣನ್ನು ಎಸೆಯುವ ಮೂಲಕ ಆತನನ್ನು ಹೂಣಿಡುವದಿಲ್ಲ, ಮತ್ತು ನಮ್ಮ ತಲೆಯ ಮೇಲೆ ಕೆಲವು ನೀರಿನ ಹನಿಗಳನ್ನು ಚಿಮುಕಿಸುವ ಮೂಲಕ ನಾವು ಹೂಣಲ್ಪಟ್ಟಂತಾಗುವದಿಲ್ಲ. ಬೈಬಲಿನ ದೀಕ್ಷಾಸ್ನಾನವು ನೀರಿನಲ್ಲಿ ಮುಳುಗಿ ತೆಗೆದುಕೊಳ್ಳುವ ದೀಕ್ಷಾಸ್ನಾನವಾಗಿದೆ.

ಕ್ರಿಸ್ತನು ಸಮಾಧಿಯಲ್ಲಿಯೇ ಉಳಿಯಲಿಲ್ಲ; ಬದಲಾಗಿ, ಆತನು ಮೂರನೆಯ ದಿನದಲ್ಲಿ ಎಬ್ಬಿಸಲ್ಪಟ್ಟನು-ಮತ್ತು ನಾವು ನೀರಿನ ಸಮಾಧಿಯಿಂದ ಎಬ್ಬಿಸಲ್ಪಡುತ್ತೇವೆ. Jim McGuiggan ಅದರ ಕುರಿತು ಹೀಗೆ ಹೇಳಿದರು: "ನಾನು ಪ್ರತಿ ಸಾರಿ ಯಾರಾದರೊಬ್ಬರು ದೀಕ್ಷಾಸ್ನಾನ ಮಾಡಿಸಿಕೊಳ್ಳುವಾಗ ನೀರು ಸಿಡಿಯುವ ಶಬ್ಧವನ್ನು ಕೇಳುವಾಗಲೆಲ್ಲಾ, ನನ್ನ ಮನಸ್ಸಿನಲ್ಲಿ ಸಮಾಧಿಯ ದ್ವಾರದಿಂದ ಬಂಡೆಯು ಉರುಳಿಸಲ್ಪಡುವ ಸಪ್ಪಳವನ್ನು ಕೇಳಿಸಿಕೊಳ್ಳುತ್ತೇನೆ."[61] ನಾವು "ಹೊಸಬರಾಗಿ ನಡಕೊಳ್ಳುವದಕ್ಕೆ" ಎಬ್ಬಿಸಲ್ಪಡುತ್ತೇವೆ (6:4). ಈ ಹೊಸ ಜೀವನವು ನಮಗೆ ಆನಂದಿಸುವದಕ್ಕೆ ದೀಕ್ಷಾಸ್ನಾನದ *ಮುಂಚೆ* ಅಲ್ಲ ಆದರೆ *ನಂತರ*ದಲ್ಲಿ ಸಿಕ್ಕುವದಾಗಿದೆ ಎಂಬದನ್ನು ಗಮನಿಸಿರಿ. William S. Banowsky ಬರೆದದ್ದೇನೆಂದರೆ, "ತ್ವರಿತ ದೀಕ್ಷಾಸ್ನಾನವು ಒಂದು ಜೀವನದ ಅಂತ್ಯವನ್ನು ಸೂಚಿಸಿ, ಮತ್ತೊಂದು ಜೀವನದ ಅರಂಭಕ್ಕೆ ನಾಂದಿಯಾಗುತ್ತದೆ. ದೀಕ್ಷಾಸ್ನಾನವು ಕೇವಲ ಮರಣಕ್ಕೆ ಮಾತ್ರ ಸೂಚನೆಯಾಗಿರದೆ ಮರುಜನ್ಮಕ್ಕೆ ಸೂಚನೆಯಾಗಿರುತ್ತದೆ."[62]

ನಾನು ಜನರಿಗೆ ದೀಕ್ಷಾಸ್ನಾನ ಮಾಡಿಸುವಾಗ, ಅನೇಕ ವೇಳೆ ಅವರಿಗೆ ಹೇಳುವದೇನೆಂದರೆ, "ನಾನು ಈಗ ಸಮಾಧಿಯಲ್ಲಿ ಕ್ರಿಸ್ತನ ದೇಹವು ಇಡಲ್ಪಟ್ಟ ರೀತಿಯಲ್ಲಿಯೇ ನಿಮ್ಮನ್ನು ನೀರಿನ ಕೆಳಗೆ ಇಳಿಸಲಿದ್ದೇನೆ. ನಂತರ ಕ್ರಿಸ್ತನು ಮೂರನೆಯ ದಿನದಲ್ಲಿ ಎಬ್ಬಿಸಲ್ಪಟ್ಟ ರೀತಿಯಲ್ಲಿಯೇ ನಿಮ್ಮನ್ನು ನೀರಿನಿಂದ ಮೇಲಕ್ಕೆ ಎತ್ತುವೆನು. ನಾನು ನಿಮಗೆ ದೀಕ್ಷಾಸ್ನಾನ ಮಾಡಿಸುವ ವೇಳೆಯಲ್ಲಿ, ನೀವು ಕ್ರಿಸ್ತನ ಮರಣ, ಹೂಣಲ್ಪಡುವಿಕೆ ಮತ್ತು ಪುನರುತ್ಥಾನಗಳ ಬಗ್ಗೆ ಯೋಚಿಸಬೇಕೆಂದು ಇಚ್ಚೈಸುತ್ತೇನೆ."

ನಾವು ದೀಕ್ಷಾಸ್ನಾನ ಮತ್ತು ಕ್ರಿಸ್ತನ ಮರಣ, ಹೂಣಲ್ಪಡುವಿಕೆ, ಮತ್ತು ಪುನರುತ್ಥಾನಗಳ ನಡುವಿನ ನಿಕಟ ಸಂಬಂಧದ ಬಗ್ಗೆ ಅರ್ಥಮಾಡಿಕೊಳ್ಳುವದು ಪ್ರಾಮುಖ್ಯವೆಂದು ಪೌಲನು ಭಾವಿಸಿದನು. ಆ ಕಾರಣದಿಂದ, ಆತನು ತನ್ನ ವಿಚಾರಗಳನ್ನು

ಮುಂದಿನ ಎರಡು ವಚನಗಳಲ್ಲಿ ಮತ್ತೇ ಮತ್ತೇ ಪುನರಾವರ್ತಿಸುತ್ತಾನೆ:

> ಹೇಗಂದರೆ ನಾವು ಆತನ ಮರಣಕ್ಕೆ ಸದೃಶವಾದ ಮರಣವನ್ನು ಹೊಂದಿ ಆತನಲ್ಲಿ ಐಕ್ಯವಾಗಿದ್ದರೆ ಆತನ ಪುನರುತ್ಥಾನಕ್ಕೆ ಸದೃಶವಾದ ಪುನರು ತ್ಥಾನವನ್ನೂ ಹೊಂದಿ ಆತನಲ್ಲಿ ಐಕ್ಯವಾಗುವೆವು. ಪಾಪಧೀನಸ್ವಭಾವವು ನಾಶವಾಗಿ ನಾವು ಇನ್ನೂ ಪಾಪದ ವಶದಲ್ಲಿರದಂತೆ ನಮ್ಮ ಪೂರ್ವಸ್ವಭಾವವು ಕ್ರಿಸ್ತನ ಕೂಡ ಶಿಲುಬೆಗೆ ಹಾಕಲ್ಪಟ್ಟಿತೆಂದು ತಿಳಿದಿದ್ದೇವೆ (6:5, 6).

ಪೌಲನು 5ನೇ ವಚನದಲ್ಲಿ ಹೇಳಿದ್ದೇನೆಂದರೆ ನಾವು ಕ್ರಿಸ್ತನ "ಮರಣಕ್ಕೆ ಸದೃಶವಾಗಿ" ಆತನೊಂದಿಗಿದ್ದೇವೆ, ಮತ್ತು ಹೀಗೆ ನಾವು ಆತನೊಂದಿಗೆ "ಐಕ್ಯವಾಗಿದ್ದೇವೆ" ಅಥವಾ "ನೆಡಲ್ಪಟ್ಟಿದ್ದೇವೆ" (KJV). ವಿಷಯವು ಹೀಗಿರುವದರಿಂದ, ನಾವು "ಆತನ ಪುನರುತ್ಥಾನದ ಸದೃಶದಲ್ಲಿ" ಸಹ ಎಬ್ಬಿಸಲ್ಪಡುವೆವು. ವಚನ 6ರಲ್ಲಿ, ಪೌಲನು ಹೀಗೆ ಹೇಳಿದನು, "ನಮ್ಮ ಪಾಪಾಧೀನಸ್ವಭಾವವು ನಾಶವಾಗುವ" ಹಾಗೆ "ನಮ್ಮ ಪೂರ್ವಸ್ವಭಾವವು ಶಿಲುಬೆಗೆ ಹಾಕಲ್ಪಟ್ಟಿತು." ಅದರ ಫಲಿತವಾಗಿ, ಇನ್ನು ಮೇಲೆ "ಪಾಪದ ವಶದಲ್ಲಿರುವದಿಲ್ಲ."

ನಾವು ಆ "ಕಲಿಸಲ್ಪಟ್ಟ ಬೋಧನೆಗೆ" ವಿಧೇಯರಾಗುವಾಗ ದೇವರು ನಮಗೆ ಮತ್ತು ನಮಗಾಗಿ ಮಾಡುವ ಕಾರ್ಯವು ಅದ್ಭುತಕರವಾಗಿರುತ್ತದಲ್ಲವೇ? ಹೇಗೂ, ಅರ್ಥಮಾಡಿಕೊಳ್ಳತಕ್ಕದ್ದೇನೆಂದರೆ, ಪೌಲನು ಇಲ್ಲಿ ಕೇವಲ "ಒಂದು ಬೋಧನಾಕ್ರಮವನ್ನು" ಕಲಿತುಕೊಳ್ಳುವದರ ಬಗ್ಗೆ ಮಾತಾಡುತ್ತಿಲ್ಲ. ಆತನು ಹೇಳಿದ್ದೇನೆಂದರೆ, "ನಿಮಗೆ ಕಲಿಸಲ್ಪಟ್ಟ ಬೋಧನೆಗೆ ನೀವು *ಮನಃಪೂರ್ವಕವಾಗಿ ಅಧೀನರಾದಿರಿ"* (6:17; ಒತ್ತಿ ಹೇಳಿದ್ದು ನನ್ನದು). ಒಬ್ಬನ ಹೃದಯವು ಅದರಲ್ಲಿಲ್ಲವಾದರೆ, ಆತನು ಕರ್ತನಲ್ಲಿ ನಂಬಿಕೆಯಿಟ್ಟು ತನ್ನ ಜೀವಿತವನ್ನು ನಿಜವಾಗಿಯೂ ಆತನಿಗೆ ಒಪ್ಪಿಸಿಕೊಡುವದಿಲ್ಲವಾದರೆ, ಆತನು ದೀಕ್ಷಾಸ್ನಾನ ಮಾಡಿಸಿಕೊಳ್ಳುವವನಾಗಿರುವದಿಲ್ಲ- ಕೇವಲ ನೀರಿನಲ್ಲಿ ಒದ್ದೆ ಮಾಡಿಕೊಳ್ಳುವವನಾಗಿದ್ದಾನಷ್ಟೆ.

ನಮ್ಮ ವಿಧೇಯತೆಯು ಹೃದಯಪೂರ್ವಕವಾಗಿದ್ದರೆ, ನಾವು ದೀಕ್ಷಾಸ್ನಾನ ಮಾಡಿಸಿಕೊಳ್ಳುವಾಗ ಏನು ಸಂಭವಿಸುತ್ತದೆಂದು ಪೌಲನು ಹೇಳುತ್ತಾನೆಂಬದನ್ನು ಗಮನಿಸಿರಿ. ನಾವು ದೀಕ್ಷಾಸ್ನಾನ ಮಾಡಿಸಿಕೊಳ್ಳುವ *ಮುಂಚೆ*, ನಾವು "ಪಾಪಕ್ಕೆ ದಾಸರಾಗಿದ್ದೆವು" (6:17). ನಾವು ದೀಕ್ಷಾಸ್ನಾನ ಮಾಡಿಸಿಕೊಂಡ *ಬಳಿಕ*, "ಪಾಪದಿಂದ ಬಿಡುಗಡೆ" ಹೊಂದಿದೆವು (6:18).

ಪುನಃ ದೀಕ್ಷಾಸ್ನಾನ ಹಾಗೂ ಕ್ರಿಸ್ತನ ಮರಣ, ಹೂಣಲ್ಪಡುವಿಕೆ ಮತ್ತು ಪುನರುತ್ಥಾನಗಳ ನಡುವಿನ ಸಂಬಂಧವನ್ನು ಗಮನಿಸಿರಿ. ನಮ್ಮ ಕರ್ತನ ಮರಣ, ಹೂಣಲ್ಪಡುವಿಕೆ ಹಾಗೂ ಪುನರುತ್ಥಾನಗಳಿಲ್ಲದೆ ದೀಕ್ಷಾಸ್ನಾನಕ್ಕೆ ಯಾವ ಅರ್ಥವೂ ಇರುವದಿಲ್ಲ. ನಿಮಗೆ ದೀಕ್ಷಾಸ್ನಾನದ ಬಗ್ಗೆ ಏನೂ ಗೊತ್ತಿಲ್ಲ, ಮತ್ತು ಅದರ ಬಗ್ಗೆ ಎಂದಿಗೂ ಕೇಳಿಸಿಕೊಳ್ಳಲೇ ಇಲ್ಲವೆಂದು ಊಹಿಸಿಕೊಳ್ಳಿರಿ. ನಂತರ ಇಬ್ಬರು ವ್ಯಕ್ತಿಗಳು ನೀರಿನೊಳಗೆ ಹೋಗುವದನ್ನೂ ಒಬ್ಬನು ಮತ್ತೊಬ್ಬನನ್ನು ನೀರಿನಲ್ಲಿ ಮುಳುಗಿಸುವದನ್ನು ನೋಡು ತ್ತಿರೆಂದು ಊಹಿಸಿಕೊಳ್ಳಿರಿ. ಇದು ನಿಮಗೊಂದು ಅರ್ಥವಿಲ್ಲದ ಕೃತ್ಯವಾಗಿ ತೋರುವದಿ

ಲ್ಲವೋ? ದೀಕ್ಷಾಸ್ನಾನವು ಯೇಸು ಮಾಡಿರುವ ಕಾರ್ಯದೊಂದಿಗೆ ಜೋಡಣೆಮಾಡಲ್ಪಟ್ಟರೆ ಮಾತ್ರವೇ ಅದಕ್ಕೆ ಅರ್ಥ ಮತ್ತು ನ್ಯಾಯಸಮ್ಮತೆ ಸಿಕ್ಕುತ್ತದೆ.

ನನಗೆ ಕೆಲವು ಸಾರಿ "ಪಂಗಡಗಳ ದೀಕ್ಷಾಸ್ನಾನದಲ್ಲಿ ಯಾವ ತಪ್ಪಿದೆ?" ಎಂದು ಕೇಳಲಾಗುತ್ತದೆ. ಅದಕ್ಕೆ ಕೊಡಬಹುದಾದ ಒಂದು ಸರಳ ಉತ್ತರವೆಂದರೆ, ನಿಯಮದ ಪ್ರಕಾರ, ಪಂಗಡಗಳಿಂದ ಉಪದೇಶಿಸಲ್ಪಡುವ ಹಾಗೂ ಆಚರಿಸಲ್ಪಡುವ ದೀಕ್ಷಾಸ್ನಾನವು ಕ್ರಿಸ್ತನ ಮರಣ, ಹೂಣಲ್ಪಡುವಿಕೆ ಮತ್ತು ಪುನರುತ್ಥಾನಗಳ ನಡುವಿನ ಸಂಬಂಧವನ್ನು ನಾಶಗೊಳಿಸುತ್ತದೆ.

ಉದಾಹರಣೆಗೆ, ಕೆಲವರು ಶಿಶುಗಳನ್ನು "ದೀಕ್ಷಾಸ್ನಾನ ಮಾಡಿಸುತ್ತಾರೆ" -ಆದರೆ ಶಿಶುಗಳು "ಪಾಪದಲ್ಲಿ ಸತ್ತವರಲ್ಲ" ಮತ್ತು "ಪಾಪದ ಪಾಲಿಗೆ ಸತ್ತವರಲ್ಲ." ಹೀಗೆ ಕ್ರಿಸ್ತನ *ಮರಣದೊಂದಿಗಿನ* ಸಂಬಂಧವು ನಾಶಗೊಳಿಸಲ್ಪಟ್ಟಿದೆ.

ಕೆಲವರು ಜನರ ಮೇಲೆ ನೀರನ್ನು ಚಿಮುಕಿಸಿ ಅದನ್ನು ದೀಕ್ಷಾಸ್ನಾನ ಎಂದು ಕರೆಯುತ್ತಾರೆ, ಆದರೆ ಚಿಮುಕಿಸುವದು ಹೂಣಲ್ಪಡುವಿಕೆ ನಿಜವಾದ ಸದೃಶವಾಗಿರುವದಿಲ್ಲ. ಹೀಗೆ ಕ್ರಿಸ್ತನ *ಹೂಣಲ್ಪಡುವಿಕೆ*ಯೊಂದಿಗಿನ ಸಂಬಂಧವು ನಾಶಗೊಳಿಸಲ್ಪಟ್ಟಿದೆ.

ಅಷ್ಟುಮಾತ್ರವಲ್ಲದೆ, ಕೆಲವರು ನೀರಿನಲ್ಲಿ ಮುಳುಗಿಸಿ ದೀಕ್ಷಾಸ್ನಾನ ಮಾಡಿಸುತ್ತಾರೆ, ಅವರು ಹೇಳುವದೇನೆಂದರೆ ಜನರು ದೀಕ್ಷಾಸ್ನಾನದ *ಮುಂಚೆಯೇ* ರಕ್ಷಿಸಲ್ಪಡುತ್ತಾರೆ ಎಂಬದಾಗಿ. ಅವರು "ಹೊಸಬರಾಗಿ ನಡಕೊಳ್ಳುವದನ್ನು" ದೀಕ್ಷಾಸ್ನಾನಕ್ಕೆ ಮುಂಚೆ ಇಡುತ್ತಾರೆ, ಹೊರತು ನಂತರವಲ್ಲ. ಆ ರೀತಿಯ ದೀಕ್ಷಾಸ್ನಾನದಿಂದ ಕ್ರಿಸ್ತನ *ಪುನರುತ್ಥಾನದೊಂದಿಗಿನ* ಸಂಬಂಧವು ನಾಶಗೊಳಿಸಲ್ಪಡುತ್ತದೆ.

ರೋಮಾ 6:1-11ರಲ್ಲಿನ ಪೌಲನ ಮಾತುಗಳ ವಿಷಯವಾಗಿ Barclay ಹೀಗೆ ಹೇಳುತ್ತಾರೆ, "ಆತನ ಕಾಲದಲ್ಲಿದ್ದ ದೀಕ್ಷಾಸ್ನಾನವು ಇಂದು ಸಾಮಾನ್ಯವಾಗಿರುವ ದೀಕ್ಷಾಸ್ನಾನಕ್ಕಿಂತ ವ್ಯತ್ಯಾಸವಾಗಿತ್ತು ಎಂಬದನ್ನು ನಾವು ಅರ್ಥಮಾಡಿ ಕೊಳ್ಳಬೇಕು." ಆತನು ಗಮನಕ್ಕೆ ತರುವದೇನೆಂದರೆ, ಪೌಲನ ದಿನದಲ್ಲಿ, ದೀಕ್ಷಾಸ್ನಾನವು "ಪ್ರಾಯಸ್ಥರ ದೀಕ್ಷಾಸ್ನಾನ" ಆಗಿತ್ತು, "ಅದು ನಂಬಿಕೆಯನ್ನು ಅರಿಕೆಮಾಡುವದರೊಂದಿಗೆ ಆಪ್ತವಾಗಿ ಸಂಬಂಧ ಹೊಂದಿತ್ತು," ಮತ್ತು "ಸಾಮಾನ್ಯವಾಗಿ . . . ಸಂಪೂರ್ಣವಾಗಿ ಮುಳುಗಿಸಿ ಕೊಡಲ್ಪಡುವದಾಗಿತ್ತು."[63] ಇಂದು ಕೊಡಲ್ಪಡುವ ದೀಕ್ಷಾಸ್ನಾನವು ಅನೇಕ ಸಾರಿ ರೋಮಾ 6ನೇ ಅಧ್ಯಾಯದಲ್ಲಿ ವರ್ಣಿಸಲಾಗಿರುವ ದೀಕ್ಷಾಸ್ನಾನಕ್ಕೆ ವ್ಯತ್ಯಾಸವಾಗಿದೆ ಯೆಂಬುದನ್ನು ನಾವು ಖಂಡಿತವಾಗಿಯೂ ಒಪ್ಪಿಕೊಳ್ಳಬಹುದಾಗಿದೆ-ಆದರೆ ಅದನ್ನು ಯಾರು ಮಾರ್ಪಡಿಸಿದರು? ದೇವರಂತೂ ಅಲ್ಲ, ಆದರೆ ಮನುಷ್ಯನೇ. ಪೇತ್ರನು ಹೇಳಿದನು, "ಮನುಷ್ಯರಿಗಿಂತಲೂ ದೇವರಿಗೆ ಹೆಚ್ಚಾಗಿ ವಿಧೇಯರಾಗಬೇಕಲ್ಲಾ" (ಅಪೊಸ್ತಲರ ಕೃತ್ಯಗಳು 5:29).

*ಮುಕ್ತಾಯ.* ನಮ್ಮಲ್ಲಿ ಅನೇಕರು ಕ್ರಿಸ್ತನು ಮರಣಿಸಿದ, ಹೂಣಲ್ಪಟ್ಟ ಮತ್ತು ಪುನರುತ್ಥಾನಗೊಂಡ ಸ್ಥಳಕ್ಕೆ ಭೇಟಿ ಕೊಡುವದಕ್ಕೆ ಹೆಚ್ಚು ಸಂತೋಷಪಡುವೆವು. ಆತನು ಇಡಲ್ಪಟ್ಟಿದ್ದ ಸಮಾಧಿಯೊಳಗೆ ಪ್ರವೇಶಿಸಿ, ಆ ತಂಪಾದ ಗಡಸುಕಲ್ಲಿನ ಚಪ್ಪಡಿಯ ಮೇಲೆ ಮಲಗಿಕೊಂಡು ಬಳಿಕ ಆತನ ಹಾಗೆಯೇ ಸಮಾಧಿಯಿಂದ ಎದ್ದುಬರುವದು ರೋಮಾಂಚಕರವಾಗಿರಬಲ್ಲದು. ನಮ್ಮಲ್ಲಿ ಬಹತೇಕರಿಗೆ ಅಂತಹ ಒಂದು ಭೇಟಿಯು ಅಸಂಭವವಾಗಿರುವದು-ಆದರೆ ನಿಮಗಾಗಿ ಅದಕ್ಕಿಂತಲೂ ಎಷ್ಟೋ ಹೆಚ್ಚು ಉತ್ತೇಜನಕರವಾದ ಸಾಧ್ಯತೆಯನ್ನು ಒದಗಿಸಿರುತ್ತಾನೆ. ನೀವು ಆತನ ಮರಣದಲ್ಲಿ ಪಾಲುಗಾರರಾಗಲು ದೀಕ್ಷಾಸ್ನಾನ ಮಾಡಿಸಿಕೊಳ್ಳಬಹುದು. ಆತನು ಸಮಾಧಿಯಲ್ಲಿ ಇಡಲ್ಪಟ್ಟ ರೀತಿಯಲ್ಲಿಯೇ ನೀವು ನೀರಿನೊಳಗೆ ಇಳಿಸಲ್ಪಡಬಹುದು. ಆತನು ತನ್ನ ಪುನರುತ್ಥಾನಗೊಂಡ ದೇಹದಲ್ಲಿ ಸಮಾಧಿಯಿಂದ ಎದ್ದುಬಂದ ಹಾಗೆಯೇ ನೀವು ಹೊಸಬರಾಗಿ ನಡಕೊಳ್ಳುವದಕ್ಕೆ ಎಬ್ಬಿಸಲ್ಪಡಬಹುದು!

ನಾವು ಮುಕ್ತಾಯಗೊಳಿಸುತ್ತಿರುವ ಹಾಗೆ, ನಾನು ಇದನ್ನು ಕೇಳಲೇಬೇಕು, "ನೀವು ಆ 'ಕಲಿಸಲ್ಪಟ್ಟ ಬೋಧನೆಗೆ' ಮನಃಪೂರ್ವಕವಾಗಿ ವಿಧೇಯರಾಗಿದ್ದೀರೋ?" ನೀವು ವಿಧೇಯರಾಗಿಲ್ಲವಾದರೆ, ಈ ದಿನ ವಿಧೇಯರಾಗಬೇಕೆಂದು ನಿಮ್ಮನ್ನು ನಾನು ಬೇಡಿಕೊಳ್ಳುತ್ತೇನೆ.

## ದೀಕ್ಷಾಸ್ನಾನ: ಒಂದು ದೈವಿಕ ಕಟ್ಟಪ್ಪಣೆ (6:3, 4)

ಕ್ರೈಸ್ತರಿಂದ ಆಚರಿಸಲ್ಪಡುವ ದೀಕ್ಷಾಸ್ನಾನವು ನಿಗೂಢ ಧರ್ಮಗಳಿಂದ ಮತ್ತು/ಅಥವಾ ಯೆಹೂದ್ಯರ ಸ್ನಾನದ ಆಚರಣೆಗಳಿಂದ "ಎರವಲು" ಪಡೆದದ್ದು ಎಂದು ಹೇಳುವವರಾಗಿ ಕೆಲವು ಲೇಖಕರು ದೀಕ್ಷಾಸ್ನಾನದ ಕುರಿತ ಪೌಲನ ಉಪದೇಶವನ್ನು ಕಳಂಕಗೊಳಿಸುತ್ತಾರೆ. ಹೊಸ ಒಡಂಬಡಿಕೆಯ ದೀಕ್ಷಾಸ್ನಾನ ಮತ್ತು ಯೆಹೂದ್ಯರ ಅಥವಾ ಅನ್ಯಧರ್ಮಿಯರ ಆಚಾರಗಳ ನಡುವೆ ಅನೇಕ ವ್ಯತ್ಯಾಸಗಳಿರುತ್ತವೆ-ಆದರೆ, ವಿಶ್ವಾಸಿಗಾದರೋ, ಇವುಗಳ ಪಟ್ಟಿಯನ್ನು ಮಾಡುವದು ಅನಾವಶ್ಯಕವಾಗಿರುತ್ತದೆ. ರೋಮಾಪುರ ೬ನೇ ಅಧ್ಯಾಯವನ್ನು ಬರೆಯುವಂತೆ ಪವಿತ್ರಾತ್ಮನು ಪೌಲನನ್ನು ಪ್ರೇರಿಸಿದನೆಂದು ತಿಳಿದರೆ ಸಾಕಾಗಿರುತ್ತದೆ. ನಾವು ಬೈಬಲಿನಲ್ಲಿ ಓದುವಂಥ ದೀಕ್ಷಾಸ್ನಾನವು ದೇವರಿಂದ ಬಂದದ್ದಾಗಿದೆ ಹೊರತು ಮನುಷ್ಯನಿಂದಲ್ಲ.

## ಮರು-ದೀಕ್ಷಾಸ್ನಾನವು ಅಗತ್ಯವೋ? (6:3, 4)

ರೋಮಾ ೬ರಲ್ಲಿ ಪೌಲನು ಕಲಿಸುವ ದೀಕ್ಷಾಸ್ನಾನದ ಉಪದೇಶವನ್ನು ಚರ್ಚಿಸುವಾಗ, ಅನೇಕ ಸಾರಿ "ಮರು-ದೀಕ್ಷಾಸ್ನಾನ" ದ ಪ್ರಶ್ನೆಯು ಕೇಳಲ್ಪಡುತ್ತದೆ: "ನನಗೆ ದೀಕ್ಷಾಸ್ನಾನ ಎಂದರೇನೆಂದು ಪೂರ್ಣವಾಗಿ ಅರ್ಥವೇ ಆಗಿರಲಿಲ್ಲವಾದಲ್ಲಿ, ನಾನು ಈಗ ಮರು-ದೀಕ್ಷಾಸ್ನಾನ ಮಾಡಿಸಿಕೊಳ್ಳುವ ಅಗತ್ಯವಿದೆಯೋ? ಅನಧಿಕೃತವಾದ ದೀಕ್ಷಾಸ್ನಾನ ಮಾಡಿಸಿಕೊಂಡವರು ಮರು-ದೀಕ್ಷಾಸ್ನಾನ ಮಾಡಿಸಿಕೊಳ್ಳುವ ಅಗತ್ಯವಿದೆಯೋ?" ನಾನು "ಮರು-ಮುಳುಗಿಸಲ್ಪಡುವಿಕೆ" ಎಂಬ ಪದಗುಚ್ಛವನ್ನು ಇಷ್ಟಪಡುತ್ತೇನೆ. ಅಪೊಸ್ತಲರ

ಕೃತ್ಯಗಳು 19:1-5ರಲ್ಲಿ, ಕೆಲವರು ದೀಕ್ಷಾಸ್ನಾನದ ಕುರಿತು ತಪ್ಪಾಗಿ ಅರ್ಥಮಾಡಿಕೊಂಡಿದ್ದಾರೆ ಎಂಬುದನ್ನು ತಿಳಿದಾಗ, ಪೌಲನು ಅವರನ್ನು ನೀರಿನಲ್ಲಿ ಮರು-ಮುಳುಗಿಸುವಿಕೆ ಮೂಲಕ ದೀಕ್ಷಾಸ್ನಾನ ಮಾಡಿಸಿದನೆಂಬುದನ್ನು ಕುರಿತು ಓದುತ್ತೇವೆ.

ಅನೇಕ ವೇಳೆ ನಾನು ಅನಧಿಕೃತವಾದ ದೀಕ್ಷಾಸ್ನಾನಕ್ಕೆ ತನ್ನನ್ನು ಒಪ್ಪಿಸಿಕೊಂಡವನಿಗೆ ಉಪದೇಶ ಮಾಡುವಾಗ, ಆತನು ನನಗೆ, "ನಾನು ಮರು-ದೀಕ್ಷಾಸ್ನಾನ ಮಾಡಿಸಿಕೊಳ್ಳಬೇಕೋ?" ಎಂದು ಕೇಳುತ್ತಾನೆ. ನಾನು ಸಾಮಾನ್ಯವಾಗಿ ಹೀಗೆ ಉತ್ತರಿಸುವೆನು, "ನಿನಗೆ ಅಗತ್ಯವಾಗಿರುವದು ಹೊಸ ಒಡಂಬಡಿಕೆಯಲ್ಲಿ ಕಂಡು ಬರುವಂತಹ ಮಾದರಿಯ ಪ್ರಕಾರವಾಗಿ ದೀಕ್ಷಾಸ್ನಾನ ಮಾಡಿಸಿಕೊಳ್ಳುವದೇ." ಬಳಿಕ ಆತನ ದೀಕ್ಷಾಸ್ನಾನವನ್ನು ಪೌಲನು ಮತ್ತು ಇತರ ಪ್ರೇರಿತ ವ್ಯಕ್ತಿಗಳಿಂದ ಅನುಸರಿಸಲ್ಪಟ್ಟ ದೀಕ್ಷಾಸ್ನಾನದೊಂದಿಗೆ ಹೋಲಿಸುತ್ತೇವೆ. ಉದಾಹರಣೆಗೆ, ಆತನು ತೆಗೆದುಕೊಳ್ಳುವ ದೀಕ್ಷಾಸ್ನಾನವು 3 ಹಾಗೂ 4 ವಚನಗಳಲ್ಲಿನ "ಕಲಿಸಲ್ಪಟ್ಟ ಬೋಧನೆಗೆ" (6:17) ಅನುಗುಣವಾಗಿದೆಯೋ ಅಥವಾ ಇಲ್ಲವೋ ಎಂಬದನ್ನು ನಾವು ನೋಡಬಹುದು. ಒಬ್ಬನು ಶಿಶುವಾಗಿರುವಾಗ ದೀಕ್ಷಾಸ್ನಾನ ಹೊಂದಿದ್ದರೆ, ನೀರು ಚಿಮುಕಿಸಿ ದೀಕ್ಷಾಸ್ನಾನ ಅಥವಾ ಕೇವಲ ತಾನು ಈಗಾಗಲೇ ಸ್ವೀಕರಿಸಿದ ರಕ್ಷಣೆಯನ್ನು ತೋರ್ಪಡಿಸುವದಕ್ಕಾಗಿ ಮಾತ್ರವೇ ದೀಕ್ಷಾಸ್ನಾನ ಹೊಂದಿದ್ದರೆ, ಆತನು ದೀಕ್ಷಾಸ್ನಾನ ಮಾಡಿಸಿಕೊಳ್ಳಬೇಕೋ ಎಂಬುದನ್ನು ನಿರ್ಧರಿಸುವದು ಕಷ್ಟಕರವಲ್ಲ.

ಪಾಪಗಳ ಕ್ಷಮಾಪಣೆಗಾಗಿ ನಂಬಿಕೆಯ ವ್ಯಕ್ತಗೊಳಿಸುವಿಕೆಯಾಗಿ ಮುಳುಗಿ ದೀಕ್ಷಾಸ್ನಾನ ಮಾಡಿಸಿಕೊಂಡಿದ್ದವರಿಂದ ಕಠಿಣ ಪ್ರಶ್ನೆಯು ಕೇಳಲ್ಪಡುತ್ತದೆ (ಅಪೊಸ್ತಲರ ಕೃತ್ಯಗಳು 2:38). ಅವರು ರೋಮಾ 6ನೇ ಅಧ್ಯಾಯವನ್ನು ಅಧ್ಯಯನ ಮಾಡುವಾಗ ತೀರ್ಮಾನಿಸಿಕೊಳ್ಳುವದೇನೆಂದರೆ, "ದೀಕ್ಷಾಸ್ನಾನ ಎಂದರೆ ನನಗೆ ಗ್ರಹಿಕೆಯಾದ ದ್ದಕ್ಕಿಂತಲೂ ಅಧಿಕವಾದ ಅರ್ಥವಿರುತ್ತದೆ! ವಾಕ್ಯದ ಅನುಸಾರವಾಗಿ ದೀಕ್ಷಾಸ್ನಾನ ಮಾಡಿಸಿಕೊಳ್ಳುವದಕ್ಕೆ ಸಾಕಾಗುವಷ್ಟು ತಿಳುವಳಿಕೆ ನನಗೆ ಆಗ ಇತ್ತೋ ಎಂಬದು ಖಚಿತವಾಗಿ ಗೊತ್ತಿಲ್ಲ." ಒಬ್ಬನಿಗೆ ತನ್ನ ದೀಕ್ಷಾಸ್ನಾನದ ನ್ಯಾಯಸಮ್ಮತೆಯ ಬಗ್ಗೆ ಗಂಭೀರವಾಗಿ ಕಳವಳಗೊಂಡಿದ್ದರೆ, ನಾನು ಸಾಮಾನ್ಯವಾಗಿ ಆತನು ಮರು-ಮುಳುಗಿಸಲ್ಪಟ್ಟು ದೀಕ್ಷಾಸ್ನಾನ ಮಾಡಿಸಿಕೊಳ್ಳದಂತೆ ತಡೆಯಲು ಹೋಗುವದಿಲ್ಲ. ಈ ರೀತಿಯ ಕಳವಳವುಳ್ಳ ಹಲವಾರು ಜನರನ್ನು ನಾನು ಮುಳುಗಿಸಿ ದೀಕ್ಷಾಸ್ನಾನಮಾಡಿಸಿದ್ದೇನೆ. ನಾನು ಅದನ್ನು ಮಾಡುವದಕ್ಕೆ ಮುಂಚೆ, ಈ ರೀತಿಯ ಒಂದು ಪ್ರಾರ್ಥನೆಯನ್ನು ಮಾಡುತ್ತೇನೆ:

> ಕರ್ತನೇ, ನಿನಗೆ ಈ (ವ್ಯಕ್ತಿಯ ಹೆಸರು) ಹೃದಯವನ್ನು ಬಲ್ಲವನಾಗಿದ್ದೀ. ಇತನು ಮುಂಚೆ ತೆಗೆದುಕೊಂಡ ದೀಕ್ಷಾಸ್ನಾನವು ಊರ್ಜಿತವಾದದ್ದೋ ಅಲ್ಲವೋ ಎಂಬದು ನಿನಗೆ ಗೊತ್ತಿದೆ. ಅದು ಊರ್ಜಿತವಾಗಿದ್ದಲ್ಲಿ, ಈ ಮುಳುಗಿ ತೆಗೆದುಕೊಳ್ಳುವ ದೀಕ್ಷಾಸ್ನಾನವನ್ನು ನಿನ್ನೊಂದಿಗಿನ ಸಂಬಂಧದಲ್ಲಿ ಎಲ್ಲವೂ ಸರಿಯಾಗಿರುವಂತೆ ದೃಢಪಡಿಸಿಕೊಳ್ಳುವದಕ್ಕೆ ಈ ವ್ಯಕ್ತಿಯ ಬಯಕೆಯಾಗಿ ಅಂಗೀಕರಿಸಿಕೋ. ಆದರೆ ಆತನು ಮುಂಚೆ ತೆಗದುಕೊಂಡ ದೀಕ್ಷಾಸ್ನಾನದಲ್ಲಿ ಏನಾದರೂ ಕೊರತೆಯಿದ್ದಲ್ಲಿ, ಇದನ್ನು ನಿನ್ನ ಚಿತ್ತಕ್ಕೆ ಆತನ

ಒಪ್ಪಿಸಿಕೊಡುವಿಕೆ ಯಾಗಿ ಅಂಗೀಕರಿಸು, ಹೀಗೆ ಈ ವ್ಯಕ್ತಿಯು ನಿನ್ನ ನಂಬಿಗಸ್ತ ಮಗುವಾಗಿರಲಿ.

ಅದೇ ವೇಳೆಯಲ್ಲಿ, ಸಭೆಯ ಸದಸ್ಯರಾಗಿರುವವರು ರೋಮಾ 6:3-6 ವಚನಗಳ ಅಧ್ಯಯನದಿಂದ ದೀಕ್ಷಾಸ್ನಾನದ ಕುರಿತು ಅವರು ಹೆಚ್ಚು ತಿಳುವಳಿಕೆಯನ್ನು ಪಡೆಯುವಾಗ, ಅವರನ್ನು ಮರು-ಮುಳುಗಿಸಲ್ಪಡುವಿಕೆಗೆ ನಾನು ಎಂದಿಗೂ *ಪ್ರೋತ್ಸಾಹಿಸುವದಿಲ್ಲ*. ಮೊಟ್ಟಮೊದಲನೆಯದಾಗಿ, ಮಹಾಆಜ್ಞೆಯ ಪ್ರಕಾರ, ನಾವು ಮುಳುಗಿ ದೀಕ್ಷಾಸ್ನಾನ ಮಾಡಿಸಿಕೊಂಡ *ಬಳಿಕ*, ಜ್ಞಾನ ಮತ್ತು ತಿಳುವಳಿಕೆಯಲ್ಲಿ ಬೆಳೆಯಬೇಕೆಂದು ದೇವರು ಬಯಸುತ್ತಾನೆ (ಮತ್ತಾಯ 28:18-20). ಎರಡನೆಯದಾಗಿ, ರೋಮಾಪುರದವರಿಗೆ ಪತ್ರಿಕೆಯು ಸಭೆ ಸ್ಥಾಪಿಸಲ್ಪಟ್ಟು ಅನೇಕ ದಶಕಗಳಾದ ಮೇಲೆ ಬರೆಯಲ್ಪಟ್ಟಿತು. ಈ ವಾಕ್ಯಭಾಗವನ್ನು ಓದುವ ಅಥವಾ ಅಧ್ಯಯನ ಮಾಡುವ ಅವಕಾಶವಿಲ್ಲದೆ ಹತ್ತಾರು ಸಾವಿರ-ಬಹುಶಃ ನೂರಾರು ಸಾವಿರ- ಜನರು ದೀಕ್ಷಾಸ್ನಾನ ಮಾಡಿಸಿಕೊಂಡಿದ್ದಿರ ಬಹುದಾಗಿದೆ. ರೋಮಾಪುರದವರಿಗೆ ಪತ್ರಿಕೆಯು ಸಭೆಗಳೊಳಗೆ ಸುತ್ತಲ್ಪಡುವದಕ್ಕೆ ಆರಂಭಿಸಿದ ವೇಳೆಯಲ್ಲಿ ಜೀವಂತವಾಗಿದ್ದ ಕ್ರೈಸ್ತರೆಲ್ಲರೂ ಮರು-ಮುಳುಗಿಸಲ್ಪಟ್ಟರೆಂಬು ದರಲ್ಲಿ ನನಗೆ ಸಂಶಯವಿರುತ್ತದೆ.

ನಮ್ಮಲ್ಲಿ ಬಹುಮಂದಿ ವಿವಾಹದಲ್ಲಿರುವ ಸಂಪೂರ್ಣ ಅರ್ಥವನ್ನು ತಿಳಿದುಕೊಳ್ಳ ದೆಯೇ ನಮ್ಮ ವಿವಾಹದ ಪ್ರತಿಜ್ಞೆಗಳನ್ನು ಹೇಳಿರುತ್ತೇವೆ. ನಾವು ಮಾಡಿಕೊಂಡ ಪರಸ್ಪರ ಬದ್ಧತೆಯ ಕುರಿತು ಹೆಚ್ಚು ತಿಳುವಳಿಕೆಯನ್ನು ಪಡೆದ ಹಾಗೆ, ನಾವು ಪುನಃ ವಿವಾಹ ಮಾಡಿಕೊಳ್ಳಬೇಕೆಂದು ಅದರರ್ಥವಾಗಿರುವದಿಲ್ಲ. ಬಹುಶಃ ಅದರ ಅರ್ಥವು ಏನೆಂದರೆ ನಾವು ನಮ್ಮ ವಿವಾಹ ಸಂಬಂಧದಲ್ಲಿ ಹೆಚ್ಚು ಪರಿಪಕ್ವಗೊಳ್ಳುತ್ತಿದ್ದೇವೆ ಎಂಬುದೆ. ರೋಮಾ 6:3-6 ವಚನಗಳು ನಮ್ಮ ತಿಳುವಳಿಕೆಯನ್ನು ಮತ್ತಷ್ಟು ಆಳಕ್ಕೆ ಕೊಂಡೊಯ್ಯುತ್ತವೆ-ಮತ್ತು ದೀಕ್ಷಾಸ್ನಾನ ಮಾಡಿಸಿಕೊಂಡಾಗ ನಡೆದ ಕಾರ್ಯದ ಬಗ್ಗೆ ಮತ್ತಷ್ಟು ಮೆಚ್ಚುಗೆ ಪಟ್ಟುಕೊಳ್ಳುವಂತೆ ಮಾಡುತ್ತವೆ. ಇದು ನೀವು ಮರು-ಮುಳುಗಿ ದೀಕ್ಷಾಸ್ನಾನ ಮಾಡಿಸಿಕೊಳ್ಳಬೇಕೆಂಬ ಅರ್ಥವೇನಲ್ಲ. ನೀವು ಒಬ್ಬ ಕ್ರೈಸ್ತರಾಗಿ ಹೆಚ್ಚು ಪಕ್ವಗೊಳ್ಳುತ್ತಿರುವಿರೆಂದು ಅರ್ಥವಾಗಿದೆಯಷ್ಟೆ.

## ಕ್ರೈಸ್ತರಿಗೆ ತಿಳಿದಿರುವದು ಏನು (6:3, 6, 9, 16)

ಕ್ರಿಸ್ತನಲ್ಲಿ ಹೊಸ ಜೀವನವನ್ನು ಜೀವಿಸಬೇಕಾದರೆ, ನಾವು ಕೆಲವೊಂದು ಪ್ರಾಮುಖ್ಯವಾದ ವಾಸ್ತವಾಂಶಗಳನ್ನು *ತಿಳಿದುಕೊಳ್ಳುವ* ಅಗತ್ಯವಿರುತ್ತದೆ. (“ತಿಳಿ” ಮತ್ತು “ತಿಳಿದಿದ್ದೇವೆ” ಎಂಬ ಮುಖ್ಯ ಪದಗಳು ಈ ಕೆಳಗೆ ಹೇಳಿರುವ ವಚನಗಳಲ್ಲಿ ಕಂಡುಬರುತ್ತವೆ.)

> ನಾವು “[ಕ್ರಿಸ್ತನ] ಮರಣದಲ್ಲಿ ಪಾಲುಗಾರರಾಗುವದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡೆವು” (6:3).
>
> “ನಮ್ಮ ಪೂರ್ವಸ್ವಭಾವವು ಕ್ರಿಸ್ತನ ಕೂಡ ಶಿಲುಬೆಗೆ ಹಾಕಲ್ಪಟ್ಟಿತು” (6:6).

"ನಮ್ಮ ಪಾಪಾಧೀನಸ್ವಭಾವವು ನಾಶವಾಯಿತು" (6:6).

"ನಾವು ಇನ್ನೂ ಪಾಪದ ವಶದಲಿಲ್ಲ" (6: 6; ನೋಡಿರಿ 6:16).

ಕ್ರೈಸ್ತರಾಗಿ ನಮ್ಮ ಹೊಸ ಜೀವನವು ಮರಣದ ಮೇಲೆ ಕ್ರಿಸ್ತನು ಸಾಧಿಸಿದ ಜಯದ ಮೇಲೆ ಆಧಾರವಾಗಿರುತ್ತದೆ. ಯೇಸು "ಸತ್ತ ಮೇಲೆ ಜೀವಿತನಾಗಿ ಎದ್ದು ಬಂದದರಿಂದ ಆತನು ಇನ್ನು ಮೇಲೆ ಸಾಯತಕ್ಕವನಲ್ಲ" ಎಂದು ನಾವು ಬಲ್ಲೆವು (6:9).

## "ಬೇಕಾಗಿದ್ದಾರೆ: ಸತ್ತವರಾಗಿ ಮತ್ತು ಜೀವಂತರಾಗಿ" (6:11)

ಅಮೆರಿಕದ Old Westನಲ್ಲಿ ಅಪಾಯಕಾರಿ ಅಪರಾಧಿಗಳ ಬಂಧನಕ್ಕೋಸ್ಕರ "ಬೇಕಾಗಿದ್ದಾರೆ" ಜಾಹಿರಾತು ಭಿತ್ತಿಪತ್ರಗಳು ಅಲ್ಲಿಲ್ಲಿ ಅಂಟಿಸಲ್ಪಟ್ಟಿದ್ದವು. ಕೆಲವು ಸಾರಿ ಭಿತ್ತಿಪತ್ರಗಳಲ್ಲಿ ಹೀಗಿರುತ್ತಿತ್ತು, "ಬೇಕಾಗಿದ್ದಾರೆ: ಸತ್ತವರಾಗಿ ಅಥವಾ ಜೀವಂತವಾಗಿ." Jim Townsend ತನ್ನ ವ್ಯಾಖ್ಯಾನ ಪುಸ್ತಕದಲ್ಲಿ, "ಬೇಕಾಗಿದ್ದಾರೆ: ಸತ್ತವರಾಗಿ ಮತ್ತು ಜೀವಂತವಾಗಿ" ಎಂಬ ಶೀರ್ಷಿಕೆಯನ್ನು ಉಪಯೋಗಿಸಿದನು.[64] ದೇವರಿಗೆ ಕೇವಲ ನಾವು "ಸತ್ತವರಾಗಿ" ಮಾತ್ರವೇ ಬೇಕಾಗಿಲ್ಲ; ಆತನಿಗೆ ನಾವು "ಜೀವಂತವಾಗಿ" ಸಹ ಬೇಕಾಗಿರುತ್ತೇವೆ. ನಾವು "ಪಾಪದ ಪಾಲಿಗೆ ಸತ್ತವರು" ಮಾತ್ರವೇ ಆಗಿರದೆ "ದೇವರಿಗಾಗಿ ಜೀವಿಸುವವರು" ಸಹ ಆಗಿರತಕ್ಕದ್ದು.

## ಪಾಪವನ್ನು ಪದಚ್ಯುತಿಗೊಳಿಸುವದು (6:12)

ಕೆಲವರು ತಮ್ಮ ಶಾರೀರಿಕ ಅಭಿಲಾಷೆಗಳು ಬಹಳ ಬಲಿಷ್ಠವಾಗಿದ್ದು ಅವುಗಳನ್ನು ವಿರೋಧಿಸುವದು ಕಷ್ಟಕರವಾಗಿರುತ್ತದೆಂದು ನಂಬುತ್ತಾರೆ, ಆದರೆ ಪೌಲನು ಅದನ್ನು ಅಲ್ಲಗಳೆಯುತ್ತಾನೆ. ನಂಬಿಕೆ ಮತ್ತು ವಿಧೇಯತೆಯ ಮೂಲಕವಾಗಿ ನೀವು ಪಾಪದ ದಾಸತ್ವದೊಳಗಿಂದ ಬಿಡಿಸಲ್ಪಟ್ಟಿರಿ. ಈಗ, ದೇವರ ಸಹಾಯದೊಂದಿಗೆ (ನೋಡಿರಿ 8:13), ನೀವು ಪಾಪಕ್ಕೆ "ಇಲ್ಲ" ಎಂದು ಹೇಳಬಲ್ಲಿರಿ. ನೀವು ಇನ್ನು ಮೇಲೆ "ಸಾಯತಕ್ಕ ನಿಮ್ಮ ದೇಹದ ಮೇಲೆ ಪಾಪವನ್ನು ಆಳಗೊಡಿಸಿ ನೀವು ದೇಹದ ದುರಾಶೆಗಳಿಗೆ ಒಳಪಡುವ" ಅಗತ್ಯವಿಲ್ಲ. ನಮ್ಮಲ್ಲಿ ಪ್ರತಿಯೊಬ್ಬರಿಗೂ ಒಂದಿಲ್ಲಾ ಒಂದು ಬಲಹೀನತೆಯಿರುತ್ತದೆ. ಕೆಲವರಿಗೆ, ಮದ್ಯಪಾನ ಅಥವಾ ಮಾದಕದ್ರವ್ಯದ ಬಲಹೀನತೆ ಯಿರುತ್ತದೆ. ಇನ್ನು ಕೆಲವರಿಗೆ ಅನೈತಿಕ ಲೈಂಗಿಕತೆಯ ಬಲಹೀನತೆಯಿರುತ್ತದೆ. ಅದು ಚಾಡಿಹೇಳುವದರ ಬಲಹೀನತೆಯಾಗಿರಬಹುದಾಗಿದೆ. ನನಗೆ ಅತಿಯಾದ ಭೋಜನದ ಬಲಹೀನತೆ ಯಿರುತ್ತದೆ. ನಿಮ್ಮ ಬಲಹೀನತೆಯು ಏನೇ ಆಗಿದ್ದರೂ, ನೀವು ಆ ಬಲಹೀನತೆಗೆ ಒಳಪಡುವಂಥ *ಅಗತ್ಯತೆಯಿಲ್ಲ* ಎಂಬದನ್ನು ಅರ್ಥಮಾಡಿಕೊಳ್ಳತಕ್ಕದ್ದು; ನೀವು "ಅದರ ದುರಾಶೆಗಳಿಗೆ ಒಳಪಡುವ" *ಅಗತ್ಯವಿಲ್ಲ*. ನಿಮಗೆ ಶೋಧನೆಯಾದಾಗ, "ನೀವು ಅದನ್ನು ಸಹಿಸಿಕೊಳ್ಳುವದಕ್ಕೆ ಶಕ್ತರಾಗುವಂತೆ . . . ತಪ್ಪಿಸಿಕೊಳ್ಳುವ ಮಾರ್ಗವನ್ನು ಸಿದ್ಧಮಾಡುವನು" (1 ಕೊರಿಂಥ 10:13).

## “ಹೊಸ ಆಡಳಿತ ಮಂಡಲಿಯ ಅಡಿಯಲ್ಲಿ!” (6:15-23)

ಅಮೆರಿಕದಲ್ಲಿ, ನಾವು ಕೆಲವು ಸಾರಿ ವ್ಯಾಪಾರದ ಸ್ಥಳವೊಂದರಲ್ಲಿ ಈ ರೀತಿಯ ಬೃಹತ್ ಸೂಚನಾಫಲಕ ಹಾಕಲ್ಪಟ್ಟಿರುವದನ್ನು ಕಾಣುತ್ತೇವೆ: “ಹೊಸ ಆಡಳಿತ ಮಂಡಲಿಯ ಅಡಿಯಲ್ಲಿ.” ಆ ವ್ಯಾಪಾರಕ್ಕೆ ಈಗ ಹೊಸ ಮಾಲೀಕನಿರುತ್ತಾನೆಂಬುದನ್ನು ಈ ಸೂಚನಾಫಲಕವು ನಮಗೆ ತಿಳಿಸುತ್ತದೆ, ಆದರೆ ಅದು ಮತ್ತೊಂದು ಸಂಗತಿಯನ್ನು ಸಹ ತಿಳಿಸುವದಾಗಿದೆ. ಅದು ಸಾಮಾನ್ಯವಾಗಿ ಸಂಭಾವ್ಯ ಗ್ರಾಹಕರಿಗೆ ಈಗ ಅವರು ಸುಧಾರಿತ ಉತ್ಪನ್ನಗಳು ಮತ್ತು ಉತ್ತಮ ಸೇವೆಯು ಸೇರಿದಂತೆ *ಹೆಚ್ಚಿನದನ್ನು* ನಿರೀಕ್ಷಿಸಬಹುದು ಎಂಬುದನ್ನು ತಿಳಿಯಪಡಿಸುವ ಉದ್ದೇಶಕ್ಕಾಗಿ ಹಾಕಲ್ಪಟ್ಟಿರುತ್ತದೆ. ರೋಮಾ 6:15-23ರಲ್ಲಿ, ಪೌಲನು ಈ ರೀತಿಯಲ್ಲಿಯೇ ನಮ್ಮ ಜೀವಿತಗಳಿಗೆ ಈ ಸೂಚನಾಫಲಕವನ್ನು ಹಾಕಿದನು: “ಹೊಸ ಆಡಳಿತ ಮಂಡಲಿಯ ಅಡಿಯಲ್ಲಿ!” ಗತಕಾಲದಲ್ಲಿ ನಮ್ಮ ಜೀವಿತಗಳು ಪಾಪದಿಂದ ಮತ್ತು ಸೈತಾನನಿಂದ ಆಡಳಿತ ಮಾಡಲ್ಪಡುತ್ತಿದ್ದವು, ಆದರೆ ನಾವು “ಕ್ರಯಕ್ಕೆ ಕೊಳ್ಳಲ್ಪಟ್ಟೆವು” (1 ಕೊರಿಂಥ 6:20); ಈಗ ನಾವು *ದೈವಿಕ* “ಆಡಳಿತ ಮಂಡಲಿ” ಯ ಅಡಿಯಲ್ಲಿದ್ದೇವೆ. ಈ ವಾಸ್ತವಾಂಶವು ನಮ್ಮ ಜೀವಿತದ ಮೇಲೆ ಪ್ರಭಾವ ಬೀರತಕ್ಕದ್ದು. ದೇವರು ನಮ್ಮಿಂದ ಹೆಚ್ಚಿನದನ್ನು ಎದುರುನೋಡುತ್ತಾನೆ, ಮತ್ತು ಲೋಕವು ನಮ್ಮಿಂದ ಹೆಚ್ಚಾಗಿ ನಿರೀಕ್ಷಿಸಬಲ್ಲದು, ಯಾಕೆಂದರೆ ಈಗ ನಾವು “ನೂತನ ಆಡಳಿತ ಮಂಡಲಿ” ಯ ಅಧೀನದಲ್ಲಿದ್ದೇವೆ.

## ನೀತಿಗೆ ದಾಸರು (6:19)

6:19ರಲ್ಲಿ, ಪೌಲನು ಹೀಗೆ ಬರೆದನು, “ಅಧರ್ಮಮಾಡುವದಕ್ಕಾಗಿ ನಿಮ್ಮ ಅಂಗಗಳನ್ನು ಬಂಡುತನಕ್ಕೂ ಅಧರ್ಮಕ್ಕೂ ಒಪ್ಪಿಸಿಕೊಟ್ಟಿದ್ದಂತೆಯೇ ಈಗ ಪರಿಶುದ್ಧರಾಗುವದಕ್ಕಾಗಿ ನಿಮ್ಮ ಅಂಗಗಳನ್ನು ನೀತಿಗೆ ದಾಸರನ್ನಾಗಿ ಒಪ್ಪಿಸಿಕೊಡಿರಿ.” ನಾನು ಪೌಲನ ಈ ಹುರದುಂಬಿಸುವಿಕೆಯನ್ನು ಓದುವಾಗ, ನಾನು “ಕೆಲವು ಜನರು ಏಕಮನಸ್ಸಿನಿಂದ ಪ್ರಸಿದ್ಧಿ, ಹಣ, ಅಥವಾ ಅಧಿಕಾರದ ಬೆನ್ನತ್ತಿಹೋಗುವದರ” ಕುರಿತು ಆಲೋಚಿಸುತ್ತೇನೆ.[65] ನಂತರ ನಾನು ಅದನ್ನು ಜನರು ಕ್ರೈಸ್ತತ್ವದ ವಿಷಯಕ್ಕೆ ಬಂದಾಗ ಹೇಗೆ ಅರೆ-ಹೃದಯದಿಂದ ನಡೆದುಕೊಳ್ಳುತ್ತಾರೆಂಬುದರ ವಿರುದ್ಧ ಹೋಲಿಸಿ ನೋಡುತ್ತೇನೆ. ಸ್ಪಷ್ಟವಾಗಿ ತೋರುವದೇನೆಂದರೆ, ಕೆಲವರು “ತಮಗೆ ಪಾಪದ ಕಡೆಗೆ ಅಲ್ಲಾಡಿಸಲಾಗದ, ಮುರಿಯಲಾಗದ ಬಾಧ್ಯತೆ ಹೊಂದಿದ್ದೇವೆಂದೂ ನೀತಿಯ ಕಡೆಗೆ ಐಚ್ಛಿಕವಾದ, ಸಂಭಾವ್ಯವಾದ ಬಾಧ್ಯತೆ ಹೊಂದಿದ್ದೇವೆಂದೂ ಆಲೋಚಿಸುತ್ತಾರೆ” -ಆದರೆ “ಅದಕ್ಕೆ ತದ್ವಿರುದ್ಧವಾದದ್ದೇ ಸತ್ಯವಾದದ್ದು!”[66] ಒಬ್ಬ ಮನುಷ್ಯನು ಪೌಲನ ಸಂದೇಶದ ತಿರುಳನ್ನು ಗ್ರಹಿಸಿಕೊಂಡನು. ಆತನು ಕರ್ತನಿಗೆ ತನ್ನ ಜೀವಿತವನ್ನು ಸಮರ್ಪಿಸಿಕೊಂಡ ಮೇಲೆ ಹೀಗೆ ಹೇಳಿದನು, “ನಾನು ಎಷ್ಟು ಘೋರವಾದ ಪಾಪಿಯಾಗಿದ್ದೇನೋ ಹಾಗೆಯೇ ಈಗ ಅಷ್ಟೇ ಉತ್ತಮನಾದ ಒಬ್ಬ ಪರಿಶುದ್ಧನಾಗಿರುವದಕ್ಕೆ ಬಯಸುತ್ತೇನೆ!”[67]

## ಮರಣ vs. ಜೀವ (6:23)

6:23ನೇ ವಚನದ ಎರಡು ಫಲಿತಗಳ ಬಗ್ಗೆ ಆಲೋಚಿಸಿಕೊಳ್ಳೋಣ: "ಮರಣ" vs. "ನಿತ್ಯಜೀವ." ಒಂದು ದಿನ ನೀವು ಇವುಗಳಲ್ಲಿ ಯಾವದನ್ನು ಪಡೆಯುವಿರಿ? ನೀವು ಯಾವದನ್ನು ಪಡೆದುಕೊಳ್ಳಲು ಇಚ್ಛಿಸುವಿರಿ? ಹೀಗೊಂದು ಮಾತಿದೆ, ಏನೆಂದರೆ ನೀವು ಯಾರ ಸೇವೆ ಮಾಡುವಿರೆಂಬುದನ್ನು ಆಯ್ಕೆಮಾಡಿಕೊಳ್ಳಲು ಸ್ವತಂತ್ರರು, ಆದರೆ, ಒಮ್ಮೆ ನೀವು ಆಯ್ಕೆಮಾಡಿಕೊಂಡ ಬಳಿಕ, ನಿಮ್ಮ ಆಯ್ಕೆಯಿಂದಾಗುವ ಪರಿಣಾಮವನ್ನು ಆರಿಸಿಕೊಳ್ಳುವ ಸ್ವಾತಂತ್ರ್ಯ ನಿಮಗಿರುವದಿಲ್ಲ.

ಕೆಲವರು ಪಾಪಕ್ಕೆ ದಾಸರಾಗಿದ್ದಾರೆ ಆದರೆ ಅದನ್ನು ಅರಿಯದವರಾಗಿದ್ದಾರೆ; ಇನ್ನು ಕೆಲವರು ದೇವರಿಗೆ ದಾಸರಾಗಿದ್ದಾರೆ ಆದರೆ ಅದರಂತೆ ನಡೆದುಕೊಳ್ಳದವರಾಗಿದ್ದಾರೆ. ಪಾಪಕ್ಕೆ ದಾಸರಾಗಿದ್ದು ಅದನ್ನು ತಿಳಿಯದಿರುವವರು ಯಾರೆಂದರೆ ಲೋಕದಲ್ಲಿದ್ದು ತಮ್ಮ ಜೀವಿತಗಳನ್ನು ಕರ್ತನಿಗೆ ಸಮರ್ಪಿಸಿಕೊಳ್ಳದೆಯೇ ಇರುವವರು. ನಮ್ಮ ಈ ವಾಕ್ಯಭಾಗದಲ್ಲಿ ಪೌಲನ ಪ್ರಾಥಮಿಕ ಚಿಂತೆಯು ಪಾಪದ ಪಾಲಿಗೆ ಸತ್ತವರಾಗಿದ್ದರೂ ಅದರಂತೆ ನಡೆದುಕೊಳ್ಳದವರ ಕುರಿತಾಗಿತ್ತು. ನೀನು ಒಬ್ಬ ಕ್ರೈಸ್ತನಾಗಿದ್ದಲ್ಲಿ, ದೇವರಿಗೆ ದಾಸರಾಗಿದ್ದೀರೆಂಬುದನ್ನು ಎಂದಿಗೂ ಮರೆಯದಿರಿ. ಆತನಿಗೆ ಮೆಚ್ಚಿಕೆಯಾಗುವಂಥ ನೀತಿಯ ಜೀವಿತವನ್ನು ಜೀವಿಸುವದಕ್ಕಾಗಿ ಆತನು ನಿಮ್ಮನ್ನು ಕರೆದಿರುತ್ತಾನೆ.

## ಕೃಪೆಯಿಂದ ರಕ್ಷಣೆ (6:23)

ಕೃಪೆಯಿಂದಲೇ ರಕ್ಷಣೆ ಎಂಬ ವಿಷಯಕ್ಕಿಂತಲೂ ದೊಡ್ಡದಾದ ವಿಷಯ ಮತ್ತೊಂದಿರುವದಿಲ್ಲ. ಅದು ರೋಮಾ 6:23 ಮತ್ತು ಎಫೆಸ 2:8-10 ರಂತಹ ವಾಕ್ಯಭಾಗಗಳಲ್ಲಿ ಸಾರಲ್ಪಟ್ಟಿದೆ. ಅದು "Rock of Ages" ಎಂಬಂತಹ ಸಂಕೀರ್ತನೆಗಳಲ್ಲಿ ಪ್ರಚುರಪಡಿಸಲ್ಪಟ್ಟಿದೆ. ಹೇಗಿದ್ದರೂ, ಈ ವಿಷಯದ ಸುತ್ತ ಸಾಕಷ್ಟು ಗೊಂದಲವು ಇರುತ್ತದೆ.

ಕೃಪೆಯಿಂದ ರಕ್ಷಣೆಯೆಂಬುದು ಏನನ್ನು ಸೂಚಿಸುವದಿಲ್ಲ ಎಂಬದರ ಬಗ್ಗೆ ಚರ್ಚಿಸಲು ನಾವು ಬಹಳಷ್ಟು ಸಮಯವನ್ನು ಕಳೆಯಬಹುದಾಗಿದೆ. ಉದಾಹರಣೆಗೆ, ಮನುಷ್ಯನು ತನ್ನ ರಕ್ಷಣೆ ಹೊಂದುವದಕ್ಕೆ ಏನನ್ನೂ ಮಾಡಬೇಕಾದ ಅಗತ್ಯವಿಲ್ಲವೆಂಬ ಅರ್ಥವನ್ನು ಅದು ಸೂಚಿಸುವದಿಲ್ಲ. "ನಾವೇನು ಮಾಡಬೇಕು" ಎಂದು ಪಾಪಿಗಳು ಕೂಗಿಕೊಂಡಾಗ (ಅಪೊಸ್ತಲರ ಕೃತ್ಯಗಳು 2:37), ಪೇತ್ರನು ಅವರಿಗೆ "ನೀವು ಏನೂ ಮಾಡಬೇಕಾದ ಅಗತ್ಯವಿಲ್ಲ; ನೀವು ಕೃಪೆಯಿಂದ ರಕ್ಷಿಸಲ್ಪಟ್ಟಿರುವಿರಿ" ಎಂದು ಹೇಳಲಿಲ್ಲ. ಬದಲಾಗಿ, ಆತನು ಹೇಳಿದ್ದೇನೆಂದರೆ, "ನಿಮ್ಮ ಪಾಪಗಳು ಪರಿಹಾರವಾಗುವದಕ್ಕಾಗಿ ನಿಮ್ಮಲ್ಲಿ ಪ್ರತಿಯೊಬ್ಬರು ದೇವರ ಕಡೆಗೆ ತಿರುಗಿಕೊಂಡು ಯೇಸು ಕ್ರಿಸ್ತನ ಹೆಸರಿನ ಮೇಲೆ ದೀಕ್ಷಾಸ್ನಾನ ಮಾಡಿಸಿಕೊಳ್ಳಿರಿ" (ಅಪೊಸ್ತಲರ ಕೃತ್ಯಗಳು 2:38). ರಕ್ಷಣೆಯು ಒಂದು ವರದಾನವಾಗಿದೆ, ಆದರೆ ವರದಾನವನ್ನು ಅಂಗೀಕರಿಸಿಕೊಂಡು ಸ್ವಂತಮಾಡಿಕೊಳ್ಳುವ ಅಗತ್ಯವಿರುತ್ತದೆ. ನಾವು ಈ ಕಾರ್ಯವನ್ನು ನಂಬಿಕೆಯ ಮೂಲಕ (ಎಫೆಸ 2:8)-ಒಂದು ಸಜೀವವಾದ, ಸಕ್ರಿಯವಾದ, ವಿಧೇಯತೆಯುಳ್ಳ ನಂಬಿಕೆ-ಮಾಡುತ್ತೇವೆಂದು ಬೈಬಲ್ ಹೇಳುತ್ತದೆ

(ಮತ್ತಾಯ 7:21; ಗಲಾತ್ಯ 5:6; ಯಾಕೋಬ 2:26). ಹೇಗೂ, ಕೃಪೆಯಿಂದ ರಕ್ಷಣೆ ಎಂಬದರ ಪ್ರಾಥಮಿಕ ಅರ್ಥವೇನೆಂಬುದನ್ನು ಚರ್ಚಿಸುವದೇ ನಮ್ಮ ಪ್ರಾಥಮಿಕ ಉದ್ದೇಶವಾಗಿರುತ್ತದೆ.

"ಕೃಪೆ" ಎಂಬ ಪದದ ಅರ್ಥವು "ಅರ್ಹವಲ್ಲದ ದಯ," ಅದು ನಮ್ಮಿಂದ ಸಂಪಾದಿಸಿಕೊಳ್ಳಲಾಗದ ಸಂಗತಿಯಾಗಿದೆ. ಒಬ್ಬ ಲೇಖಕನು ಇದನ್ನು ಹೀಗೆ ಬಣ್ಣಿಸಿದನು, "ನಿಮಗೆ ಅಗತ್ಯವಾಗಿರುವ ಆದರೆ ಅದನ್ನು ಹೊಂದಲು ಅರ್ಹರಲ್ಲದಿರುವಂಥ ಸಂಗತಿ." ಅದನ್ನು ದೃಷ್ಟಾಂತಪಡಿಸಲು ಆತನು ಕಿರಿಯ ಬಾಲಕರ ಶಿಕ್ಷಕನಾಗಿದ್ದವನೊಬ್ಬನ ಕಥೆಯನ್ನು ಹೇಳುತ್ತಾನೆ, ಆತನು ತನ್ನ ವಿದ್ಯಾರ್ಥಿಗಳಿಗೆ ಈ ಪದದ ಅರ್ಥವನ್ನು ಗ್ರಹಿಸಿಕೊಳ್ಳುವಂತೆ ಮಾಡಲು ವಿಫಲನಾಗಿದ್ದಕ್ಕೆ ಬಹಳ ಬೇಸರಗೊಂಡಿದ್ದನು. ಕೆಲವು ದಿನಗಳ ಬಳಿಕ, ಆ ವಿದ್ಯಾರ್ಥಿಗಳಲ್ಲೊಬ್ಬನು ಎಸೆದ ಹಿಮದ ಚೆಂಡು ಈ ಶಿಕ್ಷಕನ ಮೇಲೆ ಬಂದು ಬಿದ್ದಿತ್ತು. ಮೊದಮೊದಲು ಆತನು ಕೋಪಗೊಂಡಿದ್ದನು, ಆದರೆ ಬಳಿಕ ಈ ಅವಕಾಶವನ್ನು ಉಪಯೋಗಿಸಿ ಒಂದು ಪಾಠವನ್ನು ಕಲಿಸಲು ನಿರ್ಧರಿಸಿದನು. ಆ ಬಾಲಕನಿಗೆ ಮೀನು ಹಿಡಿಯುವ ಗಾಳವು ಅಗತ್ಯವಿದೆಯೆಂದು ಇವನಿಗೆ ಗೊತ್ತಿತ್ತು, ಆದ್ದರಿಂದ ಆತನು ಒಂದು ಹೊಸ ಮೀನಿನ ಗಾಳವನ್ನು ಖರೀದಿಸಿ ಆ ಬಾಲಕನ ಮನೆಗೆ ಹೋಗಿ ಆತನಿಗೆ ಕೊಟ್ಟನು. ಸ್ವಲ್ಪ ಹೊತ್ತಿನಲ್ಲಿಯೇ, ಆ ಬಾಲಕನು ನಾಚಿಕೆಯ ಮುಖವುಳ್ಳವನಾಗಿ ಶಿಕ್ಷಕನ ಮನೆಗೆ ಬಂದಿದ್ದನು. "ನಾನು ಇದನ್ನು ಸ್ವೀಕರಿಸಿಕೊಳ್ಳಲು ಸಾಧ್ಯವಿಲ್ಲ. ಅದೇನೆಂದರೆ, ಆ ಹಿಮದ ಚೆಂಡಿನಿಂದ ನಿಮ್ಮನ್ನು ಹೊಡೆದದ್ದು ನಾನೇ" ಎಂದು ಹೇಳಿದನು. ಆಗ ಶಿಕ್ಷಕನು ಉತ್ತರಿಸಿ, "ಹೌದು, ನನಗೆ ಗೊತ್ತಿದೆ, ಆದರೆ ಈ ಉಡುಗೋರೆಯನ್ನು ಕೃಪೆಯಿಂದ ಕೊಡಲಾಗಿದೆ-ಅದು ನಿನಗೆ ಅಗತ್ಯವಿರುವಂಥ ಆದರೆ ಅದಕ್ಕೆ ನೀನು *ಅರ್ಹನಾಗಿರದ* ಸಂಗತಿಯಾಗಿದೆ."[68]

ಕೃಪೆಯು ಅರ್ಹತೆಯಿಲ್ಲದೆ ಪಡೆಯುವ ದಯೆಯಾಗಿದೆ, ನಾವು ಸಂಪಾದಿಸಿಕೊಳ್ಳಲಾಗದ ಸಂಗತಿ ಅದಾಗಿದೆ-ನಮಗೆ ಅಗತ್ಯವಿರುವಂಥ ಆದರೆ ಅದಕ್ಕೆ ನಾವು ಅನರ್ಹರಾಗಿರುವಂಥ ಒಂದು ಸಂಗತಿ. ಈ ಕೆಳಗಿನ ಸತ್ಯಗಳನ್ನು ಅವಲೋಕಿಸುತ್ತಿರುವ ವೇಳೆ ಈ ಸಂಗತಿಯನ್ನು ಮನಸ್ಸಿನಲ್ಲಿಟ್ಟುಕೊಳ್ಳೋಣ.

*ಮನುಷ್ಯನು ತನ್ನನ್ನು ತಾನೇ ರಕ್ಷಿಸಿಕೊಳ್ಳಲಾರನು.* ಮೊದಲನೆಯದಾಗಿ, ಕೃಪೆಯಿಂದ ರಕ್ಷಣೆ ಎಂಬದರ ಅರ್ಥವು ಮನುಷ್ಯನು ಪಾಪದಲ್ಲಿ ಕಳೆದುಹೋಗಿದ್ದಾನೆ ಮತ್ತು ತನ್ನನ್ನು ರಕ್ಷಿಸಿಕೊಳ್ಳುವದಕ್ಕೆ ಸ್ವತಃ ಹಾಗೂ ತನ್ನಲ್ಲಿಯೇ ಅಸಮರ್ಥನಾಗಿದ್ದಾನೆ. ಇದು ಮಾನವನ ಸಮಸ್ಯೆಗಳ ಬೇರಿಗೆ ಹೊಡೆಯುತ್ತದೆ: ಆತನ ಗರ್ವ. ನಾವು ಮಾಡುವದಕ್ಕೆ ಶಕ್ತವಾಗಿರುವ ಸಂಗತಿಯ ಬಗ್ಗೆ ಗರ್ವಪಟ್ಟುಕೊಳ್ಳುತ್ತೇವೆ. ನಾವು ಜನರನ್ನು ಚಂದ್ರಗ್ರಹಕ್ಕೆ ಕಳುಹಿಸಬಲ್ಲೆವು. ನಾವು ಲೆಕ್ಕದ ಅತ್ಯಂಥ ಜಟಿಲವಾದ ಸಮಸ್ಯೆಗಳನ್ನು ಕ್ಷಣಾರ್ಧದಲ್ಲಿ ಪರಿಹರಿಸಬಲ್ಲಂಥ ಕಂಪ್ಯೂಟರ್‌ಗಳನ್ನು ನಿರ್ಮಿಸಲಬಲ್ಲೆವು. ನಾವು ತುಸು ವಿಕಿರಣಶೀಲ ಕಿರಣಗಳನ್ನು ಬೃಹತ್ ಪ್ರಮಾಣದ ಶಕ್ತಿಯಾಗಿ (ವಿಧ್ಯುತ್ ಶಕ್ತಿ) ಪರಿವರ್ತಿಸಬಲ್ಲೆವು. ಹೇಗೂ, ಒಂದು ಸಂಗತಿಯನ್ನಂತೂ ನಮಗೆ ಮಾಡುವದಕ್ಕೆ ಸಾಧ್ಯವಿರುವದಿಲ್ಲ. ನಾವು ಸ್ವತಃ ಹಾಗೂ ನಮ್ಮಲ್ಲಿಯೇ ನಮ್ಮನ್ನು ರಕ್ಷಿಸಿಕೊಳ್ಳಲು

ಅಸಮರ್ಥರಾಗಿರುತ್ತೇವೆ.

ರೋಮಾ 3:23 ಹೇಳುವದೇನೆಂದರೆ, "ಎಲ್ಲರೂ ಪಾಪ ಮಾಡಿ ದೇವರ ಮಹಿಮೆಯನ್ನು ಹೊಂದದೆ ಹೋಗಿದ್ದಾರೆ." ರೋಮಾ 6:23 ಅದಕ್ಕೆ ಸೇರಿಸಿ ಹೇಳುವದೇನೆಂದರೆ, "ಪಾಪವು ಕೊಡುವ ಸಂಬಳ ಮರಣ." ನಾವು ಎಷ್ಟೇ ಒಳ್ಳೆಯವರಾಗಿದ್ದರೂ ಸರಿಯೇ, ನಾವು ಆತ್ಮೀಕ ಮರಣಕ್ಕೇ ಯೋಗ್ಯರಾಗಿರುತ್ತೇವೆ.

*ದೇವರು ನಮ್ಮನ್ನು ಪ್ರೀತಿಸುತ್ತಾನೆ.* ಎರಡನೆಯದಾಗಿ, ಕೃಪೆಯಿಂದ ರಕ್ಷಣೆ ಎಂಬದರ ಅರ್ಥವೇನೆಂದರೆ ದೇವರು ಮಾನವನ ಕಳೆದುಹೋಗಿರುವ ಸ್ಥಿತಿಯನ್ನು ಕಂಡನು ಮತ್ತು ಆತನನ್ನು *ಪ್ರೀತಿಸಿದನು* ಎಂಬದೆ. ಯೋಹಾನ 3:16ರ ಆಶ್ಚರ್ಯಕರವಾದ ವಚನವು "ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು" ಎಂಬದಾಗಿ ಆರಂಭಗೊಳ್ಳುತ್ತದೆ.

*ದೇವರು ನಮಗೋಸ್ಕರ ತನ್ನ ಮಗನನ್ನು ಕೊಟ್ಟನು.* ಯೋಹಾನ 3:16 ಹೀಗೆ ಮುಂದುವರೆಯುತ್ತದೆ, "ತನ್ನ ಒಬ್ಬನೇ ಮಗನನ್ನು ಕೊಟ್ಟನು." ಇಬ್ರಿಯ 2:9ರಲ್ಲಿ, "ದೇವದೂತರಿಗಿಂತ ಸ್ವಲ್ಪ ಕಡಿಮೆಯಾಗಿ ಮಾಡಲ್ಪಟ್ಟ ಒಬ್ಬಾತನು, ಅಂದರೆ ಯೇಸುವು...ಮೃತಪಟ್ಟಿದ್ದರಿಂದಲೇ ಮಾನ ಪ್ರಭಾವಗಳನ್ನು ಹೊಂದಿದನು. ಆತನು *ದೇವರ ಕೃಪೆಯಿಂದ* ಎಲ್ಲರಿಗೋಸ್ಕರ ಮರಣವನ್ನು ಅನುಭವಿಸಲೇ ಬೇಕಾಗಿತ್ತು" ಎಂಬದನ್ನು ಓದುತ್ತೇವೆ (ಒತ್ತಿ ಹೇಳಿದ್ದು ನನ್ನದು)

ಕೆಲವು ಕ್ಷಣಗಳ ವರೆಗೆ, ಯೇಸು ಶಿಲುಬೆಯ ಮೇಲೆ ನಮಗಾಗಿ ಮರಣಿಸುತ್ತಿರುವದನ್ನು ಕುರಿತು ಆಲೋಚಿಸಿರಿ. ಇತ್ತೀಚಿನ ವರ್ಷಗಳಲ್ಲಿ, ಮರಣ ದಂಡನೆಯನ್ನು ನಿರ್ಮೂಲಮಾಡುವದಕ್ಕೆ ಮುಂದಾದವರು ನೇಣುಹಾಕುವದರಿಂದ . . . ಬಂದೂಕು ಪಡೆಯಿಂದ ಗುಂಡುಹಾರಿಸಲ್ಪಟ್ಟು . . . ವಿದ್ಯುತ್ ಕುರ್ಚಿಯಿಂದ . . . ಅನಿಲಕೋಣೆಯಲ್ಲಿ ಹಾಕಿ ಮರಣಿಸುವದು ಹೇಗಿರುತ್ತದೆಂಬುದರ ಬಗ್ಗೆ ವಿವರವಾದ ಸಾಕ್ಷಿಗಳನ್ನು ಕೊಟ್ಟಿರುತ್ತಾರೆ. ಹೇಗೂ, ಶಿಲುಬೆಗೇರಿಸಲ್ಪಡುವಿಕೆಯ ಮೂಲಕ ಮರಣ ಹೊಂದುವದಕ್ಕೆ ಹೋಲಿಸಿದರೆ ಮರಣ ದಂಡನೆ ವಿದಿಸುವ ಈ ವಿಧಾನಗಳು ಶೀಘ್ರ ಸಾವು ತರುವಂಥ, ಕರುಣೆ, ಮಾನವೀಯತೆ ತುಂಬಿರುವಂಥ ವಿಧಾನಗಳಾಗಿವೆ.

ಭಯಂಕರವಾದ ನೋವು, ಹೆಚ್ಚುತ್ತಿರುವ ಜ್ವರ, ಉಸಿರಾಟಕ್ಕಾಗಿ ಹೋರಾಟ-ಇದೆಲ್ಲವೂ ಕಲ್ವರಿಯ ಮೇಲೆ ಯೇಸು ಮರಣಿಸುವ ವೇಳೆ ಅನುಭವಿಸಿದ *ಆತ್ಮೀಕ* ವೇದನೆಗೆ ಸಂಬಂಧಿಸಿದ್ದಾಗಿದೆ. ನಮ್ಮ ಮನಸ್ಸುಗಳು ಶಿಲುಬೆಯ ಮೇಲೆ ಯೇಸು ಅನುಭವಿಸಿದ ಬಾಧೆಗಳನ್ನು ಕಲ್ಪಿಸಿಕೊಳ್ಳಲೂ ಸಾಧ್ಯವಿಲ್ಲ. ಆತನು ಏಕೆ ಸತ್ತನು? "ಶಾಸ್ತ್ರದಲ್ಲಿ ಮುಂತಿಳಿಸಿ ಪ್ರಕಾರ ಕ್ರಿಸ್ತನು *ನಮ್ಮ ಪಾಪಗಳ ನಿವಾರಣೆಗಾಗಿ* ಸತ್ತನು" (1 ಕೊರಿಂಥ 15:3; ಒತ್ತಿ ಹೇಳಿದ್ದು ನನ್ನದು).

*ನಾವು ರಕ್ಷಿಸಲ್ಪಡಲು ಸಾಧ್ಯವಿದೆ.* ಆದದರಿಂದ, ಕೃಪೆಯಿಂದ ರಕ್ಷಣೆ ಎಂಬದರ ಅರ್ಥವೇನೆಂದರೆ ಕೊನೆಗೂ ನಾವು *ರಕ್ಷಿಸಲ್ಪಡಬಲ್ಲೆವು* ಎಂದಾಗಿರುತ್ತದೆ-ಯಾಕೆಂದರೆ ನಮಗೆ ನಾವೇ ಒದಗಿಸಿಕೊಳ್ಳಲಿಕ್ಕಾಗದ್ದನ್ನು ದೇವರು ಒದಗಿಸಿರುತ್ತಾನೆ. ಕೃಪೆಯ ಅರ್ಥನಿರೂಪಣೆಯನ್ನು ಜ್ಞಾಪಿಸಿಕೊಳ್ಳಿರಿ. ಮಾನವರಿಗೆ ರಕ್ಷಣೆಯ *ಅಗತ್ಯವಿತ್ತು* ಆದರೆ ಅದಕ್ಕೆ ಯೋಗ್ಯರಾಗಿರಲಿಲ್ಲ. ಮಾನವರು ಅದನ್ನು ಸಂಪಾದಿಸಿಕೊಳ್ಳಲು, ಅದಕ್ಕೆ

ಅರ್ಹರಾಗಲು ಸಾಧ್ಯವಾಗಿರಲಿಲ್ಲ. ರಕ್ಷಣೆಯು "ಪುಣ್ಯಕ್ರಿಯೆಗಳಿಂದ ಉಂಟಾದದ್ದಲ್ಲ; ಆದದರಿಂದ ಹೊಗಳಿಕೊಳ್ಳುವದಕ್ಕೆ ಯಾರಿಗೂ ಆಸ್ಪದವಿಲ್ಲ" (ಎಫೆಸ 2:9). ನಾವು ರಕ್ಷಣೆ ಹೊಂದುವದೇ *ಆಗಿದ್ದರೆ* ಅದು ಕೇವಲ *ಕೃಪೆಯಿಂದಲೇ* ಆಗಿರತಕ್ಕದ್ದಾಗಿದೆ.

Puritansರು ಇಂಗ್ಲೆಂಡಿನಲ್ಲಿ ಒಂದು ಕ್ರಾಂತಿಯನ್ನು ನಡಿಸುತ್ತಿರುವ ವೇಳೆಯಲ್ಲಿ, ಸೇನೆಯನ್ನು ತೊರೆದುಹೋದ ಒಬ್ಬನನ್ನು ಸೇನಾಧಿಪತಿಯಾದ Oliver Cromwellನ ಮುಂದೆ ಕರೆತರಲಾಯಿತು. ಒಂದು ಕ್ಷಣವೂ ಹಿಂದಮುಂದು ನೋಡದೆ, ನಿಷ್ಠುರ ಸೇನಾಧಿಪತಿಯು ಆತನಿಗೆ ಮರಣಶಿಕ್ಷೆಯನ್ನು ವಿಧಿಸಿದನು. ಮರಣಶಿಕ್ಷೆಯನ್ನು ಅದೇ ದಿನದ ಮುಸ್ಸಂಜೆಯಲ್ಲಿ ಪಟ್ಟಣದ ಘಂಟೆಯು ಬಾರಿಸಿದ ತಕ್ಷಣವೇ ನೆರವೇರಿಸುವದಕ್ಕೆ ನಿಗದಿಪಡಿಸಲಾಗಿತ್ತು. ಆ ಮನುಷ್ಯನ ಪ್ರಿಯತಮೆಯು Cromwell ಬಳಿಗೆ ಹೋಗಿ ತೀರ್ಮಾನವನ್ನು ಬದಲಿಸುವಂತೆ ಕೇಳಿಕೊಂಡಳು. ಅದಕ್ಕೆ ಆತನು, "ಇಲ್ಲವೇ ಇಲ್ಲ, ಇಂದು ರಾತ್ರಿ ಘಂಟೆಯು ಬಾರಿಸಿದಾಗ, ಆತನು ಸಾಯುವನು" ಎಂದು ಹೇಳಿಬಿಟ್ಟನು.

ಆ ಯುವತಿಯು ನಂತರ ಪ್ರತಿ ಮುಸ್ಸಂಜೆಯಲ್ಲಿ ಘಂಟೆಯನ್ನು ಬಾರಿಸುತ್ತಿದ್ದ ಸಭೆಯ ಕಾವಲುಗಾರನಾದ ವೃದ್ಧನ ಬಳಿಗೆ ಹೋದಳು. ಆತನು ಕಿವುಡನಾಗಿದ್ದನು ಆದರೆ ಆಕೆಯು ಹೇಗೋ ಆತನಿಗೆ ಆ ದಿನ ಘಂಟೆಯನ್ನು ಬಾರಿಸಬೇಡವೆಂಬ ತನ್ನ ಮನವಿಯನ್ನು ಅರ್ಥಮಾಡಿಸಿದಳು. ಆಕೆಯ ಮನವಿಯನ್ನು ಅವನು ನಿರಾಕರಿಸಿದಾಗ, ಆಕೆಯು ಕತ್ತಲೆಯಿಂದ ತುಂಬಿದ್ದ ಘಂಟೆಯ ಗೋಪುರದೊಳಗೆ ಹತ್ತಿಹೋದಳು. ಆಕೆಯು ತನ್ನ ಬೆಚ್ಚನೆಯ, ಮೃದುವಾದ ಬಾಹುಗಳನ್ನು ಘಂಟೆಯ ಕಬ್ಬಿಣದ ನಾಲಿಗೆಯ ಸುತ್ತ ಹಾಕಿ ಗಟ್ಟಿಯಾಗಿ ಹಿಡಿದುಕೊಂಡಳು. ಸಭೆಯ ಕಾವಲುಗಾರನು ಘಂಟೆಯ ಹಗ್ಗವನ್ನು ಎಳೆದಾಗ, ಆಕೆಯು ಪಟ್ಟಣದ ಮೇಲೆಲ್ಲಾ ಉಯ್ಯಾಲೆಯಂತೆ ತೇಲಾಡಿದಳು. Cromwellನ ಸೇನೆಯವರು ಮರಣಶಿಕ್ಷೆಯನ್ನು ಜರುಗಿಸುವಂತಾಗಲು ಆ ಘಂಟೆಯ ಶಬ್ಧಕ್ಕಾಗಿ ಕಾಯ್ದದ್ದು ವ್ಯರ್ಥವಾಯಿತು.

ಘಂಟೆಯು ಏಕೆ ಬಾರಿಸಲ್ಪಡಲಿಲ್ಲ ಎಂಬದನ್ನು ತಿಳಿಸುವಂತೆ Cromwellನು ಕೇಳಿದನು. ಆ ಯುವತಿಯನ್ನು ಅವನ ಮುಂದೆ ಕರೆತಂದರು, ಆಕೆಯ ಕೈಗಳು ರಕ್ತ ಸುರಿಸಲ್ಪಡುತ್ತಾ, ಊನವಾಗಿ, ಛಿದ್ರವಾಗಿ, ಮುರಿದುಹೋಗಿದ್ದವು. ಆತನು ಆಕೆಗೆ, "ನಿನ್ನ ಪ್ರೀತಿಯು ಈ ಅಯೋಗ್ಯನನ್ನು ರಕ್ಷಿಸಿರುತ್ತದೆ. ಅವನನ್ನು ಕರೆದುಕೊಂಡು ಹೋಗು. ನಿನ್ನ ಪ್ರೀತಿಯು ಅವನನ್ನು ಬಿಡುಗಡೆಗೊಳಿಸಿದೆ" ಎಂದನು.

ಈ ಹೋಲಿಕೆಯು ಪರಿಪೂರ್ಣವಾದದ್ದಲ್ಲ, ಆದರೆ ನಿಮ್ಮನ್ನು ನ್ಯಾಯತೀರ್ಪಿನ ದಿನದಂದು ದೇವರ ಮುಂದೆ ಇರುವಂತೆ ಊಹಿಸಿಕೊಳ್ಳಿರಿ. ನೀವು ನಿಮಗೆ ಸಾಧ್ಯವಾದಷ್ಟು ಉತ್ತಮವಾದದ್ದನ್ನು ಮಾಡಿದ್ದೀರಿ. ನಿಮ್ಮ ಸಾಮರ್ಥ್ಯಕ್ಕೆ ತಕ್ಕಷ್ಟು ಉತ್ತಮವಾಗಿ ದೇವರಿಗೆ ವಿಧೇಯರಾಗಿದ್ದೀರಿ, ಆದರೆ ಸ್ವತಃ ನಿಮ್ಮ ಉತ್ತಮವಾದದ್ದೇ ಸಾಕಾಗುವದಿಲ್ಲ. ನೀವು ದೇವರ ಚಿತ್ತವನ್ನು ಮಾಡಿದ್ದರೆ, ಯೇಸು ನಿಮ್ಮ ಪಕ್ಷದಲ್ಲಿರುವನೆಂಬುದನ್ನು ಗ್ರಹಿಸಿಕೊಳ್ಳುವದು ಅದ್ಭುತವಾಗಿರುತ್ತದಲ್ಲವೇ? ಯೇಸು ನಿಮ್ಮ ಪಕ್ಕದಲ್ಲಿ ನಿಲ್ಲುವನು, ಮೊಳೆಯ ಘಾಯದ ಗುರುತುಗಳುಳ್ಳ ಕೈಗಳು ಮತ್ತು ಆತನ ಹಣೆಯ ಮೇಲೆಯೂ ಪಕ್ಕೆಗಳಲ್ಲಿಯೂ ಘಾಯಗಳೊಂದಿಗೆ ನಿಂತಿರುವನು-ನಮಗೆ ಮಾಡಲಾಗದ್ದನ್ನು

ಮಾಡುವದಕ್ಕಾಗಿ ಯೇಸು ಮರಣಿಸಿದನು-*ನಾವು* ಜೀವಿಸುವಂತಾಗಲು ಯೇಸು ಬಾಧೆಗಳನ್ನು ಅನುಭವಿಸಿದನು.

*ದೇವರು ನಿರಂತರವಾಗಿ ನಮಗೆ ಸಹಾಯ ಮಾಡುವನು.* ನಮಗೆ ಕೇವಲ ಕ್ರೈಸ್ತರಾಗುವದಕ್ಕೆ ಮಾತ್ರವೇ ದೇವರ ಕೃಪೆಯ ಅಗತ್ಯವಿರುವದಿಲ್ಲ; ಕ್ರೈಸ್ತ ಜೀವಿತಗಳನ್ನು ನಡಿಸುವದಕ್ಕೆ ಸಹ ನಮಗೆ ಆತನ *ಕೃಪೆಯ* ಅಗತ್ಯವಿರುತ್ತದೆ. ನಾವು ಆತನಿಗೋಸ್ಕರ ಜೀವಿಸುವದಕ್ಕೆ ಉತ್ತಮ ಪ್ರಯತ್ನವನ್ನು ಮಾಡುವದಾದರೆ ಆ ಕೃಪೆಯು ಮುಂದುವರೆಯುವದು. ಪೌಲನಿಗೆ ಶರೀರದಲ್ಲಿ ಒಂದು ಮುಳ್ಳು ಇರುವಂಥ ವೇಳೆಯಲ್ಲಿ ಪೌಲನು ಅದನ್ನು ಸಹಿಸಿಕೊಳ್ಳಲು ಶಕ್ತನಾಗುವಂತೆ ನನ್ನ ಕೃಪೆಯೇ ನಿನಗೆ ಸಾಕು ಎಂದು ದೇವರು ಅವನಿಗೆ ಹೇಳಿದನು (2 ಕೊರಿಂಥ 12:9). 2 ಪೇತ್ರ 3:18ರಲ್ಲಿ, "ಕೃಪೆಯಲ್ಲಿಯೂ ನಮ್ಮ ಕರ್ತನಾದ ಯೇಸು ಕ್ರಿಸ್ತನ ವಿಷಯವಾದ ಜ್ಞಾನದಲ್ಲಿಯೂ *ಅಭಿವೃದ್ಧಿ* ಹೊಂದುತ್ತಾ ಇರುವ" ಅಗತ್ಯವಿದೆಯೆಂದು ಪೇತ್ರನು ಹೇಳಿದನು (ಒತ್ತಿ ಹೇಳಿದ್ದು ನನ್ನದು).

*ಮುಕ್ತಾಯ.* ಋಣಾತ್ಮಕವಾಗಿ, ಕೃಪೆಯಿಂದ ರಕ್ಷಣೆ ಎಂಬುದರ ಅರ್ಥವು ದೇವರೇ ಎಲ್ಲವನ್ನೂ ಮಾಡುತ್ತಾನೆ, ಮನುಷ್ಯನು ಏನನ್ನೂ ಮಾಡಬೇಕಾಗಿಲ್ಲ ಎಂದಾಗಿರುವದಿಲ್ಲ. ನಾವು ಕೃಪೆಯಿಂದ ರಕ್ಷಣೆ ಹೊಂದಬೇಕೆಂದರೆ, ದೇವರು ನಮಗೆ ಮಾಡಬೇಕೆಂದು ಹೇಳುವದೆಲ್ಲವನ್ನೂ ಮಾಡಬೇಕಾಗಿರುತ್ತದೆ. ನಾವು ಯೇಸುವಿನಲ್ಲಿ ನಂಬಿಕೆಯಿಡಬೇಕು (ಯೋಹಾನ 3:16). ನಾವು ನಮ್ಮ ಪಾಪಗಳಿಗಾಗಿ ಪಶ್ಚಾತ್ತಾಪಪಡಬೇಕು (ಲೂಕ 13:3). ನಾವು ಯೇಸುವಿನಲ್ಲಿ ನಮ್ಮ ನಂಬಿಕೆಯನ್ನು ಅರಿಕೆ ಮಾಡಬೇಕು (ಮತ್ತಾಯ 10:32). ಪಾಪಗಳು ಪರಿಹಾರವಾಗುವದಕ್ಕಾಗಿ ನಾವು ದೀಕ್ಷಾಸ್ನಾನ (ನೀರಿನಲ್ಲಿ ಮುಳುಗಿ) ಮಾಡಿಸಿಕೊಳ್ಳಬೇಕು (ಅಪೊಸ್ತಲರ ಕೃತ್ಯಗಳು 2:38). ನಾವು ನಂಬಿಗಸ್ತವಾದ ಕ್ರೈಸ್ತ ಜೀವಿತಗಳನ್ನು ನಡಿಸಬೇಕು (ಪ್ರಕಟಣೆ 2:10).

ಧನಾತ್ಮಕವಾಗಿ, ಕೃಪೆಯಿಂದ ರಕ್ಷಣೆ ಎಂಬುದು ಹೇಳುವದೇನೆಂದರೆ ನಾವು ನಮಗೆ ಸಾಧ್ಯವಾದದ್ದನ್ನೆಲ್ಲಾ ಮಾಡಿದಾಗ್ಯೂ, ನಾವು ಆಗಲೂ "ಪ್ರಯೋಜನವಿಲ್ಲದ ಆಳುಗಳು" ಆಗಿರುತ್ತೇವೆ (ಲೂಕ 17:10)-ಆದರೆ ದೇವರು ನಮ್ಮನ್ನು ಎಷ್ಟೋ ಪ್ರೀತಿಸಿ ನಾವು ರಕ್ಷಣೆ ಹೊಂದುವಂತಾಗಲು ತನ್ನ ಒಬ್ಬನೇ ಮಗನನ್ನು ನಮಗೋಸ್ಕರ ಮರಣಿಸುವದಕ್ಕೆ ಕಳುಹಿಸಿ ಕೊಟ್ಟನು! ನಾವು ಕೃಪೆಯಿಂದ ರಕ್ಷಣೆ ಎಂಬುದರ ನಿಜವಾದ ಅರ್ಥವೇನೆಂಬುದನ್ನು ಗ್ರಹಿಸಿಕೊಳ್ಳುವದಾದರೆ, ದೇವರಿಗೆ ವಿಧೇಯರಾಗುವದಕ್ಕೂ ಕರ್ತನಿಗೆ ನಮ್ಮ ಜೀವಿತಗಳನ್ನು ಸಮರ್ಪಿಸಿಕೊಳ್ಳುವದಕ್ಕೂ ನಾವು ಸ್ವಲ್ಪವೂ ಸಂಕೋಚಪಡುವದಿಲ್ಲ!

New Orleans ಪಟ್ಟಣದಲ್ಲಿ, ಗತಕಾಲದ ಗುಲಾಮರ ಮಾರುಕಟ್ಟೆಯನ್ನು ಸಂರಕ್ಷಿಸಿಡಲಾಗಿದೆ. ಈಗಲೂ ಅಲ್ಲೊಂದು ನಾಲ್ಕುಗೋಡೆಯ ಒಂದು ಕೋಣೆಯು ನಿಂತಿರುತ್ತದೆ, ಅಲ್ಲಿ ಗುಲಾಮರನ್ನು ಪಶುಗಳ ರೀತಿಯಲ್ಲಿ ಮಾರಾಟ ಮಾಡಲಾಗುತ್ತಿತ್ತು. ಅಲ್ಲಿರುವ ಒಂದು ಫಲಕವು ಈ ಕೆಳಗಿನ ಕಥೆಯನ್ನು ಹೇಳುತ್ತದೆ. ಒಂದು ಸಂದರ್ಭದಲ್ಲಿ ಅಲ್ಲಿ ಭೇಟಿ ಕೊಟ್ಟಿದ್ದಂಥ ಒಬ್ಬ ಪರದೇಶಸ್ಥನು ಇನ್ನೇನು ಮಾರಾಟವಾಗಬೇಕಿದ್ದ ಒಬ್ಬ ಚಿಕ್ಕ ಯುವತಿಯನ್ನು ಕಂಡನು. ಆಕೆಯು ಅಳುತ್ತಾ ನಿಂತಿದ್ದಳು. ಸಾಲಿನಲ್ಲಿದ್ದ ಇತರರು

ಹೆಮ್ಮೆಯಿಂದ ಅಥವಾ ಉದಾಸೀನತೆಯಿಂದ ನಿಂತಿದ್ದರು, ಆದರೆ ಹರಾಜುಗಾರನು ಸುತ್ತಿಗೆಯನ್ನು ಮೇಜಿಗೆ ಗುದ್ದಿದ ಪ್ರತಿ ಸಾರಿಯೂ ಈ ಯುವತಿಯು ಬಿಕ್ಕಿ ಬಿಕ್ಕಿ ಅಳುತ್ತಿದ್ದಳು.

ಈ ಪರದೇಶಸ್ಥನು ವಿಚಾರಿಸಿದನು. ಆಕೆಯು ಒಂದು ಉತ್ತಮ ಮನೆಯಲ್ಲಿ ಬೆಳೆಸಲ್ಪಟ್ಟವಳು ಮತ್ತು ದಯೆಯಿಂದ ನಡಿಸಿಕೊಳ್ಳಲ್ಪಟ್ಟವಳಾಗಿದ್ದಳು ಎಂಬ ವಿಚಾರವನ್ನು ಆತನು ತಿಳಿದುಕೊಂಡನು. ಹೇಗೂ, ಆಕೆಯ ಮಾಲಿಕನು ದಿವಾಳಿಯಾಗಿದ್ದನು ಮತ್ತು ಆತನ ಸ್ವತ್ತುಗಳೆಲ್ಲವೂ ಮಾರಾಟ ಮಾಡಲ್ಪಟ್ಟಿದ್ದವು. ಪರದೇಶಸ್ಥನು ಈ ಯುವತಿಯ ಬೆಲೆ ಏನೆಂದು ಕೇಳಿದನು; ಅದು ದೊಡ್ಡ ಮೊತ್ತವಾಗಿದ್ದಾಗ್ಯೂ ಆತನು ಅದನ್ನು ತಕ್ಷಣವೇ ಸಂದಾಯ ಮಾಡಿದನು. ಬಳಿಕ ಆತನು ಸಹಿ ಹಾಕಲ್ಪಟ್ಟ ಕರಾರು ಪತ್ರವನ್ನು ತೆಗೆದುಕೊಂಡು ಆಕೆಯ ಕೈಗೆ ಕೊಟ್ಟನು. ಆತನು ಆಕೆಗೆ, "ಇದು ನಿನಗೆ ಸೇರಿದ್ದು. ನೀನು ಸ್ವತಂತ್ರಳು" ಎಂದು ಹೇಳಿದನು. ಮೊದಮೊದಲು ಆಕೆಗೆ ಆತನು ಏನು ಹೇಳುತ್ತಿದ್ದಾನೆಂಬುದು ಅರ್ಥವಾಗಲಿಲ್ಲ, ಆದರೆ ನಂತರ ಆತನು ಏನು ಹೇಳುತ್ತಿದ್ದಾನೆಂಬುದನ್ನು ಆಕೆಯು ಗ್ರಹಿಸಿಕೊಂಡಳು. ಆ ಮನುಷ್ಯನು ಹೊರಡಲು ಸಿದ್ಧನಾದಾಗ, ಆಕೆಯು ಅವನ ಪಾದಕ್ಕೆ ಬಿದ್ದು, "ನಾನು ನನ್ನ ಜೀವಿತಕಾಲವೆಲ್ಲಾ ನಿನ್ನ ಸೇವೆ ಮಾಡಿಕೊಂಡಿರುವೆನು!" ಎಂದು ಹೇಳಿದಳು. ವರ್ಷಗಳ ಬಳಿಕ, ಜನರು ಈ ಹರ್ಷಹೃದಯವುಳ್ಳ ಸ್ತ್ರೀಯ ಸ್ವಯಂಪ್ರೇರಿತ ಹಾಗೂ ಪ್ರೀತಿಯ ಸೇವೆಯ ಬಗ್ಗೆ ಮಾತಾಡಿದಾಗ, ಆಕೆಯು ಹೇಳುತ್ತಿದ್ದದ್ದು ಇಷ್ಟೇ, "ಆತನು ನನ್ನನ್ನು ಬಿಡುಗಡೆಗೊಳಿಸಿದನು."

ದೇವರು ನಿನ್ನನ್ನು ಪ್ರೀತಿಸುತ್ತಾನೆ. ಯೇಸು ನಿನಗಾಗಿ ಮರಣಿಸಿದನು. ನೀವು ನಿಮ್ಮ ಪ್ರೀತಿಪೂರ್ವಕ ವಿಧೇಯತೆ ಹಾಗೂ ಸೇವೆಯ ಮೂಲಕ ಆ ಕೃಪೆಯನ್ನು *ಸ್ವೀಕರಿಸಿಕೊಳ್ಳುವಿರೆಂದು* ನಾನು ನಿರೀಕ್ಷಿಸುತ್ತೇನೆ ಮತ್ತು ಪ್ರಾರ್ಥಿಸುತ್ತೇನೆ.

---

**ಅಡಿ ಟಿಪ್ಪಣಿಗಳು**

[1]Richard Rogers, *Paid in Full: A Commentary on Romans* (Lubbock, Tex.: Sunset Institute Press, 2002), 86. [2]R. C. Bell, *Studies in Romans* (Austin, Tex.: Firm Foundation Publishing House, 1957), 49. [3]Dietrich Bonhoeffer, *The Cost of Discipleship*, rev. and unabr. ed. (New York: The Macmillan Co., 1963), 45. [4]Ibid., 47. [5]Jim Hylton, *Just Dying to Live* (Kalamazoo, Mich.: Master's Press, 1976), 49. [6]John R. W. Stott, *The Message of Romans: God's Good News for the World*, The Bible Speaks Today (Downers Grove, Ill.: Inter-Varsity Press, 1994), 168 (emphasis added). [7]*The Analytical Greek Lexicon* (London: Samuel Bagster & Sons, 1971), 3. [8]Douglas J. Moo, *Romans*, The NIV Application Commentary (Grand Rapids, Mich.: Zondervan Publishing House, 2000), 196. [9]Stott, 173. [10]Moo, 196 (emphasis added).

[11]F. F. Bruce, *The Letter of Paul to the Romans*, 2d ed., The Tyndale New Testament Commentaries (Grand Rapids, Mich.: Wm. B. Eerdmans Publishing Co., 1985), 128.

[12]F. F. Bruce, *Commentary on the Book of Acts*, The New International Commentary on the New Testament (Grand Rapids, Mich.: Wm. B. Eerdmans Publishing Co., 1954), 77. [13]“ಕ್ರಿಸ್ತನಲ್ಲಿ” ಸಿಕ್ಕುವ ಆಶೀರ್ವಾದಗಳ ಪಟ್ಟಿಯನ್ನು ಈ ಮುಂದಿನ ಪುಸ್ತಕದಲ್ಲಿ ಕೊಡಲಾಗಿರುತ್ತದೆ: Jimmy Allen, *Survey of Romans*, 7th ed. (Searcy, Ark.: By the author, 1994), 64–65. [14]William Barclay, *The Letter to the Romans*, rev. ed., The Daily Study Bible (Philadelphia: Westminster Press, 1975), 86. [15]James Macknight, *A New Literal Translation, from the Original Greek of All the Apostolical Epistles with a Commentary and Notes* (N.p.: n.d.; reprint, Grand Rapids, Mich.: Baker Book House, 1984), 84. [16]Barclay, 84. [17]Macknight, 85. [18]Anders Nygren, *Commentary on Romans* (Philadelphia: Fortress Press, 1949), 233–34. [19]Moo, 204; James D. G. Dunn, *Baptism in the Holy Spirit* (London: SCM, 1970), 145. [20]Bruce, Romans, 129.

[21]Walter W. Wessel, Notes on Romans, *The NIV Study Bible*, ed. Kenneth Barker (Grand Rapids, Mich.: Zondervan Publishing House, 1985), 1713. [22]Leon Morris, *The Epistle to the Romans* (Grand Rapids, Mich.: Wm. B. Eerdmans Publishing Co., 1988), 249. [23]Walter Bauer, *A Greek-English Lexicon of the New Testament and Other Early Christian Literature*, 3d ed., rev. and ed. Frederick W. Danker (Chicago: University of Chicago Press, 2000), 960. [24]ಇಲ್ಲಿ ಭವಿಷ್ಯತ್ಕಾಲವು ಉಪಯೋಗಿಸಲ್ಪಟ್ಟಿರುವದರಿಂದ (“ಮಾರ್ಪಡುವೆವು”), ಕ್ರಿಸ್ತನು ಬರುವಾಗ ಸಂಭವಿಸುವ ನಮ್ಮ ಪುನರುತ್ಥಾನವನ್ನು ಪೌಲನು ಮನಸ್ಸಿನಲ್ಲಿಟ್ಟುಕೊಂಡು ಬರೆಯುತ್ತಿದ್ದಾನೆಂದು ಅನೇಕ ಲೇಖಕರು ನಂಬುತ್ತಾರೆ (ನೋಡಿರಿ 1 ಕೊರಿಂಥ. 15:35–58); ಆದರೆ ಸನ್ನಿವೇಶವು ನಾವು ದೀಕ್ಷಾಸ್ನಾನದ ನೀರಿನಿಂದ ಎದ್ದು ಬರುವದನ್ನು ಸೂಚಿಸುವದಾಗಿರುತ್ತದೆ. ಬಹುಶಃ ನಾವು ದೀಕ್ಷಾಸ್ನಾನ ಮಾಡಿಸಿಕೊಳ್ಳುವಾಗ ಹೊಸ ಜೀವಿತಕ್ಕಾಗಿ ಎಬ್ಬಿಸಲ್ಪಡುತ್ತೇವೆಂಬ ಖಚಿತತೆಯನ್ನು ಒತ್ತಿಹೇಳುವದಕ್ಕಾಗಿ ಈ ಮಾತುಗಳನ್ನು ಉಪಯೋಗಿಸಿರಬಹುದಾಗಿದೆ. [25]Stott, 176. [26]D. Stuart Briscoe, *Romans*, The Communicator’s Commentary (Waco, Tex.: Word Books, 1982), 135. “A.D.” stands for the Latin phrase *Anno Domini* (“in the year of [our] Lord”). [27]Adapted from David F. Burgess, comp., *Encyclopedia of Sermon Illustrations* (St. Louis: Concordia Publishing House, 1988), 55. [28]Talmud *Shabbath* 151b. [29]Bruce Barton, David Veerman, and Neil Wilson, *Romans*, Life Application Bible Commentary (Wheaton, Ill.: Tyndale House Publishers, 1992), 118. [30]Morris, 255.

[31]W. E. Vine, Merrill F. Unger, and William White, Jr., *Vine’s Complete Expository Dictionary of Old and New Testament Words* (Nashville: Thomas Nelson Publishers, 1985), 445. [32]James R. Edwards, *Romans*, New International Biblical Commentary (Peabody, Mass.: Hendrickson Publishers, 1992), 164. [33]Bauer, 458. [34]Ibid., 778. [35]Edwards, 165. [36]Vine, 329. Morris, ಇನ್ನೊಂದೆಡೆಯಲ್ಲಿ ಹೀಗೆ ವಾದಿಸುತ್ತಾರೆ, “ಸನ್ನಿವೇಶದಲ್ಲಿ ಹೋರಾಟವನ್ನು ಸೂಚಿಸುವ ಯಾವ ಸುಳಿವೂ ಇರುವದಿಲ್ಲ” (Morris, 258, n. 62). [37]Barclay, 87. [38]J. D. Thomas, *Romans*, The Living Word (Austin, Tex.: R. B. Sweet Co., 1965), 44. [39]Jim McGuiggan, *The Book of Romans*, Looking Into The Bible Series (Lubbock, Tex.: Montex Publishing Co., 1982), 201. [40]Moo, 200.

[41]Bell, 56. [42]ಈ ಚರ್ಚೆಯಲ್ಲಿ ಮೋಶೆಯ ಧರ್ಮಶಾಸ್ತ್ರವೇ ಪೌಲನ ಮನಸ್ಸಿನಲ್ಲಿ ಅಗ್ರಸ್ಥಾನದಲ್ಲಿತ್ತೆಂಬದರಲ್ಲಿ ಯಾವ ಸಂಶಯವೂ ಇಲ್ಲ (ನೋಡಿರಿ 7:7); ಆದರೆ “ಧರ್ಮಶಾಸ್ತ್ರ” ಎಂಬ ಗ್ರೀಕ್ ಪದದ ಮುಂದುಗಡೆಯಲ್ಲಿ ಯಾವದೇ ನಿಖರ ಲೇಖನ (“ದಿ”) ಎಂಬುದಿರುವದಿಲ್ಲ, ಆದ್ದರಿಂದ ಇಲ್ಲಿ ಅನ್ವಯಿಕೆಯು ಮೋಶೆಯ ಧರ್ಮಶಾಸ್ತ್ರ ಎಂಬುದಕ್ಕಿಂತಲು ವಿಸ್ತಾರವಾಗಿರುತ್ತದೆ. [43]Rogers, 92; McGuiggan, 202; James Burton Coffman, *Commentary on Romans* (Austin, Tex.: Firm Foundation Publishing House, 1973), 238. [44]Bruce, *Romans*, 134. [45]Moo, 210. [46]Bauer, 1020.

[47]1 ಕೊರಿಂಥ 15:3ರಲ್ಲಿನ "ತಿಳಿಸಿಕೊಟ್ಟೆನು" ಎಂಬುದು ರೋಮಾ 6:17ರಲ್ಲಿ "ಕಲಿಸಲ್ಪಟ್ಟ" ಎಂಬದರ ಗ್ರೀಕ್ ಅನುವಾದಿತ ಒಂದೇ ಪದದಿಂದಲೇ ಬಂದದ್ದಾಗಿದೆಯೆಂಬದನ್ನು ಗಮನಕ್ಕೆ ತಂದುಕೊಳ್ಳುವದು ಪ್ರಾಮುಖ್ಯವಾಗಿರುತ್ತದೆ. [48]Barton, Veerman, and Wilson, 125. [49]Barclay, 89. [50]Macknight, 87.

[51]Edwards, 173. [52]Halford E. Luccock, *Preaching Values in the Epistles of Paul*, vol. 1, *Romans and First Corinthians* (New York: Harper & Brothers, 1959), 43. [53]Adapted from McGuiggan, 204. [54]Barclay, 91; see Edwards, 175. [55]ಮತ್ತೊಂದಾವರ್ತಿ ಪೌಲನು ಇಲ್ಲಿ ದೇವರ ಆಶೀರ್ವಾದಗಳೆಲ್ಲವೂ "*ಕ್ರಿಸ್ತನಲ್ಲಿ*" ಯೇ ಎಂಬದಾಗಿ ತಿಳಿಸುತ್ತಾನೆ (6:3ರ ಮೇಲಿನ ವ್ಯಾಖ್ಯಾನಗಳನ್ನು ನೋಡಿರಿ). [56]ಈ ವಿಚಾರವು Hylton ನಿಂದ ತೆಗೆದುಕೊಳ್ಳಲಾಗಿದೆ, 49. [57]F. B. Meyer, *Back to Bethel: Separation from Sin, and Fellowship with God* (Chicago: Bible Institute Colportage Association, 1901), 78. Augustine (A.D. 354–ಇತನು ಲ್ಯಾಟಿನ್ ಹಿನ್ನಲೆಯ ಪ್ರಸಿದ್ಧ ಸಭಾ ಪಿತೃವಾಗಿದ್ದನು). [58]Briscoe, 131; Bruce, *Romans*, 127. [59]Sermon preached by Glen Pace at Judsonia church of Christ, Judsonia, Arkansas, n.d. (c. 2001). [60]Thomas, 43.

[61]Dale Hartman, ರಲ್ಲಿ ಬೋಧಿಸಲ್ಪಟ್ಟ ಪ್ರಸಂಗ Eastside church of Christ, Midwest City, Oklahoma, 7 March 2004 ರಿಂದ ಉಲ್ಲೇಖಿಸಲ್ಪಟ್ಟದ್ದು. [62]William S. Banowsky, "The Vaccine Against Death," *The Now Generation and Other Sermons* (Austin, Tex.: Sweet Publishing Co., 1969), 28. [63]Barclay, 83–84. ನಾವು Barclayಯ ಪದಗಳನ್ನು ಒಂದು ರೀತಿ ತಿದ್ದಬಹುದು, ಆದರೆ ಅದು ದೀಕ್ಷಾಸ್ನಾನದ ಕುರಿತಾಗಿ ಹೊಸ ಒಡಂಬಡಿಕೆಯು ತಿಳಿಸುವ ಅರ್ಥಕ್ಕೆ ಹತ್ತಿರವಾದದ್ದಾಗುತ್ತದೆ. [64]Jim Townsend, *Romans: Let Justice Roll Down* (Elgin, Ill.: David C. Cook Publishing Co., 1988), 44. [65]Moo, 211. [66]Briscoe, 140. [67]ರಲ್ಲಿ ಉಲ್ಲೇಖಿಸಲ್ಪಟ್ಟದ್ದು Warren W. Wiersbe, *The Bible Exposition Commentary*, vol. 1 (Wheaton, Ill.: Victor Books, 1989), 533. [68]Adapted from C. Roy Angell, *Baskets of Silver* (Nashville: Broadman Press, 1955), 49–51.